ಕರ್ನಾಟಕ ಸರಕಾರ

ಸಂಕೀರ್ಣ

ಮಕ್ಕಳ ಸಾಹಿತ್ಯ

ಎಂ. ವಿ. ಸೀತಾರಾಮಯ್ಯ

ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ 100

ಮಕ್ಕಳ ಸಾಹಿತ್ಯ

(ಸಂಕಲನ)

ಸಂಪಾದಕರು

ಎಂ. ವಿ. ಸೀತಾರಾಮಯ್ಯ

ನೆರವು

ಡಾ|| ಜಿ. ಎ. ಜಾಲಿಹಾಳ

ವಿಶ್ವ ಕನ್ನಡ ಸಮ್ಮೇಳನ
14-3 ಎ, ನೃಪತುಂಗ ರಸ್ತೆ
ಬೆಂಗಳೂರು-560 002

Vishwa Kannada Sahithya Male

MAKKALA SAHITYA
Edited by Sri M. V. Seetha Ramaiah

Published by K. Jayacharya, K.A.S., Additional Director, Directorate of Kannada & Culture (Vishwa Kannada Sammelana),
14/3, Nrupathunga Road, Bangalore-560 002.

First Edition 1983, 5000 Copies

ಬೆಲೆ : ಐದು ರೂಪಾಯಿಗಳು

ಮುದ್ರಣ :
ಅಶ್ವಥ್ ಪ್ರಿಂಟರ್ಸ್
ಜಯನಗರ
ಬೆಂಗಳೂರು - 82

ಆರ್. ಗುಂಡೂರಾವ್
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು

ದಿನಾಂಕ : ೧೮-೯-೮೨

ಸಂಕಲ್ಪ....ಸಿದ್ಧಿ

ಸುಮಾರು ಎರಡು ಸಾವಿರ ವರ್ಷಗಳಿಗೂ ಹೆಚ್ಚು ದೀರ್ಘವಾದ ಐತಿಹಾಸಿಕ ಪರಂಪರೆ ಕನ್ನಡನಾಡಿನದು. ಈ ಅವಧಿಯಲ್ಲಿ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಗಳು ಸಮೃದ್ಧವಾಗಿ, ಶ್ರೀಮಂತವಾಗಿ ಬೆಳೆದು, ಈ ನಾಡಿನ ಇತಿಹಾಸವನ್ನು ಭವ್ಯವಾಗಿಸಿವೆ.

ಒಂದು ನಾಡಿನ ಅಂತಃಸತ್ವ ಅಡಕವಾಗಿರುವುದೇ ಅದರ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ. ಈ ನೆಲೆಗಟ್ಟು ಭದ್ರವಾಗಿರಬೇಕಾದರೆ ಸಾಂಸ್ಕೃತಿಕ ಪರಂಪರೆ ಉತ್ಕರ್ಷಕ್ಕೆ ಏರಲು ಔನ್ನತ್ಯ ಸಾಧಿಸಲು ನಿರಂತರವಾಗಿ ಪ್ರಯತ್ನಗಳು ನಡೆಯಬೇಕು.

ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆಸೆದುಕೊಂಡಿದ್ದರೂ ಕನ್ನಡ ತನ್ನದೇ ಆದ ವಿಶಿಷ್ಟ ಸಂಸ್ಕಾರಗಳನ್ನು, ಸಂಸ್ಕೃತಿಯನ್ನು ಹೊಂದಿದೆ.

ಕನ್ನಡ ನಾಡಿನ ಭವ್ಯ ಪರಂಪರೆಯನ್ನು ಜಾಗತಿಕ ಹಿನ್ನೆಲೆಯಲ್ಲಿ ಚಿತ್ರಿಸಿ, ವಿಶ್ವಕ್ಕೆ ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಸಾರುವ ಸದುದ್ದೇಶದಿಂದ ಪ್ರಥಮ ವಿಶ್ವ ಕನ್ನಡ ಸಮ್ಮೇಳನವನ್ನು ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ಕೇಂದ್ರವಾದ ಮೈಸೂರಿನಲ್ಲಿ ಏರ್ಪಡಿಸಿದ್ದೇವೆ. ಇದೊಂದು ಚರಿತ್ರಾರ್ಹವಾದ ಸಂದರ್ಭವೆಂದು ನನ್ನ ನಂಬಿಕೆ. ಈ ಚರಿತ್ರಾರ್ಹ ಸಮ್ಮೇಳನ ಸಾರ್ಥಕವಾಗಲು ಮತ್ತು ಬಹುಕಾಲ ಇದರ

ಸವಿ ನೆನಪು ಉಳಿಯಲೀ ಹಲವು ಯೋಜನೆಗಳನ್ನು ರೂಪಿಸಿದ್ದೇವೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಗೆ ಒದಗಿಸುವುದು ಈ ಯೋಜನೆಗಳಲ್ಲಿ ಒಂದು. ಇದರಂತೆ ಒಂದುನೂರಾ ಎರಡು ಕೃತಿಗಳನ್ನು, ಹದಿನೇಳು ಸಂಕಲನಗಳನ್ನು ಆಯ್ಕೆ ಮಾಡಿ ಪ್ರಕಟಿಸುತ್ತಿದ್ದೇವೆ. ಈ ಸಾಹಿತ್ಯ ಮಾಲಿಕೆಯಲ್ಲಿ ಕವನ, ಕಾದಂಬರಿ, ನಾಟಕ, ವಿಚಾರ ಸಾಹಿತ್ಯ ಕೃತಿಗಳಲ್ಲದೆ ಕನ್ನಡ ಸಾಹಿತ್ಯದ ಸತ್ವವನ್ನು, ವೈವಿಧ್ಯವನ್ನು ಪ್ರತಿಫಲಿಸುವ ವಿವಿಧ ಬಗೆಯ ಸಂಕಲನಗಳೂ ಇವೆ. ಅನ್ಯಭಾಷಿಕರಿಗೆ ಕನ್ನಡ ಸಾಹಿತ್ಯದ ಕಂಪು ಬೀರುವಂತೆ ಕೆಲವು ಆಯ್ದ ಕೃತಿಗಳ ಇಂಗ್ಲಿಷ್ ಭಾಷಾಂತರವನ್ನು ಕೂಡ ಪ್ರಕಟಿಸುತ್ತಿದ್ದೇವೆ. ಸಾಹಿತ್ಯಮಾಲೆಯ ಈ ಕೃತಿರತ್ನಗಳನ್ನು ಸಹೃದಯ ವಾಚಕರು ಓದಿ ಆಸ್ವಾದಿಸಿದರೆ ನಮ್ಮ ಶ್ರಮ ಸಾರ್ಥಕ ; ಸಮ್ಮೇಳನ ಅರ್ಥಪೂರ್ಣವಾಗುವುದೆಂದು ನನ್ನ ಅಭಿಲಾಷೆ.

ಈ ಕೃತಿಗಳನ್ನು ಆಯ್ಕೆ ಮಾಡುವಲ್ಲಿ ಸಾಹಿತ್ಯ ಸಮಿತಿಯ ಪರಿಣತ ಸದಸ್ಯರು ಸಾಕಷ್ಟು ಶ್ರಮಿಸಿದ್ದಾರೆ. ಸುದೈವದಿಂದ ಕನ್ನಡದಲ್ಲಿ ಪ್ರತಿಭಾವಂತ ಲೇಖಕರ ಅಮೂಲ್ಯ ಕೃತಿಗಳಿಗೆ ಕೊರತೆ ಇಲ್ಲ. ಈ ಹಿನ್ನೆಲೆಯಲ್ಲಿ ನಿಶ್ಚಿತ ಸಂಖ್ಯೆಯಲ್ಲಿ ಸಾಹಿತ್ಯ ಕೃತಿಗಳನ್ನು ಆಯ್ಕೆ ಮಾಡುವುದು ಸುಲಭದ ಕೆಲಸವಲ್ಲ. ಆದರೂ ಬಹುಜನರಿಗೆ ಒಪ್ಪಿಗೆಯಾಗುವಂತೆ ಸಾಹಿತ್ಯ ಸಮಿತಿ ತನ್ನ ಕರ್ತವ್ಯ ನಿರ್ವಹಿಸಿದೆಯೆಂದು ಭಾವಿಸುತ್ತೇನೆ. ಈ ಸಮಿತಿಗೆ ಕೃತಜ್ಞತೆಗಳನ್ನು ಅರ್ಪಿಸುವುದು ನನ್ನ ಕರ್ತವ್ಯ. ಈ ಕೃತಿಗಳನ್ನು ಪ್ರಕಟಿಸಲು ಅನುಮತಿ ನೀಡಿ, ಲೇಖಕರು ಉಪಕರಿಸಿದ್ದಾರೆ. ಅವರ ಉದಾರ ಉಪಕಾರವನ್ನು ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಈ ಗ್ರಂಥಮಾಲೆ ಕನ್ನಡಿಗರ ಮನಸ್ಸನ್ನು ತಟ್ಟಿ, ಹೃದಯಸ್ಪಂದನ ಮಾಡಿದರೆ ನಮ್ಮ ಸಂಕಲ್ಪಕ್ಕೆ ಸಿದ್ಧಿ ದೊರಕಿದಂತೆ. ಈ ಪ್ರಯತ್ನ 'ನ ಭೂತೋ' ಎಂದು ಹೆಮ್ಮೆಯಿಂದ ಹೇಳಬಲ್ಲೆ. ತಾಯಿ ಭುವನೇಶ್ವರಿ ಈ ಪ್ರಯತ್ನವನ್ನು ಹರಸಿ, ಮಂಗಳವುಂಟುಮಾಡಲೆಂದು ವಿನೀತ ಪ್ರಾರ್ಥನೆ ಸಲ್ಲಿಸುತ್ತೇನೆ.

ರಾ. ಗುಂಡೂರಾವ್

ಮುಖ್ಯಮಂತ್ರಿ

ಪೀಠಿಕೆ

ಭಾರತವನ್ನು ಗಮನಿಸಿ ಹೇಳುವುದಾದರೆ ಮಕ್ಕಳ ಸಾಹಿತ್ಯ ಪರಂಪರೆ ಬಹಳ ಪ್ರಾಚೀನವಾದದ್ದು ; ಅದು ವಿಷ್ಣುಶರ್ಮನ ಪಂಚತಂತ್ರದಿಂದ ಮೊದಲಾಯಿತು ಎಂದು ಹೇಳಬಹುದು. ಅದು ರಾಜಕುಮಾರರಿಗೆ ರಾಜನೀತಿಯನ್ನು ಕಥೆಗಳ ರೂಪದಲ್ಲಿ ಬೋಧಿಸುವ ಒಂದು ಮಹತ್ವದ ಗ್ರಂಥ. ಇದರ ಮಹತ್ವ ಇರುವುದು ಅದು ಬೋಧಿಸುವ ನೀತಿಗಿಂತ ಹೆಚ್ಚಾಗಿ ಅದನ್ನು ಹೇಳಿರುವ ಕಲಾತ್ಮಕ ರೀತಿಯಲ್ಲಿ. ಇಲ್ಲಿಯ ಕತೆಗಳಲ್ಲಿ ಕಾಡುಪ್ರಾಣಿಗಳು ತಮ್ಮ ಸ್ವಾಭಾವಿಕ ಗುಣದೊಂದಿಗೆ ಮನುಷ್ಯರ ನಡವಳಿಕೆಯನ್ನು ಅನುಕರಿಸುತ್ತ, ಮಕ್ಕಳ ಮನಸ್ಸನ್ನು ಸೆರೆಹಿಡಿಯುವ ಒಂದು ಕಲ್ಪನಾ ಪ್ರಪಂಚವನ್ನು ಸೃಷ್ಟಿಸುತ್ತವೆ. ರಾಜಕುಮಾರರು ಮಾತ್ರವಲ್ಲದೆ ಸ್ವಲ್ಪ ದೊಡ್ಡವರಾದ ಎಲ್ಲ ಮಕ್ಕಳಿಗೂ ಅಗತ್ಯವಾದ ಲೋಕವ್ಯವಹಾರ ಜ್ಞಾನವನ್ನೂ ನೀತಿಯನ್ನೂ ಸ್ವಾರಸ್ಯವಾದ ಪ್ರಾಣಿಕಥೆಗಳ ಮೂಲಕ ಬೋಧಿಸಬೇಕೆಂಬುದು ಪಂಚತಂತ್ರದ ಉದ್ದೇಶ. ಈಸೋಪನ ಕಥೆಗಳು ಪಂಚತಂತ್ರದಿಂದ ಪ್ರಭಾವಿತವಾಗಿವೆ ; ಪ್ರಪಂಚದ ಎಲ್ಲ ಮುಖ್ಯ ಭಾಷೆಗಳಲ್ಲೂ ಅವತರಿಸಿವೆ, ಮಕ್ಕಳ ಸಾಹಿತ್ಯಕ್ಕೆ ಪಂಚತಂತ್ರವೇ ಗಂಗೋತ್ರಿ. ಸಂಸ್ಕೃತದಲ್ಲಿ ವಿಷ್ಣುಶರ್ಮನಲ್ಲದೆ ವಸುಭಾಗಭಟ್ಟನ ಪಂಚತಂತ್ರ ಒಂದಿದೆ. ಇದನ್ನು 1031 ರಷ್ಟು ಹಿಂದೆಯೇ ದುರ್ಗಸಿಂಹನು ಕನ್ನಡಕ್ಕೆ ಅನುವಾದಿಸಿದ್ದಾನೆ.

ಮಕ್ಕಳಿಗೆ ಹೇಳುವ ಕಥೆ ಹೇಗಿರಬೇಕು ಎನ್ನುವುದಕ್ಕೆ ಪಂಚತಂತ್ರ ಉತ್ತಮವಾದ ಮಾದರಿ. ಮಕ್ಕಳಿಗೆ ಮೊತ್ತಮೊದಲು ಪರಿಚಯವಾಗುವ ಲೋಕ ಎಂದರೆ ಅವರು ಹುಟ್ಟಿ ಬೆಳೆದ ಮನೆ, ಮನೆಯ ಜನ, ಮನೆಗೂ ಮನೆಯ ಸುತ್ತಮುತ್ತಣ ಪರಿಸರಕ್ಕೂ ಹೊಂದಿ

ಕೊಂಡು ಜೀವಿಸುವ ಪ್ರಾಣಿ ಪ್ರಪಂಚ, ಹಾಗೂ ಸಸ್ಯ ಪ್ರಪಂಚ. ಕಾಡುಪ್ರಾಣಿಗಳ ವಿಷಯವನ್ನು ಮಕ್ಕಳು ಕೇಳಿ ತಿಳಿಯಬೇಕಾದ್ದರಿಂದ ಅವುಗಳ ಬಗ್ಗೆ ಆಸಕ್ತಿ, ಕುತೂಹಲ ಇರುವುದು ಸಹಜ. ಆದ್ದರಿಂದ ಕಾಡು ಪ್ರಾಣಿಗಳಿಗೆ ಸಂಬಂಧಿಸಿದ ಕಥೆಗಳು, ಪದ್ಯಗಳು, ಮಕ್ಕಳಿಗೆ ಹೆಚ್ಚು ಸೊಗಸುತ್ತವೆ.

ಇದೆಲ್ಲವೂ ಹಿಂದಿನ ಕಾಲದ ಕಥಾ ಪ್ರಪಂಚ. ಇಂದಿನ ಮಗು ಮೇಲೆ ವಿವರಿಸಿದ ಪ್ರಪಂಚಕ್ಕೆ ವಿಜ್ಞಾನಯುಗದ ಯಂತ್ರನಾಗರಿಕತೆ ಪ್ರವೇಶಿಸುವುದನ್ನು ಕಾಣುತ್ತದೆ. ಕನ್ನಡವೂ ಸೇರಿದಂತೆ ನಮ್ಮ ದೇಶದ ಯಾವುದೇ ಭಾಷೆಯ ಮಕ್ಕಳ ಸಾಹಿತ್ಯದಲ್ಲಿ ಈ ಎಲ್ಲವೂ ಮಕ್ಕಳು ಕಾಣುವಂಥವು. ಕಾಣದಿದ್ದರೂ ಕೇಳಿ ತಿಳಿಯುವ ವಸ್ತು-ವಿಷಯ.

ಎಲ್ಲ ದೇಶಗಳಲ್ಲೂ 'ಅಡುಗೂಲಜ್ಜಿಯ ಕಥೆಗಳು' ಬೇರೆ ಬೇರೆ ರೂಪಗಳಲ್ಲಿ, ಬೇರೆ ಬೇರೆ ಹೆಸರಿನಲ್ಲಿ ಮಕ್ಕಳ ಮನಸ್ಸಿನ ಮುಂದೆ ಅದ್ಭುತ ರಮ್ಯ ಪ್ರಪಂಚವನ್ನು ತೆರೆದು ತೋರಿಸುತ್ತಿದ್ದುವು. "ಒಂದಾನೊಂದು ಕಾಲದಲ್ಲಿ" ಎಂದು ಪ್ರಾರಂಭವಾಗುತ್ತಿದ್ದ ಈ ಬಗೆಯ ಕಥೆಗಳಲ್ಲಿ ರಾಜಕುಮಾರ-ರಾಜಕುಮಾರಿಯರ, ಬ್ರಹ್ಮರಾಕ್ಷಸ ಭೂತ ಪ್ರೇತಗಳ ಮಂತ್ರವಾದಿಗಳ, ಮಾಟಗಾರರ ವೃತ್ತಾಂತಗಳು, ಅದ್ಭುತ ರಮ್ಯ ಸಾಹಸ ಕಾರ್ಯಗಳು, ಅಲೌಕಿಕ ಸನ್ನಿವೇಶಗಳು ಮಕ್ಕಳ ಮನಸ್ಸನ್ನು ಕಥಾಪ್ರವಾಹದಲ್ಲಿ ಮುಳುಗಿಸಿ ರಂಜಿಸುತ್ತಿದ್ದುವು. ಇಂಥ ಕಥೆಗಳಲ್ಲಿ ಯಾವ ನೀತಿಯೂ ಇಲ್ಲ. ಶುದ್ಧ ಮನರಂಜನೆ ಇವುಗಳ ಗುರಿ. ಈ ಬಗೆಯ ಕಥೆಗಳನ್ನು ಹೇಳುವ ಜನ ಈಗಲೂ ಇದ್ದಾರು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವ ಕೆಲಸ ಆಗಬೇಕು. 'ಅರೇಬಿಯನ್‌ನೈಟ್ಸ್' ಕಥೆಗಳಂತಹ ದೇಶ ವಿದೇಶಗಳ ಮಕ್ಕಳ ಕಥೆಗಳನ್ನು, ಕಾದಂಬರಿಗಳನ್ನು—ಕನ್ನಡದಲ್ಲಿ ಈಗ ಪ್ರಕಟವಾಗಿರುವ 'ರಾಬಿನ್‌ಸನ್ ಕ್ರೂಸೋ', 'ಹವಳದ ದ್ವೀಪ', 'ಪಾತಾಳದಲ್ಲಿ ಪಾಪಚ್ಚಿ' (ಈ ಕೃತಿಯ ಮೊದಲ ಎರಡು ಪ್ರಕರಣಗಳನ್ನು ಈ ಸಂಕಲನದಲ್ಲಿ ಸೇರಿಸಿದೆ), 'ಆಲಿವರ್ ಟ್ವಿಸ್ಟ್', 'ಗಲಿವರನ ಪ್ರವಾಸ', ಇಂತಹ ಶ್ರೇಷ್ಠ ಕೃತಿಗಳನ್ನು-ಕನ್ನಡಕ್ಕೆ ತರಬೇಕಾಗಿದೆ.

ಅಕ್ಬರ್-ಬೀರಬಲ್ಲರ ಕಥೆಗಳು, ತೆನಾಲಿ ರಾಮಕೃಷ್ಣನ ಕಥೆಗಳು ಬುದ್ಧಿಚಾತುರ್ಯಕ್ಕೆ ಸಾಣೆ ಹಿಡಿಯುವಂಥವು ; ಸಹಜವಾದ ತಿಳಿಹಾಸ್ಯದಿಂದ ಮಕ್ಕಳ ಮನಸ್ಸನ್ನು ಪ್ರಸನ್ನಗೊಳಿಸುವಂಥವು ; ನಗೆಯ ಬುಗ್ಗೆಯನ್ನು ಉಕ್ಕಿಸುವಂಥವು.

ಭಾರತ. ರಾಮಾಯಣ, ಅಷ್ಟಾದಶ ಪುರಾಣಗಳು, ಇವೆಲ್ಲವೂ ನಮ್ಮ ದೇಶದ ಆಧ್ಯಾತ್ಮಿಕ, ಧಾರ್ಮಿಕ, ನೈತಿಕ ಮೊದಲಾದ ಜೀವನಮೌಲ್ಯಗಳನ್ನು—ಜೀವನ ಶ್ರದ್ಧೆಯನ್ನು ಎತ್ತಿಹಿಡಿಯುವಂತಹ ಕಥೆ-ಉಪಕಥೆಗಳ ಚಿನ್ನದ ಗಣಿ. ಪಾರಾಯಣ ಪ್ರವಚನ ಸುಕಥನಗಳ ಮೂಲಕ ಹಿರಿಯರಿಗಂತೋ ಕಿರಿಯರಿಗೂ ಎಂದಿನಿಂದಲೂ ಸುಪರಿಚಿತ. ನಮ್ಮ

ದೇಶದ ಎಲ್ಲ ಪ್ರಾಂತಗಳ ಜನಕ್ಕೂ ಅವರವರ ಭಾಷೆಗಳಲ್ಲಿ ಅಲ್ಲಲ್ಲಿಯ ಕವಿಗಳಿಂದ ಈ ಪುರಾಣ ಪ್ರಪಂಚ ಪರಿಚಿತವಾಗಿದೆ. ಕನ್ನಡ ನಾಡಿನಲ್ಲಿ ಭಕ್ತಿಪಂಥಗಳು ಹುಟ್ಟಿಕೊಂಡ ಮೇಲೆ ಹರಿಹರ, ಕುಮಾರವ್ಯಾಸ, ಲಕ್ಷ್ಮೀಶ, ಷಡಕ್ಷರಿಗಳು ಭಕ್ತರ ಕಥೆಗಳನ್ನು ಜನಪ್ರಿಯ ಮಾಡಿದರು ; ಜನತೆಯ ಬದುಕನ್ನು ಹಸನು ಮಾಡಿದರು. ಇವರಾದಿಯಾಗಿ ಎಲ್ಲ ಕವಿಗಳ ಕೃತಿಗಳಿಂದ ಕಥೆಗಳನ್ನು ಸರಳ ಗದ್ಯದಲ್ಲಿ ರಚಿಸುವ ಕೆಲಸ ಆಗಬೇಕು. ಆಗೇ ಇಲ್ಲ ಎಂದಲ್ಲ, ಕ್ರಮಬದ್ಧವಾಗಿ, ಸಮಗ್ರವಾಗಿ ಆಗಬೇಕು.

ಮಹಾಕಾವ್ಯದಲ್ಲಿ ಹದಿನೆಂಟು ಬಗೆಯ ವರ್ಣನೆಗಳು (ಅಷ್ಟಾದಶ ವರ್ಣನೆ) ಇರಬೇಕೆಂದು ಲಾಕ್ಷಣಿಕರು ವಿಧಿಸಿದ್ದಾರೆ. ಮಲ್ಲಿಕಾರ್ಜುನನು 'ಸೂಕ್ತಿಸುಧಾರ್ಣವ'ದಲ್ಲಿಯೂ ಅಭಿನವ ವಾದಿವಿದ್ಯಾನಂದನು 'ಕಾವ್ಯಸಾರ'ದಲ್ಲಿಯೂ ಇವುಗಳನ್ನು ಸಂಗ್ರಹಿಸಿದ್ದಾರೆ. ಇವು ಚಂಪೂ ಕಾವ್ಯಗಳಿಂದ ಆಯ್ದುವು ; ಪ್ರೌಢವಾದವು. ಇವುಗಳಲ್ಲಿಯೂ, ಷಟ್ಪದೀ ಕಾವ್ಯಗಳಲ್ಲಿಯೂ ಬರುವ ವೀರಪುರುಷರ ಕಥಾನಾಯಕರ, ಭಕ್ತರ, ಸಂತರ, ಜನನ ಬಾಲ್ಯಗಳ ವರ್ಣನೆಗಳು ಇಂದಿಗೂ ಬಾಲಕೌಮಾರ ಸಾಹಿತ್ಯದ ಒಂದು ಮುಖ್ಯ ಭಾಗವಾಗಿ ಒದಗಿಬರಬಹುದಾಗಿವೆ. ಉದಾಹರಣೆಗೆ, ಬಸವಪುರಾಣದ ಬಾಲಕ ಬಸವನ ವರ್ಣನೆ, ಸಿದ್ಧರಾಮ ಚಾರಿತ್ರದ ಮುಗ್ಧ ಬಾಲಕ ಸಿದ್ಧರಾಮ, ಜೈಮಿನಿ ಭಾರತದ ಚಂದ್ರಹಾಸನ ಬಾಲ್ಯ (ಈ ಸಂಕಲನದಲ್ಲಿ ಇದು ಸೇರಿದೆ), ಕುಮಾರವ್ಯಾಸ ಭಾರತದಲ್ಲಿ ಪಾಂಡವಾದಿಗಳ ಆಟಪಾಟಗಳ ವರ್ಣನೆ-ಇದೆಲ್ಲ ಇಂದಿಗೂ ಕಿರಿಯ ಮಕ್ಕಳು ಓದಿ ನಲಿಯಬಹುದಾದ ಕಾವ್ಯ ಭಾಗಗಳು. ಹರಿದಾಸರ ಕೃತಿಗಳ, ಕೃಷ್ಣನ ಬಾಲಲೀಲೆಗಳ ಚಿತ್ರಗಳೂ ಸ್ವಾರಸ್ಯವಾದವು. ಇಂಥವು ಎಷ್ಟನ್ನೋ ಆಯ್ದು ತೆಗೆದುಕೊಡಬಹುದು ನಮ್ಮ ಮಕ್ಕಳಿಗೆ ಹಳೆಯ ಸಾಹಿತ್ಯ ರಾಶಿಯಿಂದ.

ಹಳೆಯ ಮೈಸೂರು ಸಂಸ್ಥಾನ, ಮದರಾಸು ಆಧಿಪತ್ಯ, ಬೊಂಬಾಯಿ ಆಧಿಪತ್ಯ, ಕೊಡಗು ಜಿಲ್ಲೆ—ಇವುಗಳನ್ನೊಳಗೊಂಡ ಕರ್ನಾಟಕದಲ್ಲಿ ಬ್ರಿಟಿಷ್ ಆಡಳಿತದ ಪ್ರಭಾವದಿಂದ ಹೊಸ ವಿದ್ಯಾಶಾಲೆಗಳು ಪ್ರಾರಂಭವಾದಾಗ ಆಯಾ ಭಾಗದ ವಿದ್ಯಾ ಇಲಾಖೆಯ ಶಿಕ್ಷಣಾಧಿಕಾರಿಗಳು ಕನ್ನಡ 'ರೀಡರು'ಗಳನ್ನು ಬರೆಯಿಸಿದರು. ಇದಕ್ಕಾಗಿ ಹಳೆಯ ಮೈಸೂರಿನ ಕಡೆ ಚ. ವಾಸುದೇವಯ್ಯನವರು, ಎಂ. ಎಸ್. ಪುಟ್ಟಣ್ಣನವರು ತಿಳಿಯಾದ ಹೊಸಗನ್ನಡ ಗದ್ಯದಲ್ಲಿ ಮಕ್ಕಳಿಗೆ ತಿಳಿವು—ನಲಿವುಗಳನ್ನು ಏಕಕಾಲದಲ್ಲಿ ಒದಗಿಸುವ ಪಾಠಗಳನ್ನು ಒಳಗೊಂಡ ರೀಡರುಗಳನ್ನು ಬರೆದರು. ಆರ್. ನರಸಿಂಹಾಚಾರ್ಯರು ಹಾಸ್ಯ ಪ್ರಧಾನವಾದ 'ನಗೆಗಡಲು' ಎಂಬ ಪುಸ್ತಕವನ್ನು ಬರೆದರು. ರಾಮಾಯಣ, ಭಾರತ, ಪುರಾಣಾದಿಗಳಿಂದ ಸ್ವಾರಸ್ಯವೂ ನೀತಿಬೋಧಕವೂ ಆದ ಕಥಾ ಪ್ರಸಂಗಗಳನ್ನು ಸಂಕಲಿಸಿ ಎರಡು ಮೂರು ಭಾಗಗಳಲ್ಲಿ 'ನೀತಿ ಚಿಂತಾಮಣಿ'ಯನ್ನು ಮಕ್ಕಳ ಕೈಗಿತ್ತರು. ಮಕ್ಕಳ

ಬರವಣಿಗೆಯನ್ನು ಕುದುರಿಸುವ ಕಡೆಗೂ ಲಕ್ಷ್ಯ ಹರಿಯಿತು. 'ಪ್ರಬಂಧ ಮಂಜರಿ' ಒಂದು ಸಿದ್ಧವಾಯಿತು. ; ಬಿ. ಮಲ್ಲಪ್ಪನವರ ವ್ಯಾಕರಣ 'ಶಬ್ದಾದರ್ಶ' ಇಂದಿಗೂ ಹಿರಿಯ ಮಕ್ಕಳಿಗೆ ಆದರ್ಶಪ್ರಾಯವಾದದ್ದು. ಮಕ್ಕಳ ಭಾಷಾ ಶುದ್ಧಿಯನ್ನು ಪೋಷಿಸಲು ಇದು ಮತ್ತೆ ಪಠ್ಯ ಆಗುವುದು ಒಳ್ಳೆಯದು. ಗದ್ಯದ ಬರಹದಂತೆ ಹೊಸ ಬಗೆಯ ಪದ್ಯಗಳೂ ರೀಡರುಗಳಲ್ಲಿ ಎಡೆಪಡೆದವು. ಮೈಸೂರು ಸೀಮೆಯಲ್ಲಿ ರೀಡರುಗಳು ರಚಿತವಾದ ಕಾಲದಲ್ಲೆ ಉತ್ತರ ಕರ್ನಾಟಕದಲ್ಲಿ ಶಾಂತಕವಿ,ವೆಂಕಟರಂಗೋ ಕಟ್ಟಿ, ಡೆಪ್ಯುಟಿ ಚೆನ್ನಬಸಪ್ಪ ಮುಂತಾದ ಗಣ್ಯರಿಂದ ಅಲ್ಲಿಯ ಕ್ರಮಿಕ ಪುಸ್ತಕಗಳು ಮಕ್ಕಳ ಕಲಿಕೆಗೆ ಅಣಿಯಾದವು. ಮ್ಯಾಕ್‌ಮಿಲನ್ ಕಂಪೆನಿ ಮದರಾಸು ಪ್ರಾಂತದಲ್ಲಿ ಬಳಕೆಗೆ ತಂದ ರೀಡರುಗಳು ಸಂದರ್ಭೋಚಿತ ಚಿತ್ರ ಗಳಿಂದಲೂ ಸೊಗಸಾದ ಮುದ್ರಣವಿನ್ಯಾಸದಿಂದಲೂ ಮಾರ್ಗದರ್ಶಕವಾದವು. ಮಕ್ಕಳ ಸಾಹಿತ್ಯದಲ್ಲಿ ಅಪಾರ ಆಸಕ್ತಿ ಹೊಂದಿದ್ದ ಬಿ.ಎಂ.ಶ್ರೀ. ಅವರು ಮೈಸೂರು ಕಡೆಯ ಹಳೆಯ ರೀಡರುಗಳನ್ನು ಪರಿಷ್ಕರಿಸಿ, ಅವುಗಳಲ್ಲಿ ಮೊತ್ತ ಮೊದಲಿಗೆ 'ನವೋದಯ'ದ ಕವಿಗಳ ಪದ್ಯ ಗಳಿಗೂ ಎಡೆಕಲ್ಪಿಸಿ, ಬದಲಾದ ಕಾಲಕ್ಕೆ ತಕ್ಕಂತೆ ಕನ್ನಡ ನಾಡು ನುಡಿಗಳ ಅಭಿಮಾನ ಬೆಳೆಸುವ, ಹೊಸ ಹೊಸ ವಿಚಾರಗಳನ್ನು ತಿಳಿಸುವ ಪಾಠಗಳನ್ನು ಸೇರಿಸಿದರು. ಈ ಪರಿಷ್ಕೃತ ರೀಡರುಗಳು ಸ್ವಲ್ಪ 'ಭಾರ' ಎಂಬ ಅಭಿಪ್ರಾಯದಿಂದ ಅವುಗಳನ್ನು ವಿದ್ಯಾ ಇಲಾಖೆ ಎಂ. ಆರ್. ಶ್ರೀ. ಅವರ ಮೂಲಕ ಮತ್ತೆ ಪರಿಷ್ಕಾರ ಮಾಡಿಸಿತು. ಕರ್ನಾಟಕ ಏಕೀಕರಣ ಆದ ಮೇಲೆ ಅಖಿಲ ಕರ್ನಾಟಕದ ಭಾಷಾಸ್ವರೂಪವನ್ನು, ನಡೆನುಡಿಯನ್ನು, ಪ್ರಾತಿನಿಧಿಕವಾಗಿ ಬಿಂಬಿಸುವ ದೃಷ್ಟಿಯಿಂದ ಈ ರೀಡರುಗಳು ಮತ್ತೆ ಮತ್ತೆ ಪರಿಷ್ಕೃತ ಗೊಳ್ಳುತ್ತಲೇ ಇವೆ. ಮಕ್ಕಳ ಸಾಹಿತ್ಯದ ಅಭಿವೃದ್ಧಿಗೆ ಈ ರೀಡರುಗಳು ಪರೋಕ್ಷವಾಗಿ ಪೋಷಕಗಳಾದ್ದರಿಂದ ಇವುಗಳ ಗದ್ಯಭಾಗ ಮೊದಲಿನ ಸಾಹಿತ್ಯ ಗುಣವನ್ನು ಅಷ್ಟಾಗಿ ಉಳಿಸಿಕೊಂಡಿಲ್ಲ ಎಂದು ತೋರುತ್ತದೆ. ಮಕ್ಕಳ ಓದಿಗೆಂದು ಅವರ ಕೈಗೆ ಕಡ್ಡಾಯವಾಗಿ ಹೋಗುವ ರೀಡರುಗಳು ಮಕ್ಕಳ ಸಾಹಿತ್ಯಕ್ಕೆ ಮಾದರಿಯಾಗಿ ನಿಲ್ಲಬೇಕಾದದ್ದು ಅಗತ್ಯ.

ರೀಡರುಗಳ ಪ್ರಪಂಚದಿಂದ ಹೊರಬಂದು, ತನ್ನಿಂದ ತಾನೇ ಸ್ವಯಂಪ್ರೇರಣೆಯಿಂದ ಸೃಷ್ಟಿಯಾಗುತ್ತಿರುವ, ಪ್ರಮಾಣ ದೃಷ್ಟಿಯಿಂದಲೂ ಗುಣಮಟ್ಟದ ದೃಷ್ಟಿಯಿಂದಲೂ ಆಶಾದಾಯಕವಾಗಿ ಬೆಳೆದುಬರುತ್ತಿರುವ ಮಕ್ಕಳ ಸಾಹಿತ್ಯಪ್ರಪಂಚದ ಒಂದು 'ಹಕ್ಕಿನೋಟ' ವನ್ನು ಹಾಯಿಸುವುದು ಕೂಡ ಈ ಚಿಕ್ಕ ಪೀಠಿಕೆಯಲ್ಲಿ ಆಗದ ಮಾತು. ಈ ಬಗೆಗೆ 1927 ರಷ್ಟು ಹಿಂದೆಯೇ ಬಿ. ಎಂ. ಶ್ರೀ.ಯವರು ಕಲಬುರ್ಗಿ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷ ಭಾಷಣದಲ್ಲಿ, ಬರಬೇಕೆಂದು ತಾವು ಬಯಸಿದ, ಇಂದಿಗೂ ಬರಬೇಕಾಗಿದೆ ಎಂದು ನಾವು ಬಯಸುವ, ಮಕ್ಕಳ ಸಾಹಿತ್ಯವನ್ನು ಕುರಿತು ತಮ್ಮ ಮುಂಗಾಣ್ಕೆಯನ್ನು ಹೀಗೆ ಮುಂದಿಟ್ಟರು :

"ನಮ್ಮ ಹೊಸ ಲೇಖಕನು ಹಿರಿಯರ ಸೇವೆಯಲ್ಲಿ ಸಣ್ಣ ಮಕ್ಕಳನ್ನು ಮರೆಯುವುದಿಲ್ಲ. 'ಮನುಜನಿಗೆ ಮಗು ತಂದೆ' ಎಂಬ ತತ್ವವನ್ನು ಈತನು ಬಲ್ಲನು. ಆದುದರಿಂದ ಆ ಚಿಕ್ಕ ಮಕ್ಕಳನ್ನು ತನ್ನ ಕಡೆಗೆ ಒಲಿಸಿಕೊಂಡು ಅವರಿಗೆ ಬೇಕಾದ, ಪುಟ್ಟವಾದ, ಚಿತ್ರಗಳಿಂದ ಕೂಡಿರುವ, ಮುದ್ದಾದ ಬಾಲಶೈಲಿಯಲ್ಲಿ ಬರೆದಿರುವ ಸಾಹಸಕಥೆಗಳು, ಆಶ್ಚರ್ಯ ಕಥೆಗಳು, ದೇಶ ಸಂಚಾರಗಳು, ಸಮುದ್ರಯಾನಗಳು, ಪ್ರಕೃತಿಶಾಸ್ತ್ರದ ಅದ್ಭುತ ನಿರ್ಮಾಣಗಳು, ಭರತ ಖಂಡದ ಪೂರ್ವಚರಿತ್ರೆಯ ಸಾರಾಂಶಗಳು, ವೀರರ ನೈಜವೃತ್ತಾಂತಗಳು— ಮುಂತಾದುವನ್ನು ಮೊದಲು ಸಿದ್ಧಮಾಡುವನು. ಆ ಬಳಿಕ ದೊಡ್ಡವರಿಗೆ ಬೋಧನೆ ಮಾಡುವುದಕ್ಕೆ ಹೊರಟು....ಹೊಸ ಬೆಳೆಯನ್ನು ನೂರರಷ್ಟು ಹೆಚ್ಚಿಸುವನು."

'ಶ್ರೀ'ಯವರ ಮೇಲ್ಕಂಡ ಮಾತಿನಲ್ಲಿ ಸೃಷ್ಟ್ಯಾತ್ಮಕ ಗದ್ಯ-ಪದ್ಯಗಳ ಬಗೆಗೆ ಪ್ರಸ್ತಾಪ ಇಲ್ಲದಿರುವುದು ಗಮನಾರ್ಹ. ಮಕ್ಕಳಿಗಾಗಿ ಗೀತೆಗಳು, ಕಥನಕವನ, ಕಥೆಗಳು, ಜೀವನ ಚರಿತ್ರೆಗಳು, ನಾಟಕಗಳು, ಮುಂತಾದುವನ್ನು ಬರೆಯುವವರು ಸ್ವಯಂಪ್ರೇರಣೆಯಿಂದ ಬರೆದೇ ಬರೆಯುತ್ತಾರೆ. ಇಂಥ ಬರಹಗಾರರಿಗೆ ಉತ್ತೇಜನ ಬೇಕಾಗಿದೆ, ಅಷ್ಟೆ. ಆದರೆ, ವೈಜ್ಞಾನಿಕ-ವೈಚಾರಿಕ ಸಾಹಿತ್ಯವನ್ನು ಮಕ್ಕಳಿಗೆ ಒದಗಿಸಬೇಕಾದರೆ ಅದಕ್ಕಾಗಿ ಪ್ರಯತ್ನಪೂರ್ವಕವಾಗಿ, ಯೋಜನಾಬದ್ಧವಾಗಿ, ಸಾಮೂಹಿಕವಾಗಿ ಕೆಲಸಮಾಡುವ ಅಗತ್ಯ ಇದೆ. ಈ ಬಗೆಯ ಕಾರ್ಯ ಪ್ರಯತ್ನಗಳನ್ನು ಈಚಿನ ದಿನಗಳಲ್ಲಿ ಮೈಸೂರಿನ Children's Book Council', ರಾಷ್ಟ್ರೋತ್ಥಾನ ಪರಿಷತ್ತು, ಐ.ಬಿ.ಎಚ್. ಪ್ರಕಾಶನ, ಮುಂತಾದ ಸಂಸ್ಥೆಗಳು ಕೈಕೊಂಡು ಮಾಡುತ್ತಿವೆ. 'ಶ್ರೀ' ಯವರು ಬರೆದ ಕಾಲದಲ್ಲಿ ಮತ್ತು ಆ ತರುಣದಲ್ಲಿ ಮಕ್ಕಳ ಸಾಹಿತ್ಯಸೃಷ್ಟಿಗೆ ತೊಡಗಿದ ಪಂಜೆ ಮಂಗೇಶರಾವ್, ಹೊಯಿಸಳ, ಕುವೆಂಪು, ರಾಜರತ್ನಂ, ಮುಂತಾದ ಪ್ರಸಿದ್ಧ ಸಾಹಿತಿಗಳು ಸ್ವತಃ ಕವಿಗಳೂ ಆದ್ದರಿಂದ ಪದ್ಯರಚನೆ ಮಾಡಿದರು. ಮಕ್ಕಳ ಸಾಹಿತ್ಯ ರಾಶಿಯಲ್ಲಿ ಇಂದಿಗೂ ಪದ್ಯದ ಬೆಳಸೇ ಹೆಚ್ಚು ; ಕಥೆಗಳು ಎರಡನೆಯ ಸ್ಥಾನ ಪಡೆಯುತ್ತವೆ ; ನಾಟಕ ತೀರ ಕಡಮೆ. ವಿಚಾರಪರ ಹಾಗೂ ವೈಜ್ಞಾನಿಕ ಸಾಹಿತ್ಯಕ್ಕೆ ದುಡಿಯುವವರು ಇರಲೇ ಇಲ್ಲ ಎನ್ನಬಹುದಾದ ಆರಂಭದ ದಶಕಗಳ ಸನ್ನಿವೇಶದಲ್ಲಿ ಶಿವರಾಮ ಕಾರಂತರು 'ಬಾಲಪ್ರಪಂಚ' (ಮಕ್ಕಳ ವಿಶ್ವಕೋಶ) ಪ್ರಕಟಿಸಿದ್ದು ದೊಡ್ಡ ಸಾಹಸ. ಮಕ್ಕಳ ಸಾಹಿತ್ಯದ ಇತರ ಪ್ರಕಾರಗಳಲ್ಲೂ ದುಡಿದಿರುವ ಅವರು 'ಬಾಲವನ'ವನ್ನೆ ನಡಸಿದರು. ಈಗಲೂ ಐ.ಬಿ.ಎಚ್. ಪ್ರಕಾಶನದ 'ಅಮರಕಥಾ' ಮಾಲೆಯ ಕನ್ನಡ ರೂಪವನ್ನು ಸಿದ್ಧಪಡಿಸುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ತಾನೆ ಪ್ರಕಟವಾದ 'ವಿಜ್ಞಾನ ಪ್ರಪಂಚ'ವೂ ಕಾರಂತರ ಹೆಮ್ಮೆಯ ಕೊಡುಗೆ ಕನ್ನಡ ಮಕ್ಕಳಿಗೆ. ಹಿರಿಯ ಮಕ್ಕಳಿಗಾಗಿ ನಿರಂಜನರ ಪ್ರಧಾನಸಂಪಾದಕತ್ವದಲ್ಲಿ ನಿರ್ಮಾಣವಾದ 'ಜ್ಞಾನ ಗಂಗೋತ್ರಿ' ಈಚಿನ ಇನ್ನೊಂದು ವಿಶ್ವಕೋಶ. ಈ ದೊಡ್ಡ ದೊಡ್ಡ ಸಂಪುಟಗಳು ಶಾಲಾ ಲೈಬ್ರರಿಗಳ ಅಲಮಾರುಗಳನ್ನು ಅಲಂಕರಿಸುತ್ತವೆಯೇ ಹೊರತು ಹಾರ್ದಿಕವಾಗಿ ಮಕ್ಕಳ

ಕೈಹಿಡಿತಕ್ಕೆ ಸಿಕ್ಕತಕ್ಕವಲ್ಲ. ಈಚೆಗೆ ವಿಜ್ಞಾನ ಪರಿಷತ್ತು ವಿವಿಧ ವಿಜ್ಞಾನ ವಿಷಯಗಳ ಮೇಲೆ ಹೊರತರುತ್ತಿರುವ ಜನಪ್ರಿಯ ವಿಜ್ಞಾನ ಪುಸ್ತಿಕೆಗಳು ಹಿರಿಯ ಓದುಗರನ್ನು ಉದ್ದೇಶಿಸಿ ಬರೆದವಾಗಿವೆ. ಮಕ್ಕಳಿಗೆಂದೇ ವೈಜ್ಞಾನಿಕ-ವೈಚಾರಿಕ ವಿಷಯಗಳನ್ನು ತಿಳಿಸುವ ಸಚಿತ್ರ ಪುಸ್ತಿಕೆಗಳು ಹೆಚ್ಚಾಗಿ ಪ್ರಕಟವಾಗಬೇಕಾಗಿವೆ.

ಅನೇಕ ವರ್ಷಗಳ ಹಿಂದೆಯೇ ಸುಬೋಧ ರಾಮರಾಯರು ನೂರಾರು ಸಣ್ಣ ಜೀವನ ಚರಿತ್ರೆಗಳನ್ನು ಬರೆದರು ಮಕ್ಕಳಿಗಾಗಿ. ಇದೇ ಕೆಲಸವನ್ನು ಇನ್ನೂ ವ್ಯಾಪಕವಾಗಿ ಕೈಗೊಂಡು ರಾಷ್ಟ್ರೋತ್ಥಾನ ಪರಿಷತ್ತು 500ಕ್ಕೂ ಮಿಕ್ಕು ಚೆಲುವಾದ ಚಿಕ್ಕ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿತು. ಈ ದಿಸೆಯಲ್ಲಿ ಐ. ಬಿ. ಎಚ್. ಪ್ರಕಾಶನ ಅಮರ ಕಥಾಮಾಲಿಕೆ, ಕನ್ನಡಿಗರ ಪರಂಪರೆ ಮಾಲಿಕೆ, ಇವುಗಳ ಮೂಲಕ ಮಕ್ಕಳ ಸಾಹಿತ್ಯ ಭಂಡಾರವನ್ನು ತುಂಬುತ್ತ ನಡೆದಿದೆ. ಕನ್ನಡ ಸಾಹಿತ್ಯ ಪರಿಷತ್ತು ಮಕ್ಕಳ ವರ್ಷದಲ್ಲಿ ನೂರು ಪುಸ್ತಕಗಳನ್ನು ಪ್ರಕಟಿಸಿತು. ಈ ಸಂಕಲನದ 'ಕನ್ನಡದ ಕತೆ' ಆ ಗ್ರಂಥಮಾಲೆಗೇ ಸೇರಿದ್ದು.

ಇಷ್ಟೆಲ್ಲಾ ಆಗಿದ್ದರೂ, ರಾಜರತ್ನಂ ಒಂದು ಸಂದರ್ಭದಲ್ಲಿ ಹೇಳಿದಂತೆ, ಮಕ್ಕಳ ಸಾಹಿತ್ಯದ ಕೃಷಿ "ಸಾಲದು ಸ್ವಾಮಿ, ಸಾಲದು, ಏನೇನೂ ಸಾಲದು."

x x x

ಮಕ್ಕಳ ಸಾಹಿತ್ಯಕ್ಕಾಗಿ ವಿಶೇಷವಾಗಿ ದುಡಿದವರಲ್ಲಿ ಬಹುಮುಖ್ಯರಾದವರು ಕೆಲವರನ್ನಾದರೂ ಇಲ್ಲಿ ನೆನೆಯದೆ ಬಿಟ್ಟರೆ ದೊಡ್ಡ ಲೋಪವಾಗುತ್ತದೆ. ಈ ಮೊದಲೇ ಕೆಲವು ಮಹನೀಯರ ಸೇವೆ ಏನೆಂಬುದನ್ನು ತಿಳಿಸಿದೆ. ಆ ಆದ್ಯರ ಪಟ್ಟಿಗೆ ಎಂ. ಎನ್. ಕಾಮತ್ ಮತ್ತು ಸ್ವಲ್ಪ ಈಚಿನವರಾದ ದೇವುಡು ನರಸಿಂಹ ಶಾಸ್ತ್ರಿ, ಇವರ ಹೆಸರೂ ಸೇರುತ್ತವೆ. ಎಂ. ಎನ್. ಕಾಮತ್ ಮಕ್ಕಳ ನಾಟಕಕ್ಕೆ ಆದ್ಯರು ಎನ್ನಬಹುದು. ಅವರು ಬರೆದ ನಾಟಕಗಳ ಪುನರ್ಮುದ್ರಣ ಆಗಬೇಕು. ವೈಜ್ಞಾನಿಕ–ವೈಚಾರಿಕ ಸಾಹಿತ್ಯಕ್ಕೆ ಶಿವರಾಮ ಕಾರಂತರು ಪ್ರವರ್ತಕರು. ಈ ಸಂಕಲನದಲ್ಲಿ ಅವರ ಒಂದು ಬರಹ ಇರಬೇಕೆಂಬ ನಮ್ಮ ಅಪೇಕ್ಷೆ ಕೈಗೂಡಲಿಲ್ಲ. ಶಿಶುಸಾಹಿತ್ಯಕ್ಕೆ ಹೊಯಿಸಳರು ಮೊದಲಿಗರು; ಅದನ್ನು ವಿಶೇಷವಾಗಿ, ಹೆಚ್ಚು ಶಿಶುಲೋಕಪ್ರಿಯವಾಗಿ ಬೆಳೆಸಿದವರು ರಾಜರತ್ನಂ. ಕುವೆಂಪು ಅವರು ಮಕ್ಕಳನ್ನು ಮರೆತಿಲ್ಲ. ಅವರ "ಬೊಮ್ಮನ ಹಳ್ಳಿಯ ಕಿಂದರಿ ಜೋಗಿ" ಮಕ್ಕಳ ನೀಳ್ಗವಿತೆಯ ಪ್ರಕಾರದಲ್ಲಿ ಕಿರೀಟಪ್ರಾಯವಾದದ್ದು. ಮಕ್ಕಳ ಕಲ್ಯಾಣವನ್ನೇ ಸದಾ ಕೋರುತ್ತಿದ್ದ ಆರ್. ಕಲ್ಯಾಣಮ್ಮನವರು ಸ್ಥಾಪಿಸಿದ ಅಖಿಲ ಕರ್ನಾಟಕ ಮಕ್ಕಳ ಕೂಟವನ್ನು ನಡೆಸಿಕೊಂಡ

ಬಂದ ಟಿ. ಎಂ. ಆರ್. ಸ್ವಾಮಿ ಮಕ್ಕಳ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಚಿರಸ್ಮರಣೀಯ. ದಾಮೋದರ ಬಾಳಿಗ, ಬಿ. ಶಂಕರಭಟ್ಟ, ಬೆಟಗೇರಿ ಕೃಷ್ಣಶರ್ಮ ಮುಂತಾದ ಅನೇಕ ಮಂದಿ ಹಿರಿಯರ ಹೆಸರುಗಳು ಮಕ್ಕಳ ಸಾಹಿತ್ಯ ಚರಿತ್ರೆಯಲ್ಲಿ ಮರೆಯಲಾಗದವು.

'ಮಕ್ಕಳ ಪುಸ್ತಕ' (ಸಂಪಾದಕ : ಸಿ. ಅಶ್ವತ್ಥನಾರಾಯಣರಾವ್), 'ನಮ್ಮ ಪುಸ್ತಕ' (ಸಂ. ದೇವುಡು), 'ಮಕ್ಕಳ ಬಾವುಟ' (ಅಖಿಲ ಕರ್ನಾಟಕ ಮಕ್ಕಳ ಕೂಟದ ಪ್ರಕಟನೆ), – ಮುಂತಾದವು ಮಕ್ಕಳ ಸಾಹಿತ್ಯಕ್ಕಾಗಿಯೇ ಮೀಸಲಾದ ಹಳೆಯ ಪತ್ರಿಕೆಗಳು. ಕುಮಾರ ವೆಂಕಣ್ಣ 'ಪಾಪಚ್ಚಿ' ಎಂಬ ಪತ್ರಿಕೆಯನ್ನು ಈಗಲೂ ನಡೆಸುತ್ತಿದ್ದಾರೆ. ನಾಡಿನ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳು ಮಕ್ಕಳ ಸಾಹಿತ್ಯ ಪ್ರಕಾಶನಕ್ಕೆ ಪುಟಗಳನ್ನು ಮೀಸಲಿಟ್ಟಿವೆ. ಈ ಪುಟಗಳಲ್ಲಿ ಕಿರಿಯ ಹಿರಿಯ ಮಕ್ಕಳು ಪದ್ಯ ಕತೆಗಳನ್ನು ಬರೆದು ಬರಹಗಾರರಾಗಿ ಮುಂದೆ ಬಂದಿದ್ದಾರೆ. ಹೀಗೆ ಮುಂದೆ ಬಂದವರಲ್ಲಿ ಎಲ್. ಜಿ. ಅಮೃತೇಶ್ವರ ನನ್ನ ನೆನಪಿಗೆ ಬರುತ್ತಾರೆ.

ಈ ಸಂಕಲನದಲ್ಲಿ ಸೇರಿರುವ ಬರಹಗಳ ಲೇಖಕರು ಪ್ರಸಿದ್ಧರಾದ ಸಾಹಿತಿಗಳು. ಇತರ ಸಾಹಿತ್ಯ ಪ್ರಕಾರಗಳ ಜೊತೆಯಲ್ಲಿಯೇ ಮಕ್ಕಳ ಸಾಹಿತ್ಯ ರಚನೆಗೂ ಶ್ರಮಿಸಿರುವವರು. ಇವರುಗಳ ಪರಿಚಯವನ್ನು ಮಾಡಿಕೊಡಬೇಕಾದ ಅಗತ್ಯ ಏನೂ ಇಲ್ಲ.

x x x

ಈ ಸಂಕಲನವನ್ನು ಕೆಲವು ಇತಿಮಿತಿಗಳಿಗೆ ಒಳಪಟ್ಟು ಸಿದ್ಧಪಡಿಸಬೇಕಾಯಿತು. ಪುಟ ಸಂಖ್ಯೆಯ ಮಿತಿ ಒಂದು ಕಡೆ; ಈಗಾಗಲೇ ಹೆಸರು ಮಾಡಿರುವ ಹತ್ತು ಹನ್ನೆರಡು ಮಂದಿ ಲೇಖಕರ ಬರಹಗಳನ್ನು ಹಾಕಬೇಕು, ಮಕ್ಕಳ ಸಾಹಿತ್ಯ ರಚಿಸುವ ಉದಯೋನ್ಮುಖ ಲೇಖಕರಿಗೆ ಶ್ರೇಷ್ಠ ಮಾದರಿಗಳನ್ನು ಮುಂದಿಡಬೇಕು, ಪ್ರಕಟವಾದದ್ದು ಓದುವ ಮಕ್ಕಳಿಗೆ ರುಚಿಸಬೇಕು, ವಸ್ತುವೈವಿಧ್ಯ, ಪ್ರಕಾರವೈವಿಧ್ಯ ಇರಬೇಕು — ಎಂಬ ಉದ್ದೇಶಗಳಿಗೆ ಬದ್ಧವಾಗಿ ಸಂಕಲನ ಸಿದ್ಧವಾಗಿದೆ. ಆದ್ದರಿಂದ ಇದು ಎಲ್ಲ ದೃಷ್ಟಿಗಳಿಂದಲೂ ಪೂರ್ತಿಯಾಗಿ ಪ್ರಾತಿನಿಧಿಕ ಎಂದು ಹೇಳುವುದಕ್ಕಾಗುವುದಿಲ್ಲ: ಪ್ರಾತಿನಿಧಿಕ ಆಗಿರಬೇಕೆಂಬ ಉದ್ದೇಶವೂ ಇಲ್ಲ. ಸಚಿತ್ರವಾದ ಒಂದು ಒಳ್ಳೆಯ ಸಂಕಲನವನ್ನು ಕಿರಿಯ, ಹಿರಿಯ ಮಕ್ಕಳಿಗೆ ನೀಡಬೇಕೆಂಬುದಷ್ಟೆ ನಮ್ಮ ಪರಿಮಿತ ಉದ್ದೇಶ.

ಸಂಕಲನವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ವಿಶ್ವ ಕನ್ನಡ ಸಮ್ಮೇಳನದ ಅಧಿಕ ನಿರ್ದೇಶಕರಾದ ಮಾನ್ಯಶ್ರೀ ಕೆ. ಜಯಾಚಾರ್ಯರವರೂ ಅವರ ಕಾರ್ಯಾಲಯದ ಇತರ ಅಧಿ

ಕಾರಿಗಳೂ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಟ್ಟು ಸಹಕರಿಸಿದ್ದಾರೆ. ತಮ್ಮಲ್ಲಿದ್ದ ಮಕ್ಕಳ ಸಾಹಿತ್ಯದ ಪುಸ್ತಕಗಳನ್ನು ಎರವಲು ಕೊಟ್ಟು ಬಿ. ಶ್ರೀ. ಪಾಂಡುರಂಗರಾಯರು ತುಂಬ ಉಪಕಾರ ಮಾಡಿದ್ದಾರೆ. ತಮ್ಮ ಕೃತಿಗಳನ್ನು ಸಂಕಲನದಲ್ಲಿ ಸೇರಿಸಿಕೊಳ್ಳಲು ಕೇಳಿದ ಕೂಡಲೇ ಒಪ್ಪಿಗೆ ಕೊಟ್ಟು ಲೇಖಕ-ಲೇಖಕಿಯರು ಸಹಕರಿಸಿದ್ದಾರೆ. ಕೆಲವು ರಚನೆಗಳ ಆಯ್ಕೆ ಮಾಡುವಲ್ಲಿ ಡಾ॥ ಜಿ. ಎ. ಜಾಲಿಹಾಳರು ಸಲಹೆ ಸೂಚನೆ ನೀಡಿ ಸಹಕರಿಸಿದ್ದಾರೆ. ಈ ಎಲ್ಲ ಮಹನೀಯರಿಗೆ ನಾನು ಕೃತಜ್ಞ.

ಬೆಂಗಳೂರು – 19
25–4–1983

ಎಂ. ವಿ. ಸೀತಾರಾಮಯ್ಯ

ಒಳಗಿನ ಹೂರಣ

ಮೊದಲ ಅರ್ಧ

(ಕಿರಿಯ ಮಕ್ಕಳಿಗಾಗಿ)

ಕತೆ

೧	ಅದಕ್ಕೇ ಆ ಹೆಸರು	ಹೊಯಿಸಳ
೨	ಗೋಳೂರಿನ ಗಾಯಕರು	ಜಿ. ಪಿ. ರಾಜರತ್ನಂ
೩	ಶಾಮು ಮತ್ತು ಜಲಪಿಶಾಚಿ	ಅನುಪಮಾ ನಿರಂಜನ
೪	ಚಿಕ್ಕಿಯ ತಂಗಿ	ಜಯಲಕ್ಷ್ಮೀ ಶ್ರೀನಿವಾಸನ್
೫	ಮುದ್ದು ಸಿಂಗಾರಿ	ಬಿ. ಶ್ರೀ. ಪಾಂಡುರಂಗರಾವ್

ನಾಟಕ

೧	ದೀಪಾವಳಿ	ಬಿ. ಶ್ರೀ. ಪಾಂಡುರಂಗರಾವ್

ಎರಡನೆಯ ಅರ್ಧ
(ಹಿರಿಯ ಮಕ್ಕಳಿಗಾಗಿ)

ಪದ್ಯ

೧	ಚಂದ್ರಹಾಸನ ಬಾಲ್ಯ	
೨	ಚಟಾಕಿ	ಎಲ್. ಗುಂಡಪ್ಪ
೩	ಪ್ರಾಣಪುಷ್ಪ	ಕಾವ್ಯಾನಂದ
೪	ನಿದ್ದೆ	ಬಿ. ಎ. ಸನದಿ
೫	ತೆಂಕಣಗಾಳಿಯಾಟ	ಪಂಜೆ ಮಂಗೇಶರಾವ್
೬	ದಾದಿರನ್ನೆ	ರಾಘವ

ಕತೆ

೧	ಅರಸುಕುಮಾರಿ	ಅನುಪಮಾ ನಿರಂಜನ
೨	ಪಾತಾಳದಲ್ಲಿ ಪಾಪಚ್ಚಿ	ನಾ. ಕಸ್ತೂರಿ
೩	ವರಪ್ಪುಯರ	ಹೊಯಿಸಳ
೪	ಕನ್ನಡದ ಕತೆ	ಎಂ. ವಿ. ಸೀತಾರಾಮಯ್ಯ

ನಾಟಕ

೧	ವಿಚಿತ್ರ ಶಿಕ್ಷೆ	ದೇವುಡು

ಮೊದಲ ಅರ್ಧ
(ಕಿರಿಯ ಮಕ್ಕಳಿಗಾಗಿ)

ಪದ್ಯ

ಮಕ್ಕಳೇ ಚೆಂದ ಮನೆಗೆಲ್ಲ

ತೊಟ್ಟಿಲ ಮಗು

ತೂಗು ತೊಟ್ಟಿಲಿಗೊಂದು ಪಾಗು ಪಟ್ಟೆಯ ಹಾಸಿ
ಮಾಗಾಯಿ ಮಗುವ ಮಲಗಿಸಿ—ಅವರಮ್ಮ
ಜೋಗುಳ ಹಾಡತೊಡಗ್ಯಾಳು

ಜೋಗುಳ ಹಾಡಿದರೆ ಆಗಲೆ ಕೇಳ್ಯಾನು
ಹಾಲ ಹಂಬಲವ ಮರೆತಾನು—ಕಂದಯ್ಗೆ
ಜೋಗುಳದಾಗೆ ಅತಿಮುದ್ದು

ಯಾತ ಯಾತರ ಗಾಳಿ ಎಲೆಯ ತೋಟದ ಗಾಳಿ
ಸುತ್ತಲು ಗಾಳಿ ಸುಳಿಗಾಳಿ—ನನ್ನಯ್ನ
ತೊಟ್ಟಿಲ ಗಾಳಿ ಮನೆತುಂಬ

ಅಳುವ ಮಗು

ಯಾಕಳುವೆ ಎಲೆ ರಂಗ ಬೇಕಾದ್ದು ನಿನಗಿದೆ
ನಾಕೆಮ್ಮೆ ಕರೆದ ನೊರೆಹಾಲು—ಸಕ್ಕರೆ
ನೀ ಕೇಳಿದಾಗ ಕೊಡುವೆನು

ಅಳುವ ಕಂದನ ತುಟಿ ಹವಳದ ಕುಡಿಯಂತೆ
ಕುಡಿಹುಬ್ಬು ಬೇವಿನೆಸಳಂತೆ—ಕಣ್ನೋಟ
ಶಿವನ ಕೈಯಲಗು ಹೊಳೆದಂತೆ

ಅತ್ತರೆ ಅಳಲವ್ವ ಈ ಕೂಸು ನನಗಿರಲಿ
ಕೆಟ್ಟರೆ ಕೆಡಲಿ ಮನೆಗೆಲಸ—ಕಂದನಂಥ
ಮಕ್ಕಳಿರಲವ್ವ ಮನೆತುಂಬ

ಮಗುವಿನ ಸೊಬಗು

ನನ್ನಯ್ಯನಂಥೋರು ಹನ್ನೆರಡು ಮಕ್ಕಳು
ಹೊನ್ನೆಯ ಮರದ ನೆರಳಲಿ—ಆಡುವಾಗ
ಸನ್ಯಾಸಿ ಜಪವ ಮರೆತಾನು

ಹಾವಿನ ಹೆಡೆ ಚೆಂದ ಮಾವಿನ ಮಿಡಿ ಚೆಂದ
ಹಾರಾಡಿ ಬರುವ ಗಿಣಿ ಚೆಂದ—ಕಂದಯ್ಯ
ನೀ ಚೆಂದ ನಮ್ಮ ಮನೆಗೆಲ್ಲ

—ಜನಪದ ಸಾಹಿತ್ಯದಿಂದ

ತುತ್ತೂರಿ

—ಜಿ. ಪಿ. ರಾಜರತ್ನಂ

ಬಣ್ಣದ ತಗಡಿನ
ತುತ್ತೂರಿ
ಕಾಸಿಗೆ ಕೊಂಡನು
ಕಸ್ತೂರಿ

ಸ ರಿ ಗ ಮ ಪ ದ ನಿ ಸ
ಊದಿದನು
ಸ ನಿ ದ ಪ ಮ ಗ ರಿ ಸ
ಊದಿದನು

ತನಗೇ ತುತ್ತೂರಿ
ಇದೆಯೆಂದ
ಬೇರಾರಿಗು ಅದು
ಇಲ್ಲೆಂದ

ಕಸ್ತೂರಿ ನಡೆದನು
ಬೀದಿಯಲಿ
ಜಂಬದ ಕೋಳಿಯು
ರೀತಿಯಲಿ

ತುತ್ತೂರಿಯೂದುತ
ಕೊಳದ ಬಳಿ
ನಡೆದನು ಕಸ್ತೂರಿ
ಸಂಜೆಯಲಿ

ಜಾರಿತು ನೀರಿಗೆ
ತುತ್ತೂರಿ
ಗಂಟಲು ಕಟ್ಟಿತು
ನೀರೂರಿ

ಸ ರಿ ಗ ಮ ಊದಲು
ನೋಡಿದನು
ಗಗ ಗಗ ಸದ್ದನು
ಮಾಡಿದನು

ಬಣ್ಣವು ನೀರಿನ
ಪಾಲಾಯ್ತು
ಬಣ್ಣದ ತುತ್ತೂರಿ
ಬೋಳಾಯ್ತು







9

ಬಣ್ಣದ ತುತ್ತೂರಿ
ಹಾಳಾಯ್ತು
ಜಂಬದ ಕೋಳಿಗೆ
ಗೋಳಾಯ್ತು

ನನ್ನ ಮನೆ

—ಕುವೆಂಪು

ಮನೇ ಮನೇ ಮುದ್ದು ಮನೇ
ಮನೇ ಮನೇ ನನ್ನ ಮನೇ !

ನನ್ನ ತಾಯಿಯೊಲಿದ ಮನೆ,
ನನ್ನ ತಂದೆ ಬಳೆದ ಮನೆ:
ನನ್ನ ಗೆಳೆಯರೊಡನೆ ಕೂಡಿ
ಮುದ್ದು ಮಾತುಗಳನು ಆಡಿ
ಮಕ್ಕಳಾಟಗಳನು ಹೂಡಿ
ನಾನು ನಲಿದ ನನ್ನ ಮನೆ !

ನನ್ನ ಗಿರಿಜೆಯಿದ್ದ ಮನೆ,
ನನ್ನ ವಾಸುವಿದ್ದ ಮನೆ :
ಮಸೆಯ ಮುತ್ತಿ ಬರಲು ಚಳಿ
ಆಳು ಮಂಜ ಒಲೆಯ ಬಳಿ
ನಮ್ಮನೆಲ್ಲ ಕತೆಗಳಲಿ
ಕರಗಿಸಿದ್ದ ನನ್ನ ಮನೆ !

ತಾಯಿ ಮುತ್ತು ಕೊಟ್ಟ ಮನೆ,
ತಂದೆ ಎತ್ತಿಕೊಂಡ ಮನೆ :
ಮನೆಗೆ ಬಂದ ನಂಟರೆಲ್ಲ
ಕೂಗಿ ಕರೆದು ಕೊಬರಿ ಬೆಲ್ಲ-
ಗಳನು ಕೊಟ್ಟು, ಸವಿಯ ಸೊಲ್ಲ-
ನಾಡುತ್ತಿದ್ದ ನನ್ನ ಮನೆ !

ನಾನು ನುಡಿಯ ಕಲಿತ ಮನೆ,
ನಾನು ನಡಿಗೆಯರಿತ ಮನೆ :
ಹಕ್ಕಿ ಬಳಗ ಸುತ್ತ ಕೂಡಿ
ಬೈಗು ಬೆಳಗು ಹಾಡಿ ಹಾಡಿ
ಮಲೆಯ ನಾಡ ಸಗ್ಗ ಮಾಡಿ
ನಲಿಸುತ್ತಿದ್ದ ನನ್ನ ಮನೆ !

ನಾನು ಬಿದ್ದು ಎದ್ದ ಮನೆ,
ಮೊದಲು ಬೆಳಕು ಕಂಡ ಮನೆ:
ತಿಪ್ಪ ತಿಪ್ಪ ಹೆಜ್ಜೆಯಿಟ್ಟು
ಬಿಸಿಲ ಕೋಲ ಹಿಡಿದು ಬಿಟ್ಟು
ತಂಗಿ ತಮ್ಮರೊಡನೆ ಹಿಟ್ಟು
ತಿಂದು ಬೆಳೆದ ನನ್ನ ಮನೆ !

*

ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ

—ಕಾವ್ಯಾನಂದ

ತಿರುಗೆಲೆ ತಿರುಗೆಲೆ
ತಿರುಗುಯ್ಯಾಲೆ
ಆಡುತ ನೀನೂ
ಅಪ್ಪಾಲೆ
ತಿಪ್ಪಾಲೆ

ಕುಳಿತಿಹೆ ನಾನು
ಕುದುರೆಯ ಮೇಲೆ
ತಂಗಿ ಶಾರದೆಯು
ನವಿಲಿನ ಮೇಲೆ
ತಮ್ಮದಿರಿಬ್ಬರು
ತೊಟ್ಟಿಲದೊಳಗೆ

ತಿರುಗೆಲೆ ತಿರುಗೆಲೆ
ತಿರುಗುಯ್ಯಾಲೆ



13

ಆಡುತ ನೀನೂ
ಅಪ್ಪಾಲೆ
ತಿಪ್ಪಾಲೆ

ಓರಿಗೆಯುವರು
ಸೇರಿಹರು
ಸಿಕ್ಕಿದ ವಾಹನ
ಏರಿಹರು
ಸುತ್ತಲು ಹಿಗ್ಗನು
ಬೀರಿಹರು
ತಿರುಗೆಲೆ ತಿರುಗೆಲೆ
ತಿರುಗುಯ್ಯಾಲೆ
ಆಡುತ ನೀನೂ
ಅಪ್ಪಾಲೆ
ತಿಪ್ಪಾಲೆ

ಉಟ್ಟಿಹರೆಲ್ಲರು
ಬಣ್ಣದ ಬಟ್ಟೆ
ಕಾಮ ಬಿಲ್ಲಿನ
ಕಲ್ಪನೆ ಹುಟ್ಟೆ
ತಿರುಗು ತಿರುಗು ನೀ
ಸಿಕ್ಕಾಬಟ್ಟೆ
ತಿರುಗೆಲೆ ತಿರುಗೆಲೆ
ತಿರುಗುಯ್ಯಾಲೆ

ಆಡುತ ನೀನೂ
ಅಪ್ಪಾಲೆ
ತಿಪ್ಪಾಲೆ

ಗಿರ ಗಿರ ತಿರುಗು
ಸರ ಸರ ತಿರುಗು
ಗಿಮಿ ಗಿಮಿ ಗಿಮಿ ಗಿಮಿ
ಯಮಕಿಲೆ ತಿರುಗು
ಗಾಳಿಯ ಹೊಲವನು
ಸೀಳದೆ ಹರಗು
ತಿರುಗೆಲೆ ತಿರುಗೆಲೆ
ತಿರುಗುಯ್ಯಾಲೆ
ಆಡುತ ನೀನೂ
ಅಪ್ಪಾಲೆ
ತಿಪ್ಪಾಲೆ

*

ತಾಯಿ

—ಎಲ್. ಗುಂಡಪ್ಪ

೧

ತಾಯಿ ದೇವರೆಂದು ವೇದ
ಬಾಯಿಬಿಟ್ಟು ಹೇಳುತಿಹುದು,
ತಾಯಿ ದೇವರೆಂದು ಹಿರಿಯ-
ರೆಲ್ಲರರಿವರು;
ತಾಯಿ ದೇವರೆಂದು ತಿಳಿದ-
ರೆಲ್ಲರೊರೆವರು.

೨

ಮನೆಯೆ ಮೊದಲ ಪಾಠಶಾಲೆ,
ಜನನಿ ತಾನೆ ಮೊದಲ ಗುರುವು,
ಜನನಿಯಿಂದ ಪಾಠಕಲಿತ
ಜನರು ಧನ್ಯರು;
ಘನತೆಯಿಂದಲವರು ಬಾಳ್ವ-
ರೆನುತ ನುಡಿವರು.

೩

ಹೊಟ್ಟೆಯಲ್ಲಿ ಹೊತ್ತು ತಾಯಿ
ಬೆಟ್ಟದಷ್ಟು ಕಷ್ಟವನ್ನು
ಗಟ್ಟಿಮನದಿ ತಾಳ್ವಳಲ್ತೆ
ಕಂದಗೋಸುಗ ;
ಬಿಟ್ಟು ಸುಖವ, ತಾಳ್ವಳವಳು
ಬಂದ ದುಃಖವ

೪

ಕಂದ ಬಳಲಿ ಬಂದನೆಂದು
ನೊಂದುಕೊಂಡು, ಬೇಗ ಮಮತೆ
ಯಿಂದ ನುಡಿದು, ನುಡಿಸುತಮೃತ-
ಬಿಂದುವೆರೆವಳು;
ಬೆಂದ ಮನದ ಬೇಗೆಯಳಿಸು-
ತಂದಗೊಳಿಪಳು

೫

'ಎನ್ನ ಚಿನ್ನ ತಣ್ಣಗಿರಲಿ
ಎನ್ನ ರನ್ನ ಸುಖವ ಪಡೆಯ-
ಲೆನ್ನ ಮುದ್ದು ಕಂದ ಕೀರ್ತಿ-
ವಡೆದು ಬಾಳಲಿ'—
ಎನ್ನುತಾಶಿಸುವಳು ತಾಯಿ
ಒಡಲ ಮರುಕದಿ

೬

ಪಡೆದ ತಾಯಿ, ಜನುಮವಿತ್ತ
ಪೊಡವಿ ಯೆಂಬಿವೆರಡು ಸಗ್ಗ-
ದೆಡೆಗೆ ಮಿಗಿಲು; ಸರ್ವಸಾಧು
ವರರು ಜಗದಲಿ.
ಬಿಡುವರೆಲ್ಲವನ್ನಿವಕ್ಕೆ
ಪರಮ ಹರ್ಷದಿ.

೭

ತಾಯ ಮಾತಿಗಾಗಿ ರಾಮ
ರಾಯತನವ ತೊರೆದು ನಡೆದ,
ತಾಯ ಸೆರೆಯ ಬಿಡಿಸೆ ಕೃಷ್ಣ
ಗೊಲ್ಲನಾದನು;
ತಾಯ ಮಾತ ನಡಸೆ ಕರ್ಣ
ಬಿಲ್ಲ ತೊರೆದನು.

೮

ಮಾತೆಗಾಗಿ—ತಮ್ಮ ದೇಶ-
ಮಾತೆಗಾಗಿ—ಸಕಲ ರಾಜ-
ಪೂತರಸುವ ತೊರೆದರಂದು
ರಣದ ಕಣದಲಿ;
ಖ್ಯಾತಿವೆತ್ತು ಮೆರೆದರಂದು
ಮಣಿಗಳಂದದಿ.

೯

ರನ್ನಗದ್ದುಗೆಯಲಿ ಮಾತೆ
ಮುನ್ನ ನೆಲಸೆ, ವಿಜಯದಿಂದ
ಧನ್ಯರವಳ ಹಿರಿಯ ಹೆಸರ
ವಿಶದಗೊಳಿಸುತ,
ಕನ್ನಡಿಗ ಮರಾಟರಮಿತ
ಯಶವ ತಳೆದರು.

೧೦

ಅವರ ಹೆಸರನೆಲ್ಲ ಹೇಳು
ತವರ ಕಥೆಯನೆಲ್ಲ ಕೇಳು
ತವರ ಕುಲದಿ ಹುಟ್ಟಿ ಹೆಮ್ಮೆ
ಪಡನದಾವನು ?
ಅವರ ಸೇವಿಸಲ್ಕೆ ತವಕ
ಪಡನದಾವನು ?

೧೧

ಧರಣಿಗೆಲ್ಲ ತನ್ನ ಬೆಳಕ
ಹರಡಿ ಮೆರೆದ ಭರತಮಾತೆ
ಹೆರರ ಸೇವೆಯಿಂದ ಕಂದಿ
ಕುಂದಿಹೋದಳು;
ತೊರೆದರೆನ್ನ ಮಕ್ಕಳೆಂದು
ನೊಂದುಕೊಳ್ವಳು.

೧೨

ನಮ್ಮ ತಾಯ ಗೋಳ ನೋಡಿ
ಸುಮ್ಮನಿಹುದು ಸರಿಯೆ, ನಾವು
ನಮ್ಮ ಸೋದರರ್ಕಳೊಡನೆ
ಕದನಗೈಯುತ?
ಅಮ್ಮನನ್ನು ಮರೆತು ಸೊಕ್ಕಿ
ಸದರವಾಡುತ ?

೧೩

ಬನ್ನಿ, ತಾಯಿಗೆರಗಿ ಬೇಗ,
ಮುನ್ನಗೈದ ತಪ್ಪನೆಲ್ಲ
ಮನ್ನಿಸೆಂದು ಕೈಯ ಮುಗಿದು
ಬೇಡಿಕೊಳ್ಳುವ;
ಬನ್ನಿ, ಭಾರತೀಯ ಕೃತಿಯ
ಮಾಡಿ ತೋರುವ.

ಬಣ್ಣದ ಚುಕ್ಕಿ

—ಕುವೆಂಪು

ಹಕ್ಕಿ, ಹಕ್ಕಿ, ಹಾರುವ ಹಕ್ಕಿ,
ಬಾರೆಲೆ ಹಕ್ಕಿ, ಬಣ್ಣದ ಚುಕ್ಕಿ !
ಗೆಳೆಯರು ಆಡುವರಾರೂ ಇಲ್ಲ :
ಕಳೆಯುವುದೆಂತೀ ಕಾಲವನೆಲ್ಲ ?

ಬಾ, ಬಾ, ನನಗೂ ಹಾಡಲು ಕಲಿಸು ;
ಬಾ, ಬಾ, ನನಗೂ ಹಾರಲು ಕಲಿಸು.
ಹೂವಿನ ರಸವನು ಕೊಡುವೆನು ನಿನಗೆ,
ಸುಗ್ಗಿಯ ಕಾಳನು ಸುರಿವೆನು ನಿನಗೆ.

ಬಾ, ಬಾ, ಆಡುವ ಹಗಲೆಲ್ಲ !
ಬಾ, ಬಾ, ಹಾಡುವ ದಿನವೆಲ್ಲ !

ಪಡುವಣ ದೆಸೆಯೊಳು ಬೈಗಿನ ಹೊತ್ತು
ಮುಳುಗುವ ಸಮಯದಿ, ತಾಯಿಯ ಮುತ್ತು
ನನ್ನನು ಮನೆಯೆಡೆಗೆಳೆಯುವುದು !

ಕಾಡಿನ ಬಳಿಯಲಿ, ನಿನ್ನನು ಹೆತ್ತು
ಪೊರೆದಾ ತಾಯಿಯ ಗುಟುಕಿನ ತುತ್ತು
ನಿನ್ನನು ಗೂಡಿಗೆ ಸೆಳೆಯುವುದು !

ಅಲ್ಲಿಯವರೆಗೂ ಆಡುವ, ಬಾ !
ಅಲ್ಲಿಯವರೆಗೂ ಹಾಡುವ, ಬಾ !

ಹಣ್ಣನು ತಿನ್ನುತ ಬನದೊಳು ತಿರುಗುತ,
ಹೂವಿನ ತಳಿರಿನ ಸೊಬಗನು ನೋಡುತ,
ತಿಳಿಗೊಳದಲಿ ತಣ್ಣೀರನು ಕುಡಿಯುತ,
ನಲಿಯುವ ಹಸುರೊಳು ಬೀಳುತ. ಏಳುತ,

ಅಲ್ಲಿಯವರೆಗೂ ಆಡುವ, ಬಾ !
ಅಲ್ಲಿಯವರೆಗೂ ಹಾಡುವ, ಬಾ !

ಹಕ್ಕಿ, ಹಕ್ಕಿ, ಹಾರುವ ಹಕ್ಕಿ,
ಬಾರೆಲೆ ಹಕ್ಕಿ, ಬಣ್ಣದ ಚುಕ್ಕಿ ! *

ಗಡಿಯಾರ

—ದಿನಕರ ದೇಸಾಯಿ

ಗಂಟೆಯ ನೆಂಟನೆ ಓ ಗಡಿಯಾರ,
ಬೆಳ್ಳಿಯ ಬಣ್ಣದ ಗೋಲಾಕಾರ,
ವೇಳೆಯ ತಿಳಿಯಲು ನೀನಾಧಾರ,
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ಹಗಲೂ ಇರುಳೂ ಒಂದೇ ಬಾಳು,
ನೀನಾಪಾಗಲು ದುಡಿಯುವ ಆಳು,
ಕಿವಿಯನು ಹಿಂಡಲು ನಿನಗದು ಕೂಳು
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ಮುಖವೊಂದಾದರು ದ್ವಾದಶ ನೇತ್ರ !
ಎರಡೇ ಕೈಗಳು ಏನು ವಿಚಿತ್ರ !
ಯಂತ್ರಪುರಾಣದ ರಾಕ್ಷಸ ಪುತ್ರ !
ಟಿಕ್ ಟಿಕ್ ಗೆಳೆಯಾ. ಟಿಕ್ ಟಿಕ್ ಟಿಕ್

ಟಿಕ್ ಟಿಕ್ ಎನ್ನುತ ಹೇಳುವೆಯೇನು ?
ನಿನ್ನೀ ಮಾತಿನ ಒಳಗುಟ್ಟೇನು ?
ಕಾಲವು ನಿಲ್ಲದು ಎನ್ನುವೆಯೇನು ?
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ನಿನಗೆಲ್ಲಿರುವಳು ಸಖಿ ವಿಶ್ರಾಂತಿ ?
ಆದರು ಮೊಗದಲಿ ಮೂಡಿದೆ ಕಾಂತಿ !
ಇದುವೇ ಕರ್ಮರಹಸ್ಯದ ಶಾಂತಿ.
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ದುಡಿಯುವದೊಂದೇ ಕೂಲಿಯ ಕರ್ಮ !
ದುಡಿಸುವದೇ ಶ್ರೀಮಂತರ ಧರ್ಮ !
ಇಂತಿರುವುದು ಭಗವಂತನ ಮರ್ಮ !
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್ *

ಹನುಮಂತು

—ಜಿ. ವರದರಾಜ ರಾವ್

ಹನುಮಂತು !
  ಹನುಮಂತು !

ಕೂಗುವುದೇ ತಡ
ಎದ್ದು ನಿಂತಿತಾ
  ಮಂಗಣ್ಣ !
ಅಂಗಿ, ಷರಾಯಿಯ
ಹಸುರು ಕುಲಾವಿಯ
ತೊಟ್ಟುಕೊಂಡಿಹ
  ಮಂಗಣ್ಣ !

ದೊಡ್ಡ ಪೇಟೆಗೆ
ಅಂಗಡಿ ಬೀದಿಗೆ
ಮನೆಯುಜಮಾನರು



ಹೆಜ್ಜೆಯಿಕ್ಕುತ
ಹೋಗುವುದೆಂತು?
ಹನುಮಂತು !
ಹನುಮಂತು !

ಎರಡೂ ಕೈಗಳ
ಕಟ್ಟುತ ಹಿಂದೆ
ಕತ್ತ ತಗ್ಗಿಸುತ
ಹೊರಟಿತು ನಿಂತು
ಮಂಗಣ್ಣ !
ಮಂಗಣ್ಣ !

ಅತ್ತೆಯ ಮನೆಯಲಿ
ಕೆಲಸವ ಮಾಡಲು
ಯಾರೂ ಇಲ್ಲದೆ
ಕಾಗದ ಬಂದಿದೆ-
ಎಂದು ಹೊರಡುವೆ ?
ಹನುಮಂತು !
ಹನುಮಂತು !

ಸೊಂಟವ ತೋರಿಸಿ
ಕುಂಟತೊಡಗಿತು !
ತಲೆಯನು ತೋರಿಸಿ
ಬಲು ನೋವೆಂದಿತು !

ಅತ್ತೆಯ ಹೆಸರನು
ಕೇಳುತ, ಒಲ್ಲೆನು
ಎಂದು ಕೂತಿತು
ಮಂಗಣ್ಣ !
ಮಂಗಣ್ಣ !

ಅಮ್ಮನ ಮನೆಗೆ
ನಿಮ್ಮ ಊರಿಗೆ
ಹೋಗುವೆಯಂತೆ
ನೋಡುವೆಯಂತೆ -
ಎಂದು ಹೊರಡುವೆ?
ಹನುಮಂತು !
ಹನುಮಂತು !

ಛಂಗನೆ ಹಾರಿತು !
ಚಿಮ್ಮಿ ನೆಗೆಯಿತು !
ಮೂಟೆಯ ಹೊತ್ತು
ಎದ್ದು ನಿಂತಿತು !
ಸಿದ್ಧವಾಯಿತು !
ಇಂದೇ ಹೊರಡುವೆ
ಎಂದು ನಿಂತಿತು !
ಮಂಗಣ್ಣ !
ಮಂಗಣ್ಣ !

ತ್ರೇತಾಯುಗದಲಿ
ದೇವರ ಬಳಿಯಲಿ

ಉಪ್ಪುನೀರಿನ
ದೊಡ್ಡ ಸಮುದ್ರವ
ಹೇಗೆ ದಾಟಿದೆ ?
ಹನುಮಂತು !
ಹನುಮಂತು !

ಕೇಳಿದ ಕೂಡಲೆ
ಚಕ್ರವ ಹಿಡಿಯಲು
ಎರಡಡಿ ಎತ್ತರ
ಹಾರಿತು ಒಮ್ಮೆ !
ಚಿಮ್ಮಿ ನೆಗೆಯಿತು
ಇನ್ನೊಮ್ಮೆ !
ಮಂಗಣ್ಣ !
ಮಂಗಣ್ಣ !

ರಾವಣನೆದುರಲಿ
ಬಾಲಬಿಚ್ಚುತಲಿ
ಕೂತಿರೆ ನೀನು,
ಕಿಡಿಕಿಡಿಯಾಗುತ
ಬೆಂಕಿ ಹೊತ್ತಿಸಲು
ಲಂಕೆ ಪಟ್ಟಣವ
ಹೇಗೆ ಸುಟ್ಟೆಯೋ ?
ಹನುಮಂತು !
ಹನುಮಂತು !

ಎರಡು ಕೈಗಳಲಿ
ಬಾಲವ ಹಿಡಿದು
ಸುತ್ತಲಿದ್ದವರ
ಹತ್ತಿರ ಸುಳಿದು
ಬಂದು ಕೂತಿತು
ಪೀಠದ ಮೇಲೆ
ಮಂಗಣ್ಣ !
ಮಂಗಣ್ಣ !

ಅದೊ ! ಅಮ್ಮಾವರು
ಬಂದರು ನೋಡು !
ಮಾಡು ಸಲಾಮನು
ಅಕ್ಕಿಯ ಬೇಡು,
ಹನುಮಂತು !
ಹನುಮಂತು !

ಸಲಾಮುಮಾಡಿ
ಬಟ್ಟಲ ನೋಡಿ
ತಲೆಮೇಲಿಟ್ಟು
ಹೆಜ್ಜೆಯನಿಟ್ಟು
ಹೊರಟಿತು ಮುಂದೆ !
ರೆಪ್ಪೆಯ ಬಡಿಯುತ
ಕೂತುಕೊಂಡಿತು
ಮಂಗಣ್ಣ !
ಮಂಗಣ್ಣ !

ಹೇಳಿದ ಮಾತನು
ಕೇಳುವನಣ್ಣ !
ಹೇಳಿದಂತೆಯೆ
ಮಾಡುವನಣ್ಣ !
ಹನುಮಂತು !
ಹನುಮಂತು ! *

ಬಿದಿಗೆಯ ಚಂದಿರ

—ಚೆನ್ನವೀರ ಕಣವಿ

೧

ಮಿದು ಬೆರಳಿನ ಸೆಳ್ಳುಗುರಿನ ಹಾಗೆ
ಬೆಳಗೆ ಬಿದಿಗೆಯ ಚಂದಿರನೆ,
ಹಾಯಿಯ ಬಿಚ್ಚದೆ ತೇಲುತ ಹೊರಟೆ
ಹೇಳು ಎಲ್ಲಿಹುದು ನಿನ್ನ ಮನೆ ?

೨

ನೀಲಾಕಾಶದಿ ದೋಣಿಯ ಹಾಗೆ
ತೇಲಿದೆ, ಉರುಳಿದೆ ಬೆಳ್ಳಿ ಬಳೆ ;
ನನಗೂ ದೋಣಿಯ ಹತ್ತಿಸು, ನಿನಗೊ
ಕೊಡಿಸುವೆ ಉಂಡಿ, ಕೋಡಬಳೆ.

೩

ಮೂಡಲ ಮೋರಿಯು ಕೋಡಿನ ಹಾಗೆ
ಚೂಪಾಗಿರುತಿಹೆ ಎರಡು ಕಡೆ:
ಇರಿಯುತ ನನ್ನನು ಕೆಡವೇ ಬಿಟ್ಟರೆ
ನೋಡು: ನಿನ್ನ ಜೊತೆ ಮಾತಾಡೆ.

೪

ಬಿಲ್ಲಿನಂತೆ ನಸು ಬಾಗಿದ ಚಂದಿರ-
ಬಾಣವೆಲ್ಲಿಹುದು ? ಕಾಣಿಸದು ;
ಚಿಕ್ಕೆಯು ಹಿಂಡಿಗೆ ಬಾಣವ ಬಿಟ್ಟರೆ
ಚಕ್ಕನೆ ಭೂಮಿಗೆ ಬೀಳುವದು.

೫

ಕುಂಬಕಾಯಿಯ ಹೋಳಿನ ಹಾಗೆ
ಬಾನ ಬುಟ್ಟಿಯಲಿ ಕುಳಿತಿರುವೆ;
ಅಮ್ಮನ ಕೈಯೊಳು ಸಿಕ್ಕರೆ ನೀನು
ಕಮ್ಮಗೆ ಪಡೆಯನು ಮಾಡಿಸುವೆ.

೬

ಕೊರೆದ ಕನ್ನಡಿಯು ಬಾನಿಗೆ ತೂಗಿದ
ಹಾಗೆ ಹೊಳೆಯುತಿಹ ಚಂದಿರನೆ–
ನನ್ನೀ ಮುಖವೊ ಕಾಣಿಸುತಿರುವುದೆ ?
ನೋಡುವೆ ಬಾರೋ ಕೈಯೊಳಗೆ.

*

ಹಾವಿನ ಹಾಡು

—ಪಂಜೆ ಮಂಗೇಶ ರಾವ್

ನಾಗರ ಹಾವೆ! ಹಾವೊಳು ಹೂವೆ !
ಬಾಗಿಲ ಬಿಲದಲಿ ನಿನ್ನಯ ಠಾವೆ ?
ಕೈಗಳ ಮುಗಿವೆ, ಹಾಲನ್ನೀವೆ
ಬಾ ಬಾ ಬಾ ಬಾ ಬಾ ಬಾ ಬಾ

ಹಳದಿಯ ಹೆಡೆಯನು ಬಿಚ್ಚೋ ಬೇಗಾ
ಹೊಳಹಿನ ಹೊಂದಲೆ ತೂಗೋ ನಾಗಾ !
ಕೊಳಲನ್ನೂದುವೆ ಲಾಲಿಸು ರಾಗಾ
ನೀ ನೀ ನೀ ನೀ ನೀ ನೀ ನೀ ನೀ

ಎಲೆ ನಾಗಣ್ಣ, ಹೇಳೆಲೊ ನಿನ್ನ
ತಲೆಯಲಿ ರನ್ನವಿಹ ನಿಜವನ್ನಾ
ಬಲು ಬಡವಗೆ ಕೊಪ್ಪರಿಗೆಯ ಚಿನ್ನಾ
ತಾ ತಾ ತಾ ತಾ ತಾ ತಾ ತಾ ತಾ





ಬರಿಮೈ ತಣ್ಣಗೆ, ಮನದಲಿ ಬಿಸಿಹಗೆ,
ಎರಡೆಳೆ ನಾಲಗೆ ಇದ್ದರು ಸುಮ್ಮಗೆ
ಎರಗುವೆ ನಿನಗೆ, ಈಗಲೆ ಹೊರಗೆ
ಪೋ ಪೋ ಪೋ ಪೋ ಪೋ ಪೋ ಪೋ ಪೋ.

ಪಾತರಗಿತ್ತಿ ಪಕ್ಕ

—ಅಂಬಿಕಾತನಯದತ್ತ
(ದ. ರಾ. ಬೇಂದ್ರೆ)

ಪಾತರಗಿತ್ತೀ ಪಕ್ಕಾ
ನೋಡಿದೇನs ಅಕ್ಕಾ !

ಹಸಿರು ಹಚ್ಚಿ ಚುಚ್ಚಿ
ಮೇಲsಕರಿಸಿಣ ಹಚ್ಚಿ,

ಹೊನ್ನ ಚಿಕ್ಕಿ ಚಿಕ್ಕಿ
ಇಟ್ಟು ಬೆಳ್ಳಿ ಅಕ್ಕಿ,

ಸುತ್ತೂ ಕುಂಕುಮದೆಳಿ
ಎಳೆದು ಕಾಡಿಗೆ ಸುಳಿ,

ಗಾಳೀ ಕೆನೀಲೇನs
ಮಾಡಿದ್ದಾರ ತಾನ !

ನೂರು ಆರು ಪಾರು
ಯಾರು ಮಾಡಿಟ್ಟಾರು !

ಏನು ಬಣ್ಣ ಬಣ್ಣ
ನಡುವೆ ನವಿಲಗಣ್ಣ !

ರೇಶಿಮೆ ಪಕ್ಕ ನಯ
ಮುಟ್ಟಲಾರೆ ಭಯ !

ಹೂವಿನ ಪಕಳಿಗಿಂತ
ತಿಳಿವು ತಿಳಿವು ಅಂತ ?

ಹೂವಿಗೆ ಹೋಗಿ ತಾವ
ಗೆಲ್ಲಾ ತಿವಿತಾವ.

ಬನ ಬನದಾಗ ಆಡಿ
ಪಕ್ಕಾ ಹುಡಿ ಹುಡಿ ;

ಹುಲ್ಲುಗಾವಲದಾಗ
ಹಳ್ಳೀ ಹುಡುಗೀ ಹಾಂಗ–

ಹುಡದೀ ಹುಡದೀ ಭಾಳ
ಆಟಕ್ಕಿಲ್ಲ ತಾಳ.

ಕಿರೇ ಸೂರೇಪಾನ-
ದಲ್ಲಿ ಧೂಳಿಸ್ನಾನ.

ತುರುಬಿ ತುಂಬಿ ತೋಟ-
ದಲ್ಲಿ ದಿನದ ಊಟ.

ಕಳ್ಳಿಹೂವ ಕಡಿದು
ಹೂತುಟಿನೀರ ಕುಡಿದು ;

ನಾಯೀ ಛತ್ತರಿಗ್ಯಾಗ
ಕೂತು ವೋಜಿನ್ಯಾಗ,

ರುದ್ರಗಂಟಿ ಮೂಸಿ
ವಿಷ್ಣುಗಂಟಿ ಹಾಸಿ,

ಹೇಸಿಗೆ ಹೂವ ಬಳಿಗೆ
ಹೋಗಿ ಒಂದs ಗಳಿಗೆ,

ಮದಗುಣಿಕಿಯ ಮದ್ದು
ಹುರುಪಿಗಿಷ್ಟು ಮೆದ್ದು,

ಕಾಡ ಗಿಡ ಗಂಟಿ
ಅಂಚಿಗಂಟಿ ಗಿಂಟಿ,

ಸೀಗಿ ಬಳ್ಳಿ ತಾಗಿ
ಪಕ್ಕಾ ಬೆಳ್ಳಗಾಗಿ,

ಗೊರಟಿಗೆಗೆ ಶರಣ
ಮಾಡಿ ದೂರಿಂದsನ,

ಮಾಲಿಂಗಿನ ಬಳ್ಳಿ
ತೂಗೂ ಮಂಚದಲ್ಲಿ,

ತೂಗಿ ತೂಗಿ ತೂಗಿ
ಧಣಿಧಾಂಗ ಆಗಿ,

ಬೇಲೀಬಳ್ಳಿಯೊಳಗ
ಆದರ ನೆರಳ ತೆಳಗ

ನಿದ್ದಿಗುಳ್ಯಾಡಿ
ಪಗಡಿ ಪಕ್ಕಾ ಆಡಿ,

ಗುಲಬಾಕ್ಷಿಯು ಹೂವ
ಕುಶಲ ಕೇಳತಾವ ;

ಹುಡಿಯು ನೀರಿನ್ಯಾಗ
ತುಳಕಿಸುತ್ತ ಬ್ಯಾಗ

ಹಡಿಯೆ ಬೀಜ ಗಂಡು
ಹಾರ ಹರಿಕಿ ಅಂದು,

ಅಡವಿ ಮಲ್ಲಿಗಿ ಕಂಡು
ಆದರ ಕಂಪನುಂಡು,

ಹುಲ್ಲ ಹೊಲಕ ಬಂದು
ಗುಬ್ಬಿ ಬೆಳಸಿ ತಿಂದು,

ಇಷ್ಟು ಎಲ್ಲಾ ಮಾಡಿ
ಸಪ್ಪಳಿಲ್ಲದಾಡಿ,

ತಾಳ ಚಪ್ಪ ಚಕ್ಕ
ಕುಣಿತ ತಕ್ಕ ತಕ್ಕ ;

ಆಸಿ ಹಚ್ಚಿ ಹ್ಯಾಂಗ
ಕಂಡು ಸಿಕ್ಕಿಧಾಂಗ

ಸಿಕ್ಕಲ್ಲೋಡತಾವ
ಅಲ್ಲ್ಯಾ ಇಲ್ಲ್ಯಾ ಅವs.

ಕಾಣದೆಲ್ಲೊ ಮೂಡಿ
ಬಂದು ಗಾಳಿಗೂಡಿ,

ಇನ್ನು ಎಲ್ಲಿಗೋಟ ?
ನಂದನದ ತೋಟ !

*

ನಾಯಿಯ ಕೊಡೆ

—ಬಿ. ಎ. ಸನದಿ

‘ಅಮ್ಮಾ ಅಮ್ಮಾ’ ಎನ್ನುತ ಸುಮ್ಮಾ
ಕರೆದಳು ತಾಯಿಯ ಹಿತ್ತಿಲಕೆ
ಬಿಳಿ ಕೊಡೆಯೊಂದರ ಕಡೆ ಕೈ ಮಾಡುತ
‘ಏನದು?’ ಎಂದಳು ತಿಳಿಯದಕೆ.

‘ನಾಯಿಯ ಕೊಡೆಯದು, ಸಂಜೆಗೆ ತಡೆಯದು
ಕೆಲಸಕೆ ಬಾರದು, ಬಾ ಮಗಳೆ’
ಎನ್ನುತ ತಾಯಿಯು ಮನೆಯೊಳು ಹೋದಳು;
ಆದರು ನಿಂತಳು ಆ ತರಳೆ !


ಆಗಲೆ ಜಿಟಿ ಜಿಟಿ ಮಳೆ ಬರಹತ್ತಲು
ಸುಮ್ಮಾ ಮನೆಯೊಳು ಬರುತಿರಲು
ಬೇಲಿಯ ಆಚೆಗೆ ಮಳೆಯೊಳು ತೊಯ್ಯುತ
ನಿಂತಾ ನಾಯಿಯ ನೋಡಿದಳು !

ಒಡನೆಯೆ ತಾಯಿಯ ನುಡಿ ನೆನಪಾಯಿತು
ಕೂಡಲೆ ಹಿಂದೋಡಿದಳಾಕೆ !
ಕಿತ್ತಳು ನಾಯಿಯ ಕೊಡೆಯನು, ತಂದಳು
ತೊಯ್ಯುವ ನಾಯಿಗೆ ಕೊಡುವುದಕೆ !

'ಹಿಡಿ ಹಿಡಿ ಕೊಡೆಯನು ತೊಯ್ಯುವೆಯೇತಕೆ?
ನಿನಗೆಲ್ಲಿದೆ ಮನೆ ನಿಲ್ಲಲಿಕೆ ?'
ಎನ್ನುತ ಸುಮ್ಮಾ ಕೊಡೆ ಕೊಡಹೋದಳು
ತಿಳಿಯದೆ ನಾಯಿಯ ಹತ್ತಿರಕೆ !

ಬೊಗಳದೆ ಸುಮ್ಮನೆ ನಿಂತಾ ನಾಯಿಯು
ಒಮ್ಮೆಲೆ ಕಚ್ಚಿತು ಬೆರಳನ್ನು !
ಕೊನೆಗೂ ಅಮ್ಮಾ ಅಮ್ಮಾ ಎನುತಲೆ
ಸುಮ್ಮಾ ಹೊಕ್ಕಳು ಮನೆಯನ್ನು !





ಅಂಚೆಯವನು

—ದಿನಕರ ದೇಸಾಯಿ

ಓಲೆಯ ಹಂಚಲು ಹೊರಡುವೆ ನಾನು
ತೋರಲು ಆಗಸದಲಿ ಬಿಳಿ ಭಾನು ;
ಮನೆಯಲಿ ನೀವು ಬಿಸಿಲಲಿ ನಾನು,
ಕಾಗದ ಬಂತು ಕಾಗದವು.

ಹೆಗಲಲಿ ಹಳದಿಯ ಹಸುಬೆಯು ನೀಡಿ,
ಕಾಲಲಿ ಚರ್ಮದ ಮೆಟ್ಟಿನ ಜೋಡಿ ;
ತಲೆಯಲಿ ಖಾಕಿಯ ಪಗಡಿಯು ನೋಡಿ:
ಓಲೆಯ ತಂದೆ ಓಲೆಯನು.

ಒಳಗಿಂದಲಿ ಜನರೆನ್ನನು ಕಂಡು
ಬೇಗನೆ ಹೊರ ಅಂಗಳಕೈತಂದು
'ಕಾಗದವಿದೆಯೇ ?' ಅನ್ನುವುದುಂಟು !
ಕಾಗದ ಬಂತು ಕಾಗದವು.

ಸೊಗಸಿನ ಸುದ್ದಿಯ ತರುವೆನು ನಿಮಗೆ ;
ದುಃಖದ ವಾರ್ತೆಯ ಕೊಡುವೆನು ತಮಗೆ ;
ಎಲ್ಲಾ ಸುದ್ದಿಗಳೊಂದೇ ನಮಗೆ !
ಓಲೆಯು ತಂದೆ ಓಲೆಯನು.

ಇದು ಧನಹೀನರ, ಇದು ಹಣವಂತರ,
ಇದು ಗುಣಹೀನರ, ಇದು ಗುಣವಂತರ,
ಕಾಗದವೆನ್ನುತ ಮಾಡೆನು ಅಂತರ !
ಕಾಗದ ಬಂತು ಕಾಗದವು.

'ಗಂಡನು ನಾಳೆಗೆ ಬರುವನು' ಎಂದು
ಅಯ್ಯೋ ಹೆಂಡತಿ ತೀರಿದಳೆಂದು,
ಹಿಗ್ಗುವ ತಗ್ಗುವ ಮೂರ್ಖರಿಗೆಂದು
ಓಲೆಯು ತಂದೆ ಓಲೆಯನು.

ಓಲೆಯ ಕೊಡುವಧಿಕಾರಿಯು ನಾನು,
ಆದರು ಅದರಲಿ ಬರೆದುದು ಏನು ?
ಎಂಬುದನರಿಯೆನು ! ಬಲು ಸುಖಿ ನಾನು !
ಕಾಗದ ಬಂತು ಕಾಗದವು.

*



ಹಕ್ಕೀ ಪುಚ್ಚ

—ಚನ್ನವೀರ ಕಣವಿ

೧

ಮಿರಿ ಮಿರಿ ಮಿಂಚುವ ಹಕ್ಕಿಯು ಪುಚ್ಚ
ಗಿರಿಗಿರಿ ತಿರುಗಿದೆ ನೋಡಣ್ಣ :
ಹಣ್ಣಿನ ತೋಟದ ಬೇಲಿಯು ಹೊರಗೆ
ಸಿಕ್ಕಿತು ನನಗೀ ಗರಿಯಣ್ಣ.

೨

ತೋಟದಿ ಉದುರಿಸಿ ಗರಿಯನು ಹಕ್ಕಿ
ಹುಡುಕುತ್ತಿರುವುದೆ ಗಾಳಿಯಲಿ ?
ಬಣ್ಣದ ಗರಿಯನು ಜೊಣ್ಣದ ಕಿಸೆಯಲಿ
ಇಡುವೆನು ಯಾರಿಗೂ ಹೇಳದಿರಿ.

೩

ಕಾಮನ ಬಿಲ್ಲಿನ ಬಣ್ಣದ ಗರಿಯಿದು
   ಹಾರುತ ಮೆಲ್ಲನೆ ಇಳಿಯುವದು ;
ಹಕ್ಕಿಯು ಬಂದು ಗುರುತನು ಹಿಡಿದರೆ
   ನಾನೇ ಪುಚ್ಚಕೆ ಚುಚ್ಚುವೆನು.

೪

ಬೆರಳಿಗೆ ಮೆತ್ತಗೆ ರೇಶಿಮೆ ನುಣುಪು
   ಮಿನಿ ಮಿನಿ ಬಂಗಾರದ ಹೊಳಪು ;
ಹುಡುಕುವೆ ಏತಕೆ ? ಬಾರದೆ ನೆನಪು ?
   ಇಲ್ಲಿದೆ ಬಾ, ಗರಿ ಕಿನಕಾಪು.

೫

ಟೊಪ್ಪಿಗೆ ತುದಿಯಲಿ ಒಪ್ಪುವ ಗರಿಯಿದು,
   ರಾಜನಂತೆ ನಾ ಡೌಲಿನಲಿ
ನಡೆಯುವೆ ; ಬಣ್ಣದ ಹಕ್ಕಿಯು ಕೇಳಲಿ :
   ಕೊಟ್ಟುಬಿಡುವೆ ಸಂತೋಷದಲಿ.

ಗಂಟೆಯ ದರ್ಬಾರು

—ಜಿ. ವರದರಾಜ ರಾವ್

ಠಣ ಠಣ ! ಠಣ ಠಣ !
ಠಣ್, ಠಣ್, ಠಣ್ !
ಝಣ ಝಣ ! ಝಣ ಝಣ !
ಝಣ್, ಝಣ್, ಝಣ್ !

ಕೇಳಿರಿ ಮಕ್ಕಳೆ ! ಕೇಳಿರಿ ಮಕ್ಕಳೆ !
ಹೇಳುವೆ ಗಂಟೆಯ ದರ್ಬಾರ !
ಇದು ಕಥೆಯಲ್ಲ, ಇದು ಸುಳ್ಳಲ್ಲ,
ಗಂಟೆಯ ಜೋರದು ಬಲು ಪೂರ !

ನಿದ್ದೆಯ ಮಾಡುವ ದೇವರ ಎಬ್ಬಿಸಿ
ಗಂಟೆಯ ರಾಯನು ಮೆರೆಯುವನು
ದೀಪವ ಹೊತ್ತಿಸಿ, ಪೂಜೆಯ ಮಾಡಿಸಿ
ತೆಂಗಿನಕಾಯನು ಒಡೆಸುವನು.

ಗಂಟೆಯು ಬಾರಿಸೆ ಕಛೇರಿಯಲ್ಲಿ
ಭಂಗನೆ ನೆಗೆವರು ಸೇವಕರು !
'ಠಣಠಣ!' ಎನ್ನಲು ಬೀದಿಯೊಳಲ್ಲಿ
ಸರ್‍ರನೆ ಸರಿವರು ದಾರಿಗರು !

ಢಣಢಣ ಎನ್ನುತ ಶಾಲೆಯ ಹೊತ್ತಿಗೆ
ಕರೆಯುವನ್ನೈ ಗಂಟೆಯ ರಾಜ !
ಪಾಠವು ಮುಗಿಯಲು ಆಟದ ವೇಳೆಗೆ
ಬಿಡುಗಡೆ ಕೊಡುವನು ಈ ರಾಜ !

ಬಗೆಬಗೆ ತಿಂಡಿಯ ಬಂಡಿಯ ಬುಡದಲಿ
ಕಂಚಿನ ಗಂಟೆಯು ತೂಗುವುದು !
ತಿರುಗುವ ಬೀದಿಯ ಬಸವನ ಕೊರಳಲಿ
ಗಂಟೆಯು ಘಣ ಘಣ ಎನ್ನುವುದು !

ಗುಡಿ–ಗುಡಿಸಿಲುಗಳ ಒಳ, ಹೊರಗೆಲ್ಲಾ
ಗಂಟೆಯ ಶಬ್ದವೆ ಬಲು ಜೋರು !
ಕೇಳಿರಿ ಮಕ್ಕಳೆ ! ಲೋಕದೊಳೆಲ್ಲಾ !
ಗಂಟೆಯ ಬಂಟನ ದರ್ಬಾರು !

ಠಣಠಣ । ಠಣಠಣ ।
ಠಣ್, ಠಣ್, ಠಣ್ ।
ಝಣ ಝಣ । ಝಣ ಝಣ ।
ಝಣ್, ಝಣ್, ಝಣ್ ।

*


Gujjar



ಕಥೆ

ಅದಕ್ಕೇ ಆ ಹೆಸರು

—ಹೊಯಿಸಳ

ಒಂದೂರಿನಲ್ಲಿ ಒಂದು ಎಮ್ಮೆ. ಅದು ಹಾಲು ಕೊಟ್ಟು ನೀರು ಕುಡಿದು ಹಿಂಡಿ ತಿಂದು ಹೊರಗೆ ಹೊರಟಿತು.

ಕೊಂಬು ಅಲ್ಲಾಡಿಸಿಕೊಂಡು, ಬಾಲ ಬೀಸಿಕೊಂಡು ಎಮ್ಮೆ ಮನೆಬಿಟ್ಟು ಹೊರಗೆ ಹೊರಟಿತು. ಊರ ಹಾದಿ ಬಿಟ್ಟಿತು. ತೋಟದ ಹಾದಿ ಹಿಡಿಯಿತು.

ಅಲ್ಲಿ ಒಂದು ತೋಟವಿತ್ತು. ಅದರ ತುಂಬ ಬಾಳೇಗಿಡ. ಬಾಳೇಗಿಡಗಳ ತುಂಬ ಬಾಳೇಗೊನೆಗಳು. ತೋಟದೊಳಗೆ ಅಡಿಕೆಮರಗಳೂ ಇದ್ದವು. ಅಡಿಕೆಮರಗಳಿಗೆ ಹಂಬು ಹಬ್ಬಿದ್ದುವು. ಹಣ್ಣಿನ ಗಿಡಗಳೂ, ಹೂವಿನ ಗಿಡಗಳೂ ಅಲ್ಲೆಲ್ಲ ಇದ್ದುವು.

ಎಮ್ಮೆ ಬೇಲಿ ನುಗ್ಗಿ ಮುರಿಯಿತು. ಬಾಳೆ ಹಾಳಾಯಿತು. ಹಂಬು ಹರಿಯಿತು. ಹೂವಿನ ಗಿಡಗಳೆಲ್ಲ ಮುರಿದು ಮಲಗಿದುವು. ಏಕೆ ? ಎಮ್ಮೆ ನುಗ್ಗಿ ಓಡಾಡಿ ಬಾಯಿಟ್ಟಿದ್ದಕ್ಕೆ !

ಅಲ್ಲಿ ಒಂದು ನೀರಿನ ಹೊಂಡವಿತ್ತು. ಅಲ್ಲಿ ಎಮ್ಮೆ ನುಗ್ಗಿ ಕಾಲಾಡಿ ಕೆಸರು ಮಾಡಿ ಮಲಗಿಬಿಟ್ಟಿತು. ಎಮ್ಮೆಗೆ ಆಗ ಬಹಳ ಆನಂದ.

ಆ ವೇಳೆಗೆ ತೋಟಗಾರನು ಅಲ್ಲಿಗೆ ಬಂದನು. ಹಾಳಾಗಿ ಹೋಗಿದ್ದ ಆ ಬಾಳೆಗಳನ್ನೂ, ಆ ವೀಳೆಯ ಹಂಬುಗಳನ್ನೂ ನೋಡಿ ಅತ್ತನು. ಹಾಗೇ ಅತ್ತಕಡೆ ಹೋಗಿ ನೋಡಿದನು. ಅಲ್ಲಿ ಕೆಸರಲ್ಲಿ ಎಮ್ಮೆ ಮಲಗಿತ್ತು. ತೋಟಗಾರನು ಬಹಳ ರೇಗಿದನು. ಒಂದು ಬರಳನ್ನು ಮುರಿದುಕೊಂಡನು.

ಎಮ್ಮೆಗೆ ಒಂದು ಏಟು ಬಿತ್ತು—ಪಠಾರ್ !

'ಪಠಾರ್'—ಅಂತ ಒಂದು ಏಟು ಬಿದ್ದಕೂಡಲೆ ಎಮ್ಮೆ ಮಲಗಿದ್ದ ಹಾಗೆಯೇ ಎಂದುಕೊಂಡಿತು— 'ಅದೇಕೋ ಕೆಸರು ಹಾರಿತು ! ಯಾರು ಕೆಸರು ಹಾರಿಸಿದವರು ?'

ಎರಡನೆಯ ಏಟು ಬಲವಾಗಿ ಬಿತ್ತು—ಪಠಾರ್ !

'ಪಠಾರ್'—ಎಂತ ಎರಡನೆಯ ಬಾರಿ ಕೋಲು ತಗುಲಿದಾಗ ಎಮ್ಮೆ ಕಣ್ಣರಳಿಸಿ ನೋಡಿ ಹೇಳಿಕೊಂಡಿತು— 'ಯಾರೋ ಪಾಪ ! ಯಾರನ್ನೋ ಹೊಡೆಯುತ್ತಾರೆ ! ಅದೇಕೆ ?'

ಮೂರನೆಯ ಬಾರಿ ಕೋಲು ಎಮ್ಮೆಯ ಬೆನ್ನಿಗೆ ತಗುಲಿತು. ಆಗ ಎಮ್ಮೆ ಎದ್ದು ನಿಂತಿತು. ತನಗೆ ತಾನೇ ಹೇಳಿಕೊಂಡಿತು— 'ಇದೇನು? ಇಲ್ಲೇ ಯಾರನ್ನೊ ಹೊಡೆಯುತ್ತಾ ಇದ್ದಾರಲ್ಲವೆ ? ಯಾರನ್ನಿರಬಹುದು ?'

ನಾಲ್ಕನೆಯ ಬಾರಿ ತೋಟಗಾರನು ಎಮ್ಮೆಯ ಬೆನ್ನಿಗೆ ಚುರುಕ್ ಎನ್ನುವ ಹಾಗೆ ಬಾರಿಸಿದನು—ಪಠಾರ್ ।

ಆಗ ಎಮ್ಮೆ ತಿಳಿದುಕೊಂಡಿತು—'ನನಗೇ ಹೊಡೆಯುತ್ತಾರೆ ! —ಇಲ್ಲಿ ನಿಲ್ಲಬಹುದೆ, ನಿಲ್ಲಬಾರದೆ ?' ಎಂದು ಯೋಚಿಸುತ್ತಿತ್ತು.

ಐದನೆಯ ಬಾರಿ ಕೋಲು ಮೇಲಿನಿಂದ ಬಂದು ಎಮ್ಮೆಯ ಬೆನ್ನಿನ ಮೇಲೆ 'ಪಠಾರ್' ಅಂತ ಶಬ್ದ ಮಾಡಿತು. ಆಗ ಎಮ್ಮೆಗೆ ಚೆನ್ನಾಗಿ ಎಚ್ಚರವಾಯಿತು. ಅಲ್ಲಿ ನಿಲ್ಲದೆ ಅದು ನೆಗೆದು ನಾಗಾಲೋಟದಿಂದ ಓಡಿಹೋಯಿತು.

ಆ ತೋಟಗಾರನು ಆಗ ಬಿದ್ದು ಬಿದ್ದು ನಕ್ಕನು. ನಗು ನಗುತ್ತ ಹೇಳಿದನು—'ಅದಕ್ಕೆ ತಾನೆ ನಿನಗೆ ಎಮ್ಮೆ ಎಂದು ಹೇಳುತ್ತಾರೆ. ಅಯ್ಯೋ ಎಮ್ಮೆಯೆ! —ಅದಕ್ಕೇ ಆ ಹೆಸರು !'

ಗೋಳೂರಿನ ಗಾಯಕರು

—ಜಿ. ಪಿ. ರಾಜರತ್ನಂ

ಒಂದನೆಯ ಭಾಗ

ಒಂದು ಊರಿನಲ್ಲಿ ಒಂದು ಬೀದಿ. ಅಲ್ಲಿ ಒಬ್ಬ ಅಗಸನ ಮನೆ. ಅವನ ಮನೆಯಲ್ಲಿ ಒಂದು ಕತ್ತೆ.

ಒಂದು ದಿನ ಅಗಸ "ಕತ್ತೇ! ಏ ಕತ್ತೇ!" ಎಂದು ಕೂಗಿದ.

ಕತ್ತೆ ಬಂತು.

''ಏ ಕತ್ತೆ! ನೀನು ಮುದಿಯಾದೆ. ನಿನಗೆ ಬಲ ಕಡಿಮೆ ಯಾಯಿತು. ನೀನು ಮೊದಲಿನ ಹಾಗೆ ಬಟ್ಟೆಯ ಮೂಟೆ ಹೊರ

ಲಾರೆ. ಆದ್ದರಿಂದ ನೀನು ನನ್ನ ಮನೆಯಲ್ಲಿರಬೇಡ. ಬಿಟ್ಟು ಹೋಗು'' ಎಂದು ಅಗಸ ಹೇಳಿದ.

"ಅಯ್ಯೋ ಅಯ್ಯೋ ಇಷ್ಟು ದಿನವೂ ನಿನ್ನ ಮನೆಯಲ್ಲೇ ದುಡಿದು ದುಡಿದು ನಾನು ಮುದಿಯಾಗಿದ್ದೇನೆ. ಈಗ ನೀನು ನನ್ನನ್ನು ಹೀಗೆ ಅಟ್ಟಿದರೆ, ನಾನು ಎಲ್ಲಿಗೆ ಹೋಗಲಿ ?" ಎಂದು ಕತ್ತೆ ಕೇಳಿತು.

"ಎಲ್ಲಿಗಾದರೂ ಹೋಗು" ಎಂದ ಅಗಸ.

ಕತ್ತೆ "ಬೇಡ,ಹೀಗೆ ಅಟ್ಟಬೇಡ. ನಾನು ಹುಟ್ಟಿದ್ದೂ ಇಲ್ಲೇ. ನಾನು ಬೆಳೆದದ್ದೂ ಇಲ್ಲೇ. ನಾನು ದುಡಿದದ್ದೂ ಇಲ್ಲೇ. ನಾನು ಇಲ್ಲೇ ಸಾಯುತ್ತೇನೆ ಬಿಡು" ಎಂದಿತು.

ಅದಕ್ಕೆ ಅಗಸ–"ಇಲ್ಲೇ ಸಾಯುತ್ತೀಯಾ! ತಾಳು. ಇಲ್ಲೇ ಸಾಯಿಸುತ್ತೇನೆ" ಎಂದು ಒಂದು ದೊಣ್ಣೆ ತಂದು, ಆ ಕತ್ತೆಯನ್ನು ರಪರಪನೆ ಚಚ್ಚಿದ.

ಕತ್ತೆ ಗೋಳೋ ಎಂದು ಅಳುತ್ತ, "ನನ್ನನ್ನು ಏಕೆ ಹೀಗೆ ಚಚ್ಚುತ್ತೀಯೋ ? ನಾನೇನು ತಪ್ಪು ಮಾಡಿದೆ ? ನೀನು ನನ್ನನ್ನು ಈ ಮನೆಯಿಂದ ಅಟ್ಟಿಬಿಟ್ಟರೆ, ನಾನು ಎಲ್ಲಿಗೆ ಹೋಗಲಿ ? ಏನು ಮಾಡಲಿ?" ಎಂದಿತು.

ಅಗಸ, ಅದನ್ನು ಚಚ್ಚುವುದು ನಿಲ್ಲಿಸಿ, "ಹಾಗಾದರೆ ಒಂದು ಕೆಲಸ ಮಾಡು. ನೀನು ತುಂಬ ಚೆನ್ನಾಗಿ ಹಾಡುತ್ತೀಯೆ. ಇಲ್ಲಿಯೇ ಪಕ್ಕದಲ್ಲಿರುವ ಗೋಳೂರಿಗೆ ಹೋಗು. ಅಲ್ಲಿ ಸಂಗೀತ ಹಾಡು. ಕೇಳಿದವರು ನಿನಗೆ ತುಂಬ ಅನ್ನ ಹಾಕುತ್ತಾರೆ" ಎಂದ.

ಕತ್ತೆ–"ಹಾಗೆಯೇ ಆಗಲಿ" ಎಂದು, ಅಗಸನ ಮನೆಯನ್ನು ಬಿಟ್ಟು, ಗೋಳೂರಿನ ಕಡೆಗೆ ಹೊರಟಿತು.

ಎರಡನೆಯ ಭಾಗ

ಅದೇ ಊರಿನಲ್ಲಿ ಇನ್ನೊಂದು ಬೀದಿ. ಅಲ್ಲಿ ಇನ್ನೊಬ್ಬರ ಮನೆಯಲ್ಲಿ ಒಂದು ನಾಯಿ. ಅಗಸನ ಮನೆಯ ಕತ್ತೆಯ ಹಾಗೆ ಅದೂ ಮುದಿಯಾಗಿತ್ತು. ಅದರ ಹಲ್ಲುಗಳೆಲ್ಲ ಉದುರಿಹೋಗಿದ್ದುವು.

ಒಂದು ದಿನ ಆ ಮನೆಯವನು, "ನಾಯೀ! ಏ ನಾಯೀ!" ಎಂದು ಕೂಗಿದ. ನಾಯಿ ಬಂತು.

"ಏ ನಾಯೀ! ನೀನು ಮುದಿಯಾದೆ. ನಿನ್ನ ಹಲ್ಲೆಲ್ಲ ಬಿದ್ದು ಹೋಯಿತು. ಕಳ್ಳರು ಯಾರಾದರೂ ಮನೆಗೆ ಬಂದರೆ ಕಚ್ಚು

ವುದಕ್ಕೆ ಕೂಡ ನಿನಗೆ ಶಕ್ತಿ ಇಲ್ಲ ; ಆದ್ದರಿಂದ ನೀನು ನನ್ನ ಮನೆಯಲ್ಲಿರಬೇಡ. ಬಿಟ್ಟುಹೋಗು" ಎಂದ.

"ಅಯ್ಯೋ ಅಯ್ಯೋ ಇಷ್ಟು ದಿನವೂ ನಿನ್ನ ಮನೆಯಲ್ಲೇ ದುಡಿದು ದುಡಿದು ನಾನು ಮುದಿಯಾಗಿದ್ದೇನೆ. ಈಗ ನೀನು ನನ್ನನ್ನು ಹೀಗೆ ಅಟ್ಟಿದರೆ, ನಾನು ಎಲ್ಲಿಗೆ ಹೋಗಲಿ ?" ಎಂದು ನಾಯಿ ಕೇಳಿತು.

ಅದಕ್ಕೆ ಮನೆಯವನು "ಎಲ್ಲಿಗಾದರೂ ಹೋಗು" ಎಂದ.

ನಾಯಿ "ಬೇಡ, ಹೀಗೆ ಅಟ್ಟಬೇಡ. ನಾನು ಹುಟ್ಟಿದ್ದೂ ಇಲ್ಲೇ, ನಾನು ಬೆಳೆದದ್ದೂ ಇಲ್ಲೇ. ನಾನು ದುಡಿದದ್ದೂ ಇಲ್ಲೇ. ನಾನು ಇಲ್ಲೇ ಸಾಯುತ್ತೇನೆ, ಬಿಡು" ಎಂದಿತು.

ಮನೆಯವನು "ಇಲ್ಲೇ ಸಾಯುತ್ತೀಯಾ ತಾಳು. ಇಲ್ಲೇ ಸಾಯಿಸುತ್ತೇನೆ" ಎಂದು ಒಂದು ಕೋಲು ತಂದು, ಆ ನಾಯಿಯನ್ನು ರಪರಪನೆ ಚೆಚ್ಚಿದ.

ನಾಯಿ ಗೋಳೋ ಎಂದು ಅಳುತ್ತ, "ನನ್ನನ್ನು ಏಕೆ ಹೀಗೆ ಚೆಚ್ಚುತ್ತೀಯೆ ? ನಾನೇನು ತಪ್ಪು ಮಾಡಿದೆ ? ನೀನು ನನ್ನನ್ನು ಈ ಮನೆಯಿಂದ ಅಟ್ಟಿಬಿಟ್ಟರೆ ನಾನು ಎಲ್ಲಿಗೆ ಹೋಗಲಿ ? ಏನು ಮಾಡಲಿ ?" ಎಂದಿತು.

ಮನೆಯುವನು ಅದನ್ನು ಚೆಚ್ಚುವುದು ನಿಲ್ಲಿಸಿ, "ಹಾಗಾದರೆ, ಒಂದು ಕೆಲಸಮಾಡು. ನೀನು ತುಂಬ ಚೆನ್ನಾಗಿ ಹಾಡುತ್ತೀಯೆ. ಇಲ್ಲಿಯೇ ಪಕ್ಕದಲ್ಲಿರುವ ಗೋಳೂರಿಗೆ ಹೋಗು. ಸಂಗೀತ ಹಾಡು. ಕೇಳಿದವರು ನಿನಗೆ ತುಂಬ ಅನ್ನ ಹಾಕುತ್ತಾರೆ" ಎಂದ.

ನಾಯಿ "ಹಾಗೇ ಆಗಲಿ" ಎಂದು ಆ ಮನೆಯನ್ನು ಬಿಟ್ಟು, ಗೋಳೂರಿನ ಕಡೆಗೆ ಹೊರಟಿತು.

ಹೀಗೆ ಮನೆ ಬಿಟ್ಟು ಹೊರಟ ನಾಯಿಗೆ ಅದೇ ಗೋಳೂರಿಗೆ ಹೊರಟ ಕತ್ತೆ ಸಿಕ್ಕಿತು.

"ಎಲ್ಲಿಗೆ ಹೊರಟೆ, ಕತ್ತೆ ?" ಎಂದಿತು ನಾಯಿ.

"ಗೋಳೂರಿಗೆ, ನೀನೆಲ್ಲಿಗೆ ?" ಎಂದಿತು ಕತ್ತೆ.

"ನಾನೂ ಗೋಳೂರಿಗೆ" ಎಂದಿತು ನಾಯಿ.

"ನಾನು ಮುದಿಯಾದೆನೆಂದು ನನ್ನ ಯಜಮಾನ ನನ್ನನ್ನು ಮನೆಯಿಂದ ಅಟ್ಟಿಬಿಟ್ಟ. ಗೋಳೂರಿಗೆ ಹೋಗಿ ಸಂಗೀತ ಹಾಡಿಕೊಂಡು ಬದುಕೋಣವೆಂದು ನಾನು ಹೊರಟಿದ್ದೇನೆ. ನೀನೇಕೆ ಹೊರಟಿದ್ದೀಯೆ ?" ಎಂದು ಕತ್ತೆ ಕೇಳಿತು.

"ನನ್ನ ಯಜಮಾನ ನನ್ನನ್ನೂ ಮುದಿಯೆಂದು ಮನೆಯಿಂದ ಅಟ್ಟಿಬಿಟ್ಟಿದ್ದಾನೆ. ನಾನೂ ಗೋಳೂರಿಗೆ ಹೋಗಿ ಸಂಗೀತ ಹಾಡಿ ಕೊಂಡು ಬದುಕೋಣವೆಂದು ಹೊರಟಿದ್ದೇನೆ. ಬಾ, ನಾವಿಬ್ಬರೂ ಒಟ್ಟಿಗೆ ಸಂಗೀತ ಕಚೇರಿ ಮಾಡೋಣ" ಎಂದು ನಾಯಿ ಹೇಳಿತು.

ಕತ್ತೆ ಅದಕ್ಕೆ ಒಪ್ಪಿತು.

ಹೀಗೆ ಆ ಕತ್ತೆ ಆ ನಾಯಿ ಎರಡೂ ಒಟ್ಟಿಗೆ ಗೋಳೂರಿಗೆ ಹೊರಟವು.

ಮೂರನೆಯ ಭಾಗ

ಅದೇ ಊರಿನಲ್ಲಿ ಇನ್ನೊಂದು ಬೀದಿ. ಅಲ್ಲಿ ಒಬ್ಬ ಮುದುಕನ ಮನೆಯಲ್ಲಿ ಒಂದು ಬೆಕ್ಕು. ಅಗಸನ ಕತ್ತೆಯ ಹಾಗೆಯೇ ಅದೂ ಮುದಿಯಾಗಿ ಹೋಗಿತ್ತು. ಅದರ ಬಾಯ ಹಲ್ಲುಗಳೂ, ಕಾಲಿನ ಉಗುರುಗಳೂ ಸವೆದು ಮೊಂಡಾಗಿ ಹೋಗಿದ್ದವು.

ಒಂದು ದಿನ ಆ ಮುದುಕ "ಬೆಕ್ಕೇ ಏ, ಬೆಕ್ಕೇ" ಎಂದು ಕೂಗಿದ.

ಬೆಕ್ಕು ಬಂತು.

"ಏ ಬೆಕ್ಕೇ ನೀನು ಮುದಿಯಾದೆ. ನಿನ್ನ ಹಲ್ಲೂ, ಉಗುರೂ ಮೊಂಡಾಗಿಬಿಟ್ಟಿವೆ. ಸಣ್ಣ ಸಣ್ಣ ಇಲಿಗಳನ್ನೂ ಕೂಡ ನೀನು ಹಿಡಿಯಲಾರೆ. ಆದ್ದರಿಂದ ನನ್ನ ಮನೆಯಲ್ಲಿರಬೇಡ. ಬಿಟ್ಟು ಹೋಗು" ಎಂದ.

"ಅಯ್ಯೋ ಅಯ್ಯೋ ಇಷ್ಟು ದಿನವೂ ನಿನ್ನ ಮನೆಯಲ್ಲೇ ದುಡಿದು ದುಡಿದು ನಾನು ಮುದಿಯಾಗಿದ್ದೇನೆ. ಈಗ ನೀನು ನನ್ನನ್ನು ಹೀಗೆ ಅಟ್ಟಿದರೆ, ನಾನು ಎಲ್ಲಿಗೆ ಹೋಗಲಿ ?" ಎಂದು ಬೆಕ್ಕು ಕೇಳಿತು.

ಅದಕ್ಕೆ ಮುದುಕ "ಎಲ್ಲಿಗಾದರೂ ಹೋಗು" ಎಂದ.

ಬೆಕ್ಕು "ಬೇಡ, ಹೀಗೆ ಅಟ್ಟಬೇಡ. ನಾನು ಹುಟ್ಟಿದ್ದೂ, ಇಲ್ಲೇ. ನಾನು ಬೆಳೆದದ್ದೂ ಇಲ್ಲೇ. ನಾನು ದುಡಿದದ್ದೂ ಇಲ್ಲೇ, ನಾನು ಇಲ್ಲೇ ಸಾಯುತ್ತೇನೆ ಬಿಡು" ಎಂದಿತು.

ಮುದುಕ "ಇಲ್ಲೇ ಸಾಯುತ್ತೀಯಾ ತಾಳು. ಇಲ್ಲೇ ಸಾಯಿಸುತ್ತೇನೆ" ಎಂದು ಒಂದು ಬೆತ್ತ ತಂದು, ಆ ಬೆಕ್ಕನ್ನು ರಪರಪನೆ ಚಚ್ಚಿದ.

ಬೆಕ್ಕು ಗೋಳೋ ಎಂದು ಅಳುತ್ತ, "ನನ್ನನ್ನು ಏಕೆ ಹೀಗೆ ಚಚ್ಚುತ್ತೀಯೆ ? ನಾನೇನು ತಪ್ಪುಮಾಡಿದೆ ? ನೀನು ನನ್ನನ್ನು

ಈ ಮನೆಯಿಂದ ಅಟ್ಟಿಬಿಟ್ಟರೆ ನಾನು ಎಲ್ಲಿಗೆ ಹೋಗಲಿ ? ಏನು ಮಾಡಲಿ ?" ಎಂದಿತು.

ಮುದುಕ ಅದನ್ನು ಚಿಚ್ಚುವುದು ನಿಲ್ಲಿಸಿ, "ಹಾಗಾದರೆ ಒಂದು ಕೆಲಸ ಮಾಡು. ನೀನು ತುಂಬ ಚೆನ್ನಾಗಿ ಹಾಡುತ್ತೀಯೆ. ಇಲ್ಲಿಯೇ ಪಕ್ಕದಲ್ಲಿರುವ ಗೋಳೂರಿಗೆ ಹೋಗು. ಅಲ್ಲಿ ಸಂಗೀತ ಹಾಡು. ಕೇಳಿದವರು ನಿನಗೆ ತುಂಬ ಅನ್ನ ಹಾಕುತ್ತಾರೆ" ಎಂದ.

ಬೆಕ್ಕು "ಹಾಗೆ ಆಗಲಿ" ಎಂದು ಆ ಮನೆಯನ್ನು ಬಿಟ್ಟು, ಗೋಳೂರಿನ ಕಡೆಗೆ ಹೊರಟಿತು.

ಹೀಗೆ ಮನೆ ಬಿಟ್ಟು ಹೊರಟ ಬೆಕ್ಕಿಗೆ ಅದೇ ಗೋಳೂರಿಗೆ ಹೊರಟ ಕತ್ತೆ, ನಾಯಿಗಳು ಸಿಕ್ಕಿದವು.

"ಎಲ್ಲಿಗೆ ಹೊರಟೆ ಕತ್ತೆ ? ಎಲ್ಲಿಗೆ ಹೊರಟೆ ನಾಯಿ ?" ಎಂದು ಬೆಕ್ಕು ಕೇಳಿತು.

"ಗೋಳೂರಿಗೆ ಹೊರಟಿದ್ದೇವೆ. ನೀನೆಲ್ಲಿಗೆ' ಎಂದು ಕತ್ತೆ, ನಾಯಿ ಕೇಳಿದವು.

"ನಾನೂ ಗೋಳೂರಿಗೆ" ಎಂದಿತು ಬೆಕ್ಕು.

"ನಾವು ಮುದಿಯಾದೆವೆಂದು ನಮ್ಮ ಯಜಮಾನರು ನಮ್ಮನ್ನು ಮನೆಯಿಂದ ಅಟ್ಟಿಬಿಟ್ಟರು. ಗೋಳೂರಿಗೆ ಹೋಗಿ ಸಂಗೀತ ಹಾಡಿಕೊಂಡು ಬದುಕೋಣವೆಂದು ಹೊರಟಿದ್ದೇವೆ. ನೀನೇಕೆ ಹೊರಟಿದ್ದೀಯೇ" ಎಂದು ಕತ್ತೆ ನಾಯಿಗಳು ಕೇಳಿದವು.

"ನನ್ನ ಯಜಮಾನ ನನ್ನನ್ನು ಮುದಿಯೆಂದು ಮನೆಯಿಂದ ಅಟ್ಟಿಬಿಟ್ಟಿದ್ದಾನೆ. ಬನ್ನಿ, ನಾವು ಮೂವರೂ ಸೇರಿ ಸಂಗೀತ ಕಚೇರಿ ಮಾಡೋಣ" ಎಂದು ಬೆಕ್ಕು ಹೇಳಿತು.

ಕತ್ತೆ, ನಾಯಿಗಳು ಅದಕ್ಕೆ ಒಪ್ಪಿದವು.

ಹೀಗೆ ಆ ಕತ್ತೆ ಆ ನಾಯಿ ಆ ಬೆಕ್ಕು ಮೂರೂ ಒಟ್ಟಿಗೆ ಗೋಳೂರಿಗೆ ಹೊರಟವು.

ನಾಲ್ಕನೆಯ ಭಾಗ

ಅದೇ ಊರಿನಲ್ಲಿ ಇನ್ನೊಂದು ಬೀದಿ. ಅಲ್ಲಿ ಒಬ್ಬಳು ಮುದುಕಿ. ಅವಳ ಮನೆಯಲ್ಲಿ ಒಂದು ಕೋಳಿ. ಅದು ಅಗಸನ ಕತ್ತೆಯ ಹಾಗೆ ಮುದಿಯಾಗಿತ್ತು. ಅದಕ್ಕೆ ಬೆಳಗಿನ ಜಾವ ಬೇಗ ಎಚ್ಚರವಾಗುತ್ತಿರಲಿಲ್ಲ.

ಒಂದು ದಿನ ಆ ಮುದುಕಿ "ಕೋಳೀ ಏ ಕೋಳೀ" ಎಂದು ಕೂಗಿದಳು.

ಕೋಳಿ ಬಂತು.

"ಕೋಳಿ ನೀನು ಮುದಿಯಾದೆ. ನಿನಗೆ ರಾತ್ರೆ ನಿದ್ರೆ ಹೆಚ್ಚಾಯಿತು. ಬೆಳಗಿನ ಜಾವದ ವೇಳೆಗೆ ನಿನಗೆ ಬೇಗ ಎಚ್ಚರವಾಗುವುದಿಲ್ಲ. ಆದ್ದರಿಂದ ನನ್ನ ಮನೆಯಲ್ಲಿರಬೇಡ, ಬಿಟ್ಟು ಹೋಗು" ಎಂದಳು.

"ಅಯ್ಯೋ ಅಯ್ಯೋ ಇಷ್ಟು ದಿನವೂ ನಿನ್ನ ಮನೆಯಲ್ಲೇ ದುಡಿದು ದುಡಿದು ನಾನು ಮುದಿಯಾಗಿದ್ದೇನೆ. ಈಗ ನೀನು ನನ್ನನ್ನು ಹೀಗೆ ಅಟ್ಟಿದರೆ, ನಾನು ಎಲ್ಲಿಗೆ ಹೋಗಲಿ ?" ಎಂದು ಕೋಳಿ ಕೇಳಿತು.

ಅದಕ್ಕೆ ಮುದುಕಿ "ಎಲ್ಲಿಗಾದರೂ ಹೋಗು" ಎಂದಳು.

ಕೋಳಿ "ಬೇಡ, ಹೀಗೆ ಅಟ್ಟಬೇಡ. ನಾನು ಹುಟ್ಟಿದ್ದೂ ಇಲ್ಲೇ. ನಾನು ಬೆಳೆದದ್ದೂ ಇಲ್ಲೇ. ನಾನು ದುಡಿದದ್ದೂ ಇಲ್ಲೇ. ನಾನು ಇಲ್ಲೇ ಸಾಯುತ್ತೇನೆ ಬಿಡು'' ಎಂದಿತು.

ಮುದುಕಿ "ಇಲ್ಲೇ ಸಾಯುತ್ತೀಯಾ ತಾಳು. ಇಲ್ಲೇ

ಸಾಯಿಸುತ್ತೇನೆ" ಎಂದು ಒಂದು ಪರಕೆ ತಂದು, ಆ ಕೋಳಿಯನ್ನು ರಪರಪನೆ ಚೆಚ್ಚಿದಳು.

ಕೋಳಿ ಗೊಳೋ ಎಂದು ಅಳುತ್ತ, "ನನ್ನನ್ನು ಏಕೆ ಹೀಗೆ ಚೆಚ್ಚುತ್ತೀಯೆ ? ನಾನೇನು ತಪ್ಪುಮಾಡಿದೆ ? ನೀನು ನನ್ನನ್ನು ಈ ಮನೆಯಿಂದ ಅಟ್ಟಿಬಿಟ್ಟರೆ ನಾನು ಎಲ್ಲಿಗೆ ಹೋಗಲಿ ? ಏನು ಮಾಡಲಿ ?" ಎಂದಿತು.

ಮುದುಕಿ ಅದನ್ನು ಚೆಚ್ಚುವುದು ನಿಲ್ಲಿಸಿ, "ಹಾಗಾದರೆ ಒಂದು ಕೆಲಸ ಮಾಡು. ನೀನು ತುಂಬ ಚೆನ್ನಾಗಿ ಹಾಡುತ್ತೀಯೆ. ಇಲ್ಲಿಯೇ ಪಕ್ಕದಲ್ಲಿರುವ ಗೋಳೂರಿಗೆ ಹೋಗು. ಅಲ್ಲಿ ಸಂಗೀತ ಹಾಡು. ಕೇಳಿದವರು ನಿನಗೆ ತುಂಬ ಅನ್ನ ಹಾಕುತ್ತಾರೆ" ಎಂದಳು.

ಕೋಳಿ "ಹಾಗೇ ಆಗಲಿ" ಎಂದು ಆ ಮನೆಯನ್ನು ಬಿಟ್ಟು, ಗೋಳೂರಿನ ಕಡೆಗೆ ಹೊರಟಿತು.

ಹೀಗೆ ಮನೆ ಬಿಟ್ಟು ಹೊರಟ ಕೋಳಿಗೆ ಅದೇ ಗೋಳೂರಿಗೆ ಹೊರಟ ಕತ್ತೆ, ನಾಯಿ, ಬೆಕ್ಕುಗಳು ಸಿಕ್ಕಿದವು.

"ಎಲ್ಲಿಗೆ ಹೊರಟೆ, ಕತ್ತೆ ? ಎಲ್ಲಿಗೆ ಹೊರಟೆ ನಾಯಿ ? ಎಲ್ಲಿಗೆ ಹೊರಟೆ, ಬೆಕ್ಕೆ" ಎಂದು ಕೋಳಿ ಕೇಳಿತು.

"ಗೋಳೂರಿಗೆ ಹೊರಟಿದ್ದೇವೆ. ನೀನೆಲ್ಲಿಗೆ ?" ಕತ್ತೆ, ನಾಯಿ, ಬೆಕ್ಕುಗಳು ಕೇಳಿದವು.

"ನಾನೂ ಗೋಳೂರಿಗೆ" ಎಂದಿತು ಕೋಳಿ.

"ನಾವು ಮುದಿಯಾದೆವೆಂದು ನಮ್ಮ ಯಜಮಾನರು ನಮ್ಮನ್ನು ಮನೆಯಿಂದ ಅಟ್ಟಿಬಿಟ್ಟರು. ಗೋಳೂರಿಗೆ ಹೋಗಿ ಸಂಗೀತ ಹಾಡಿಕೊಂಡು ಬದುಕೋಣವೆಂದು ಹೊರಟಿದ್ದೇವೆ. ನೀನೇಕೆ ಹೊರಟಿದ್ದೀಯೆ ?" ಎಂದು ಕತ್ತೆ, ನಾಯಿ, ಬೆಕ್ಕುಗಳು ಕೇಳಿದವು.

"ನನ್ನ ಯಜಮಾನಿ ನನ್ನನ್ನೂ ಮುದಿಯೆಂದು, ಮನೆಯಿಂದ ಅಟ್ಟಿಬಿಟ್ಟಿದ್ದಾಳೆ. ಬನ್ನಿ, ನಾವು ನಾಲ್ವರೂ ಸೇರಿ ಸಂಗೀತ ಕಚೇರಿ ಮಾಡೋಣ" ಎಂದು ಕೋಳಿ ಹೇಳಿತು.

ಕತ್ತೆ, ನಾಯಿ, ಬೆಕ್ಕುಗಳು ಅದಕ್ಕೆ ಒಪ್ಪಿದವು.

ಹೀಗೆ ಆ ಕತ್ತೆ ಆ ನಾಯಿ ಆ ಬೆಕ್ಕು ಆ ಕೋಳಿ ನಾಲ್ಕೂ ಒಟ್ಟಿಗೆ ಗೋಳೂರಿಗೆ ಹೊರಟವು.

ಐದನೆಯ ಭಾಗ

ಗೋಳೂರನ್ನು ಸೇರುವುದಕ್ಕೆ ಮುಂಚೆ ದಾರಿಯಲ್ಲಿ ಕತ್ತಲಾಯಿತು.

ಕತ್ತೆ "ನಮ್ಮಪ್ಪಾ ನಾನು ತೀರ ಮುದುಕ. ನಾನು ಇನ್ನು ನಡೆಯಲಾರೆ. ಇಲ್ಲೇ ಈ ರಾತ್ರಿ ಎಲ್ಲಿಯಾದರೂ ಹೀಗೆ ಬಿದ್ದುಕೊಂಡಿದ್ದು, ಬೆಳಗಾದ ಕೂಡಲೆ ಮುಂದೆ ಹೋದರಾಯಿತು" ಎಂದಿತು.

ನಾಯಿ "ನೀನೊಬ್ಬನೇ ಅಲ್ಲ. ನಾವೆಲ್ಲರೂ ಮುದುಕರೇ. ನನಗೂ ನಡೆದು ನಡೆದು ಸಾಕಾಗಿಹೋಗಿದೆ. ಇಲ್ಲೇ ನಿಲ್ಲೋಣ" ಎಂದಿತು.

ಬೆಕ್ಕು "ನಿಮ್ಮ ಹಾಗೆ ನಾನೂ ಮುದಿ. ಈ ಹೊತ್ತು ನಾನು ಇಷ್ಟು ದೂರ ನಡೆದಿರುವುದೇ ಹೆಚ್ಚು. ಇಲ್ಲೇ ನಿಲ್ಲೋಣ" ಎಂದಿತು.

ಕೋಳಿ "ಸದ್ಯ, ನನಗೆ ಕಣ್ಣು ಮುಚ್ಚಿದರೆ ಸಾಕು ಎನ್ನಿಸುತ್ತದೆ. ನಿದ್ರೆ ಎಂದರೆ ಅಷ್ಟು ನಿದ್ರೆ" ಎಂದಿತು.

ಅಲ್ಲೇ ದಾರಿಯ ಪಕ್ಕದಲ್ಲಿ ಒಂದು ಮರವಿತ್ತು. ಕತ್ತೆ

ಅದರ ಬಲಗಡೆ ಕಾಲು ಚಾಚಿಕೊಂಡು ಬಿದ್ದುಕೊಂಡಿತು. ನಾಯಿ ಮರದ ಎಡಗಡೆ ಮುದುರಿಕೊಂಡಿತು. ಬೆಕ್ಕು ಮರ ಕವಲು ಒಡೆದಿದ್ದ ಕಡೆಯಲ್ಲಿ ಸುರುಳಿ ಸುತ್ತಿಕೊಂಡು ಮಲಗಿತು. ಕೋಳಿ ಮಾತ್ರ ತುತ್ತತುದಿಯ ಕೊಂಬೆಗೆ ಹಾರಿ, ಅಲ್ಲಿ ತೂಕಡಿಸ ತೊಡಗಿತು.

ಕತ್ತೆ "ತುಂಬ ಹಸಿವು" ಎಂದಿತು.

ನಾಯಿ "ಒಂದು ಚೂರು ಮೂಳೆ ಎಲ್ಲಿಯಾದರೂ ಸಿಕ್ಕಿದರೆ ಸಾಕು" ಎಂದಿತು.

ಬೆಕ್ಕು "ಈ ಹಾಳು ದಾರಿಯಲ್ಲಿ ಒಂದು ಇಲಿಯಾದರೂ ಬರಬಾರದೆ" ಎಂದಿತು.

ಕೋಳಿ ಮಾತ್ರ ಕಣ್ಣು ಮುಚ್ಚಿಕೊಂಡು ತೂಕಡಿಸುತ್ತಿತ್ತು.

"ಕೋಳೀ ಏ ಕೋಳೀ" ಎಂದು ಕತ್ತೆ, ನಾಯಿ, ಬೆಕ್ಕುಗಳು ಆ ಕೋಳಿಯನ್ನು ಕೂಗಿ ಎಬ್ಬಿಸಿ, "ನೀನು ನಮ್ಮೆಲ್ಲರಿಗಿಂತ ತುಂಬ ಮೇಲೆ ಇದ್ದಿಯೇ. ಎಲ್ಲಿಯಾದರೂ ಯಾವುದಾದರೂ ಮನೆ ಕಾಣಿಸುತ್ತದೆಯೆ, ನೋಡು, ಈ ಹಸಿವನ್ನು ತಡೆಯಲು ಸಾಧ್ಯವಿಲ್ಲ" ಎಂದವು.

ಕೋಳಿ ಎಚ್ಚರಗೊಂಡು, ಕಣ್ಣುಜ್ಜಿಕೊಳ್ಳುತ್ತಾ ಸುತ್ತಲೂ ಎಲ್ಲಾ ದಿಕ್ಕುಗಳನ್ನೂ ನೋಡಿತು.

ಒಂದು ದಿಕ್ಕಿನಲ್ಲಿ ಮಾತ್ರ ಯಾವುದೋ ಬೆಳಕು ಕಾಣು ತ್ತಿತ್ತು. "ಇದೋ ಈ ದಿಕ್ಕಿನಲ್ಲಿ ಬೆಳಕು ಕಾಣುತ್ತಿದೆ. ಬೆಳಕು ಇದ್ದ ಕಡೆ ಅನ್ನ ಇರುತ್ತದೆ. ಬನ್ನಿ, ಅಲ್ಲಿಗೆ ಹೋಗೋಣ. ನೀವು ಹೇಳಿದ ಮೇಲೆ ನನಗೂ ಹಸಿವಾಗುತ್ತಿದೆ" ಎಂದು ಕೋಳಿ ಹೇಳಿತು.

ಆಗ, ಕತ್ತೆ ನಾಯಿ ಬೆಕ್ಕುಗಳು ಬೆಳಕು ಕಂಡು ಬಂದ ಕಡೆಗೆ ಕೋಳಿಯ ಹಿಂದೆ ಹೋದವು.

ಆರನೆಯ ಭಾಗ

ಕೋಳಿ ಹೇಳಿದ ಹಾಗೆಯೇ ಆ ಬೆಳಕು ಇದ್ದ ಕಡೆ ಒಂದು ಮನೆಯಿತ್ತು. ಮನೆಯೊಳಗೆ ನಾಲ್ಕು ಜನ ಇದ್ದರು. ಅವರ ಮನೆ ಮುಂದೆ ಅನ್ನ ರಾಶಿರಾಶಿಯಾಗಿ ಬಿದ್ದಿತ್ತು.

ಕತ್ತೆ ಮಿಕ್ಕ ಮೂರು ಪ್ರಾಣಿಗಳಿಗಿಂತಲೂ ಎತ್ತರವಾಗಿದ್ದುದ ರಿಂದ, ಮನೆಯ ಒಳಗೆ ಏನಿದೆ ಎಂಬುದನ್ನು ಕಿಟಕಿಯ ಮೂಲಕ

ಕಂಡಿತು. ಮನೆಯ ಒಳಗೆ ನಾಲ್ಕು ಜನ ಊಟಮಾಡುತ್ತಾ ಕುಳಿತಿದ್ದರು. ಅವರ ಎದುರಿಗೆ ಎಲೆಗಳನ್ನು ಹಾಸಿದ್ದರು. ಎಲೆಗಳಲ್ಲಿ ಅನ್ನ ಗುಡ್ಡೆಗುಡ್ಡೆಯಾಗಿ ಬಿದ್ದಿತ್ತು. ಪಕ್ಕದ ಪಾತ್ರೆಗಳಲ್ಲಿ ಸಾರು, ಹುಳಿ, ಮೊಸರು–ಇನ್ನೂ ಏನೇನೋ ಇಟ್ಟುಕೊಂಡಿದ್ದರು.

ಅದನ್ನೆಲ್ಲಾ ನೋಡಿ ಕತ್ತೆಯ ಬಾಯಲ್ಲಿ ನೀರು ಬಂತು. ಕತ್ತೆ ತಾನು ಕಂಡದ್ದನ್ನು ನಾಯಿ ಬೆಕ್ಕು ಕೋಳಿಗಳಿಗೆ ಹೇಳಿತು. ಅವುಗಳ ಬಾಯಲ್ಲೂ ನೀರು ಬಂತು.

"ಬನ್ನಿ, ಒಳಗೆ ಹೋಗಿ ನಾವೂ ಇಷ್ಟು ಅನ್ನ ತಿನ್ನೋಣ" ಎಂದಿತು ಬೆಕ್ಕು.

"ಬೇಡ. ಅವರು ತಿಂದು ಆದಮೇಲೆ, ಉಳಿದ ಎಂಜಲು ತಿನ್ನೋಣ" ಎಂದಿತು ನಾಯಿ.

"ನೀವು ಏನಾದರೂ ಮಾಡಿಕೊಳ್ಳಿ, ನನಗಂತೂ ನಿದ್ರೆ ಬರುತ್ತಿದೆ" ಎಂದಿತು ಕೋಳಿ.

ಕತ್ತೆ "ಏ ನಾಯಿ, ಬೆಕ್ಕು, ಕೋಳಿ ನಾವು ಸಂಗೀತಗಾರರಲ್ಲವೆ ಇಲ್ಲಿಯೇ ಕಿಟಕಿಯ ಹೊರಗಡೆ ನಿಂತು, ನಾವು ನಾಲ್ವರೂ ಸಂಗೀತ ಹಾಡೋಣ. ನಮ್ಮ ಸಂಗೀತಕ್ಕೆ ಸಂತೋಷಪಟ್ಟು, ಅವರೇ ಅನ್ನ ಹಾಕುತ್ತಾರೆ" ಎಂದಿತು.

ನಾಯಿ, ಬೆಕ್ಕು, ಕೋಳಿ "ಹೌದು, ಹೌದು. ಹಾಗೇ ಮಾಡೋಣ" ಎಂದವು.

ಕತ್ತೆ ಕಿಟಕಿಯ ಹತ್ತಿರ ಕಾಲೂರಿ ನಿಂತುಕೊಂಡಿತು. ನಾಯಿ ಅದರ ಬೆನ್ನಮೇಲೆ ನಿಂತಿತು. ಬೆಕ್ಕು ನಾಯಿಯ ಬೆನ್ನ ಮೇಲೆ ಏರಿತು. ಕೋಳಿ ಹಾರಿ ಬಂದು, ಬೆಕ್ಕಿನ ಬೆನ್ನಮೇಲೆ ಏರಿತು. ಕೋಳಿ ಹಾರಿ ಬಂದು, ಬೆಕ್ಕಿನ ಬೆನ್ನ ಮೇಲೆ ನಿಂತು ಕೊಂಡಿತು.

ಕತ್ತೆ ನಿಧಾನವಾಗಿ "ಹ್ಯೇಂ–ಹ್ಯೇಂ–ಹ್ಯೇಂ" ಎಂದು ಕೂಗತೊಡಗಿತು. ಅದೇ ಗಳಿಗೆಯಲ್ಲಿಯೇ ನಾಯಿ 'ರೊಳ್–ರೊಳ್–ಭೌ–ಭೌ" ಎಂದು ಬಗುಳತೊಡಗಿತು. ಅದೇ ಕ್ಷಣವೇ "ಸಿರ್–ಮಿ–ಯಾವ್–ಸಿರ್–ಮಿಯಾವ್" ಎಂದು ಕೂಗತೊಡ ಗಿತು. ಕೋಳಿಯಂತೂ "ಕೊ–ಕ್ಕೊ–ಕ್ಕೋ" ಎಂದು ಒಂದೇ ಸಮನೆ ಹಿಡಿದ ಉಸಿರು ನಿಲ್ಲಿಸದೆ ಕಿರುಚಿಕೊಂಡಿತು.

ಒಟ್ಟಿನಲ್ಲಿ ಆ ನಾಲ್ಕು ಪ್ರಾಣಿಗಳ ಸಂಗೀತ ಕಚೇರಿ ಬಹಳ ಭಯಂಕರವಾಗಿತ್ತು.

ಏಳನೆಯ ಭಾಗ

ಒಳಗೆ ಊಟಮಾಡುತ್ತಾ ಕುಳಿತಿದ್ದವರು ಆ ವಿಚಿತ್ರವಾದ

ಅದ್ಭುತವಾದ, ಭಯಂಕರ ಸಂಗೀತವನ್ನು ಕೇಳಿ, "ಇದೇನೋ ಭೂತವೋ ಪಿಶಾಚಿಯೋ ಇರಬೇಕು" ಎಂದು ಹೆದರಿಕೊಂಡು ಬಿಟ್ಟದ್ದು ಬಿಟ್ಟ ಹಾಗೆಯೇ, ಎಂಜಲು ಕೈ ಕೂಡ ತೊಳೆಯದೆ, ಆ ಮನೆಯಿಂದ ಹೊರಗೆ ಓಡಿಹೋದರು.

ಅವರು ಹಾಗೆ ಹೆದರಿಕೊಂಡು ಓಡಿ ಹೋದುದನ್ನು ಕತ್ತೆ ನಾಯಿ ಬೆಕ್ಕು ಕೋಳಿಗಳು ಕಂಡು, ಮನೆಯೊಳಕ್ಕೆ ಹೋಗಿ, ಅಲ್ಲಿ ಇದ್ದ ಅನ್ನವನ್ನೆಲ್ಲಾ ತಾವೇ ತಿಂದು, ಅಲ್ಲೇ ಸುಖವಾಗಿ ಇದ್ದುಬಿಟ್ಟವು.

ಶಾಮು ಮತ್ತು ಜಲಪಿಶಾಚಿ

—ಅನುಪಮಾ ನಿರಂಜನ

ಒಂದೂರಿನಲ್ಲಿ ರೈತನೊಬ್ಬನಿದ್ದ. ಅವನಿಗೆ ಮೂರು ಜನ ಗಂಡುಮಕ್ಕಳಿದ್ದರು. ರೈತ ಸಾಯುವಾಗ ಮಕ್ಕಳಿಗೆ ಗುಡಿಸಲನ್ನು ಮಾತ್ರ ಬಿಟ್ಟುಹೋದ.

"ಗುಡಿಸಲು ನನಗೆ!" ಎಂದ ದೊಡ್ಡವನು.

"ಗುಡಿಸಲಿನೊಳಗಿನ ಸಾಮಾನುಗಳೆಲ್ಲಾ ನನಗೆ!" ಎಂದ ಎರಡನೆಯವ.

ಮೂರನೆಯವನಾದ ಶಾಮುನಿಗೆ ಏನೂ ಉಳಿಯಲಿಲ್ಲ. ಅವನು ಮೂಲೆಯಲ್ಲಿದ್ದ ಹಗ್ಗದ ಕಟ್ಟೊಂದನ್ನು ತೆಗೆದುಕೊಂಡು

ಬೇಸರದಿಂದ ಮನೆಬಿಟ್ಟು ಹೋದ.

ಶಾಮು ಕಷ್ಟ ಬಂದಾಗಲೂ ಧೈರ್ಯದಿಂದಿರುವಂಥವನು. ಅವನು ಮರವೊಂದರ ಕೆಳಗೆ ಕುಳಿತು ಮುಂದೇನು ಮಾಡಬೇಕೆಂದು ಯೋಚಿಸುತ್ತಿರುವಾಗ, ಎದುರಿಗೆ ಅಳಿಲೊಂದು ಕಂಡಿತು. ಹಗ್ಗದ ಬಲೆ ಬೀಸಿ ಶಾಮು ಅದನ್ನು ಹಿಡಿದ. ಸಣ್ಣ ಪಂಜರವೊಂದನ್ನು ಮಾಡಿ ಅದರಲ್ಲಿ ಅಳಿಲನ್ನಿಟ್ಟ.

"ಬೇಜಾರು ಮಾಡ್ಕೋಬೇಡ ಅಳಿಲೇ, ನಿನಗೊಬ್ಬ ಜೊತೆಗಾರನನ್ನ ಹುಡುಕ್ತೀನಿ" ಎಂದ.

ಸ್ವಲ್ಪ ಹೊತ್ತಿಗೆಲ್ಲಾ ಮೊಲವೊಂದು ಕುಪ್ಪಳಿಸುತ್ತಾ ಅಲ್ಲಿಗೆ ಬಂತು. ಶಾಮು ಅದನ್ನೂ ಹಿಡಿದು ಪಂಜರದೊಳಗೆ ಹಾಕಿದ. ಮತ್ತೆ ಯಾವ ಪ್ರಾಣಿಯನ್ನು ಹಿಡಿಯಬೇಕೆಂದು ಅವನು ಯೋಚಿಸುತ್ತಾ ನಡೆದ. ಕೊಳದ ಹತ್ತಿರ ಗವಿಯೊಂದರಲ್ಲಿ ದೊಡ್ಡ ಕರಡಿಯೊಂದು ನಿದ್ರಿಸುತ್ತಿತ್ತು.

"ಈ ಕರಡೀನ ಹಿಡಿಯೋಕೆ ದೊಡ್ಡ ಬಲೆ ಮಾಡ್ಬೇಕು!" ಎಂದುಕೊಳ್ಳುತ್ತಾ ಹಗ್ಗದಿಂದ ಬಲೆ ನೇಯುತ್ತಾ ಕುಳಿತ.

ಆಗ ನೀರಿನಿಂದ ಹೊರಬಂದ ಸಣ್ಣ ಜಲಪಿಶಾಚಿಯೊಂದು ಕುತೂಹಲದಿಂದ ಕೇಳಿತು.

"ಅದೇನು ಹೇಣೀತಾ ಕೂತಿದೀಯಾ?"

"ನಿಮ್ಮ ಕೊಳವನ್ನ ಸುತ್ತುವರಿಯುವಂಥ ಬಲೆ ಮಾಡ್ತಿದೀನಿ. ಅದರ ಕುಣಿಕೆ ಎಳೆದಾಗ ನಿಮ್ಮ ಕೊಳಾನ ನಾನೆಲ್ಲಿ ಬೇಕಾದ್ರೂ ಎತ್ತಿಕೊಂಡು ಹೋಗ್ಬಹುದು" ಎಂದ ಶಾಮು.

"ಅಯ್ಯೋ ! ಕೊಳ ಹೋದ್ರೆ ನಮ್ಮ ಗತಿಯೇನು?" ಎಂದುಕೊಳ್ಳುತ್ತಾ ಜಲಪಿಶಾಚಿ ತನ್ನ ತಂದೆಯ ಹತ್ತಿರ ಹೋಗಿ ಆ ವಿಷಯ ಹೇಳಿತು. ಆಗ ತಂದೆ,

"ಒಂದು ಉಪಾಯ ಮಾಡೋಣ. ಆ ಹುಡುಗನ ಹತ್ತಿರ ನೀನು ಮತ್ತೆ ಹೋಗು. ಕೊಳದ ಪಕ್ಕದಲ್ಲಿರೋ ಮರಾನ ಯಾರು ಮೊದಲು ಹತ್ತುತಾರೋ ನೋಡೋಣ ಅನ್ನು. ಅವನು ಅರ್ಧ ಹತ್ತಿದಾಗ ಮೇಲಿನಿಂದ ನೀನು ಅವನನ್ನು ಕೊಳದೊಳಗೆ ನೂಕು. ಮುಂದಿನದನ್ನು ನಾನು ನೋಡ್ಕೋತೀನಿ," ಎಂದಿತು.

ಸಣ್ಣ ಜಲಪಿಶಾಚಿ ಶಾಮುನ ಬಳಿಗೆ ಬಂದು, "ನಾವಿಬ್ಬರೂ ಪಂದ್ಯ ಕಟ್ಟೋಣ. ಯಾರು ಮರ ಮೊದಲು ಹತ್ತುತ್ತಾರೋ ನೋಡೋಣ," ಎಂದಿತು.

ಶಾಮುನು, "ನಂಗೆ ಈಗ ಸಮಯವಿಲ್ಲ. ಪಂದ್ಯಕ್ಕೆ ನನ್ನ ಸಣ್ಣ ತಮ್ಮನನ್ನು ಕಳಿಸ್ತೀನಿ," ಎಂದು ಪಂಜರದಿಂದ ಅಳಿಲನ್ನು

ತೆಗೆದು "ಪತ್ತು ಅಳಿಲೇ" ಎಂದ. ಜಲಪಿಶಾಚಿ ಕಣ್ಣು ಮಿಟುಕಿಸುವುದರೊಳಗಾಗಿ ಅಳಿಲು ಮರದ ತುದಿಯನ್ನು ಮುಟ್ಟಿತ್ತು.

ಜಲಪಿಶಾಚಿ ಬೇಸರದಿಂದ ತಂದೆಯ ಬಳಿ ಹೋಯಿತು. ತಂದೆ, "ಪರವಾಗಿಲ್ಲ ಮಗು. ನೀವಿಬ್ಬರೂ ಈ ಸಾರಿ ಓಡುವ ಪಂದ್ಯ ಕಟ್ಟಿ. ಅವನ ಕಾಲು ಸೋತಾಗ ನೀನವನನ್ನು ಕೊಳದೊಳಕ್ಕೆ ನೂಕು," ಎಂದು ಸಲಹೆ ಮಾಡಿತು.

ಜಲಪಿಶಾಚಿಯ ಹೊಸ ಆಹ್ವಾನವನ್ನು ಕೇಳಿ ಶಾಮು, "ನಂಗೀಗ ತುಂಬಾ ಕೆಲಸವಿದೆ. ನನ್ನ ಬದಲು ನನ್ನ ಇನ್ನೊಬ್ಬ ತಮ್ಮನನ್ನ ಕಳಿಸ್ತೀನಿ" ಎಂದು ಪಂಜರದ ಬಾಗಿಲು ತೆಗೆದು "ಓಡು ಮೊಲವೇ ಓಡು" ಎಂದ. ಜಲಪಿಶಾಚಿ ಪಂದ್ಯ ಆರಂಭಿಸುವುದರಲ್ಲಿದ್ದಾಗಲೇ ಮೊಲ ಓಡಿ ದೃಷ್ಟಿಯಿಂದ ಮರೆಯಾಯಿತು.

ಜಲಪಿಶಾಚಿ ಸಪ್ಪೆಮೋರೆಯಿಂದ ತಂದೆಯನ್ನು ಸಮಿಾಪಿಸಿತು.

"ಈ ಸಾರಿಯೂ ಸೋತೆಯಾ ಮಗನೆ ? ಪರವಾಗಿಲ್ಲ. ಈ ಬಾರಿ ಅವನನ್ನು ಕುಸ್ತಿಗೆ ಕರಿ, ನೀನೇ ಗೆಲ್ತೀಯಾ," ಎಂದಿತು ತಂದೆ.

ಅದನ್ನು ಕೇಳಿ ಶಾಮುನೆಂದ :

"ನಂಗ್ಯಾಕೋ ಇವತ್ತು ಕುಸ್ತಿ ಮಾಡೋಕೆ ಮನಸ್ಸಿಲ್ಲ. ನಿಂಗೆ ಯುದ್ಧ ಬೇಕೇಬೇಕೂಂತ ಇದ್ದರೆ ಮುಂದಿನ ಗವೀಲಿ ನನ್ನಜ್ಜ ಮಲಗಿದಾನೆ. ಅವನಿಗೆ ಒಂದೆರಡೇಟು ಹಾಕು. ನಿದ್ದೆಯಿಂದ ಎಚ್ಚರವಾಗಿ ಕುಸ್ತಿಗೆ ಬರ್‍ತಾನೆ."


Gujjar

ಜಲಪಿಶಾಚಿ ಕರಡಿಯ ಬಳಿಗೆ ಹೋಗಿ ಏಟು ಹಾಕಿತು. ಕರಡಿ ಸಿಟ್ಟಿನಿಂದ ಅದರ ಮೈ ಪರಚಿ ಓಡಿಸಿಬಿಟ್ಟಿತು.

ಅದನ್ನು ಕಂಡ ತಂದೆ, "ಈ ಹುಡುಗ ನಮಗಿಂತಲೂ ಬಲಶಾಲಿ. ಇವನ ಹತ್ತಿರ ಸಂಧಾನ ಮಾಡ್ಕೊಳ್ಳೋದೇ ಒಳ್ಳೆಯದೂಂತ ಕಾಣುತ್ತೆ, ಈ ಕೊಳ ಬಿಟ್ಟು ಹೋಗೋಕೆ ಅವನಿಗೆಷ್ಟು ದುಡ್ಡು ಕೊಡಬೇಕು ಕೇಳಿ ಬಾ", ಎಂದಿತು.

ಅದನ್ನು ಕೇಳಿದ ಶಾಮ ನಗುತ್ತಾ, "ನನ್ನ ಟೋಪಿಯ ತುಂಬಾ ಬಂಗಾರದ ನಾಣ್ಯ ಕೊಟ್ಟರೆ ನಾನಿಲ್ಲಿಂದ ಹೊರಟು ಹೋಗುತ್ತೀನಿ", ಎಂದ.

ಜಲಪಿಶಾಚಿ ನೀರಿನೊಳಗೆ ಇಳಿಯುತ್ತಲೇ ಶಾಮ ತನ್ನ ಟೋಪಿಗೆ ತೂತು ಮಾಡಿದ. ನೆಲದಲ್ಲಿ ಹೊಂಡವೊಂದನ್ನು ತೋಡಿ, ಟೋಪಿಯನ್ನು ಅದರ ಮೇಲಿಟ್ಟ. ಜಲಪಿಶಾಚಿ ನಾಣ್ಯಗಳನ್ನು ತಂದು ಸುರಿಯಿತು. ಸುರಿದಷ್ಟೂ ಟೋಪಿ ತುಂಬಲೇ ಇಲ್ಲ. ನಾಲ್ಕಾರು ಬುಟ್ಟಿಗಳನ್ನು ಸುರಿದು, "ಇಷ್ಟೇಪ್ಪ ನಮ್ಹತ್ರ ಇರೋದು. ಕೃಪೆತೋರು !" ಎಂದು ಬೇಡಿಕೊಂಡಿತು.

"ಪರವಾಗಿಲ್ಲ ಬಿಡು", ಎನ್ನುತ್ತಾ ಶಾಮ ನಾಣ್ಯಗಳನ್ನೆಲ್ಲಾ ಗಂಟು ಕಟ್ಟಿಕೊಂಡು ನೆರೆಯೂರಿಗೆ ಹೋದ. ಸೊಗಸಾದ ಮನೆಯನ್ನು ಕಟ್ಟಿಕೊಂಡು ಸುಖವಾಗಿ ಬಾಳಿ ಬದುಕಿದ. *

ಚಿಕ್ಕಿಯ ತಂಗಿ

—ಜಯಲಕ್ಷ್ಮಿ ಶ್ರೀನಿವಾಸನ್

ರೇವತಿಗೆ ಆ ಹೊತ್ತು ಒಂದು ಪೀರಿಯಡ್ ಮುಂಚಿತವಾಗಿಯೇ ತರಗತಿ ಮುಗಿಯಿತು. ಆದುದರಿಂದ ಅವಳು ಪಾಠಶಾಲೆಯಿಂದ ನೆಟ್ಟಗೆ ಅಂಗಡಿಗೆ ಹೋಗಿ ಒಳ್ಳೆಯ ನೋಟು ಪುಸ್ತಕಗಳನ್ನು ಕೊಂಡುಕೊಂಡು ಬಸ್-ಸ್ಟಾಪಿಗೆ ಬಂದಳು. ಆ ವೇಳೆಗೆ ಇಂದಿರೆಯೂ ಬಸ್-ಸ್ಟಾಪಿಗೆ ಬಂದುಬಿಟ್ಟಿದ್ದಳು. ಅವರಿಬ್ಬರೂ ಜಯನಗರದ ನಾಲ್ಕನೇ ಬ್ಲಾಕ್ ಅಕ್ಕಪಕ್ಕದ ಮನೆಗಳಲ್ಲಿ ವಾಸಿಸುತ್ತಿದ್ದರು. ಇಬ್ಬರೂ ಶಂಕರಪುರದ ಮಹಿಳಾ ಸಮಾಜದಲ್ಲಿ ಓದುತ್ತಿದ್ದರು, ಒಬ್ಬಳು ಆರನೇ ತರಗತಿ, ಇನ್ನೊಬ್ಬಳು ಏಳನೇ ತರಗತಿ.

ಇಂದಿರೆ, “ರೇವತಿ, ಸ್ಕೂಲು ಬಿಟ್ಟಾಗ ನೀನು ಕಾಣಿಸಲಿಲ್ಲವಲ್ಲಾ ? ಎಲ್ಲಿಗೆ ಹೋಗಿದ್ದೆ ?” ಎಂದು ಕೇಳಿದಳು.

ರೇವತಿ, "ಎಲ್ಲೂ ಇಲ್ಲಮ್ಮಾ; ಸಂಸ್ಕೃತ ಟೀಚರು ಕೊನೆಯ ಪೀರಿಯಡ್ ಬರಲಿಲ್ಲ. ಇನ್ನೂರು ಪುಟಗಳ ಮೂರು ನೋಟು ಪುಸ್ತಕಗಳು ಬೇಕಿತ್ತು. ಅವನ್ನು ಅಂಗಡಿಗೆ ಹೋಗಿ ಇಗೋ ತಂದೆ. ಎಷ್ಟು ಚೆನ್ನಾಗಿವೆ ನೋಡು! ಸರಸ್ವತೀ, ಲಕ್ಷ್ಮೀ, ಪಾರ್ವತೀ - ಮೂವರು ದೇವಿಯರ ವರ್ಣಚಿತ್ರಗಳು ರಟ್ಟಿನ ಮೇಲಿರುವ ಮೂರು ಪುಸ್ತಕಗಳನ್ನು ಆರಿಸಿದೆ. ಆದರೆ ಎರಡು ಪುಸ್ತಕಗಳಿಗೆ ಮಾತ್ರ ದುಡ್ಡಿತ್ತು. ಎರಡನ್ನು ಮಾತ್ರ ಕೊಂಡು ತಂದೆ," ಎಂದೆನ್ನುತ್ತ ತನ್ನ ಕೈಯಲ್ಲಿದ್ದ ಪುಸ್ತಕದ ಚೀಲದಿಂದ ಒಂದು ಪ್ಯಾಕೆಟ್ಟನ್ನು ತೆಗೆದು ಇಂದಿರೆಯ ಕೈಗಿತ್ತಳು.

ಅದನ್ನು ಬಿಚ್ಚಿ ನೋಡಿದ ಇಂದಿರಾ, "ನೀನು 'ಲಕ್ಕೀ ಗರ್ಲ್' (ಅದೃಷ್ಟವಂತೆ ಹುಡುಗಿ) ಕಣೇ! ಎರಡು ಪುಸ್ತಕಗಳಿಗೆ ದುಡ್ಡು ಕೊಟ್ಟು, ಮೂರು ಪುಸ್ತಕಗಳನ್ನು ಗಿಟ್ಟಿಸಿಕೊಂಡಿರುವಿಯಲ್ಲಾ" ಎಂದಳು. ಆ ಪುಸ್ತಕಗಳನ್ನು ಮುಂಚಿನಂತೆಯೇ 'ಪ್ಯಾಕ್' ಮಾಡಿ ರೇವತಿಯ ಕೈಗೆ ಕೊಟ್ಟಳು.

ರೇವತಿಯು ಅದನ್ನು ತನ್ನ ಚೀಲದಲ್ಲಿ ಇಟ್ಟುಕೊಂಡು ಆಶ್ಚರ್ಯದಿಂದ, "ನಾನೇ ಅಂದೆನಲ್ಲಾ, ಮೊದಲು ಈ ಮೂರು ಬೇಕೆಂದೇ ಆ ಅಂಗಡಿಯ ಹುಡುಗನಿಗೆ ಹೇಳಿದೆ. ಆದರೆ ನನ್ನ ಪರ್ಸಲ್ಲಿದ್ದ ದುಡ್ಡನ್ನು ಎಣಿಸಿ ನೋಡಿದ ಬಳಿಕ, ಎರಡು ಮಾತ್ರ ಸಾಕೆಂದು ಹೇಳಿ, ಅವನ ಕೈಯಲ್ಲಿ ಎರಡು ಪುಸ್ತಕಗಳಿಗೆ ಆಗುವ ಹಣವನ್ನು ಮಾತ್ರ ಕೊಟ್ಟೆ, ಆಗ ಅಂಗಡಿಯಲ್ಲಿ ಬಹಳ ಗುಂಪಿತ್ತು. ಆ ಹುಡುಗ, ಪಾಪ, ಗಡಿಬಿಡಿಯಲ್ಲಿ ಈ ಮೂರನ್ನೂ ಪ್ಯಾಕ್ ಮಾಡಿ ನನ್ನ ಕೈಗೆ ಕೊಟ್ಟು, ಎರಡಕ್ಕೆ

ಮಾತ್ರ 'ಕ್ಯಾಷ್‌ಬಿಲ್' ಬರೆಸಿಬಿಟ್ಟಿದ್ದಾನೆ ಈಗೇನು ಮಾಡಲೀ ನಾನು?" ಎಂದು ಕೇಳಿದಳು.

ಇಂದಿರಾ: ಆ ಅಂಗಡಿಯ ಯಜಮಾನನು ತಿಂಗಳ ಕೊನೆಯಲ್ಲಿ ಅಂಗಡಿಯ ಸಾಮಾನುಗಳ ಮೊತ್ತ ತೆಗೆಯುವಾಗ '(ಸ್ಟಾಕ್‌ಟೇಕಿಂಗ್) ಕಡಿಮೆ ಬಂದರೆ ಆ ಹುಡುಗನ ಅಜಾಗ್ರತೆ' ಗಾಗಿ ಅವನ ಸಂಬಳದಿಂದ ಹಿಡಿಯಬಹುದು. ಈ ಹೆಚ್ಚಿನ ನೋಟುಪುಸ್ತಕಗಳನ್ನು ಅಂಗಡಿಗೆ ವಾಪಸ್ ಕೊಟ್ಟು ಬಾ. ಆದರೆ ಯಜಮಾನನಿಗೆ ಇವನ ತಪ್ಪನ್ನು ತಿಳಿಸಬೇಡಮ್ಮ.

ರೇವತಿ: ಸರಿಹೋಯಿತು. ತನ್ನ ತಪ್ಪಿಗೆ ಅವನು ಶಿಕ್ಷೆ ಅನುಭವಿಸಲೇ ಬೇಕು. ನಾನು ಯಾಕೆ ಪುಸ್ತಕವನ್ನು ವಾಪಸ್ ಕೊಡಲಿ ? ನನಗೇ ಲಾಭವಾಯಿತು.

ಇಂದಿರಾ: ಅದು ಸರಿಯಲ್ಲ, ರೇವತಿ. ನೀನೇ ಅಂದೆ, ಅಂಗಡಿಯಲ್ಲಿ ಬಹಳ ಗಲಾಟೆ ಇತ್ತೆಂದು. ಎಲ್ಲೋ ಮರೆತು ಕೊಟ್ಟ. ಅವನ ಮರೆವನ್ನು ತಿಳಿಯ ಹೇಳಿ, ಅವನನ್ನು ಎಚ್ಚರಿ ಸುವುದು ನಿನ್ನ ಧರ್ಮ. ನೀನು ಈ ಪುಸ್ತಕವನ್ನು ವಾಪಸ್ ಕೊಡದಿದ್ದರೆ, ಬಹುಶಃ ಅವನನ್ನು ಕೆಲಸದಿಂದ ತೆಗೆದು ಓಡಿಸಿ ಬಿಟ್ಟಾರು, ಪಾಪ.

ಹೀಗೆನ್ನುತ್ತಿರುವಾಗ, ಹೂ ಮಾರುವ ಹುಡುಗಿಯೊಬ್ಬಳು ಸಮೀಪಿಸಿದಳು.





"ನೀವೆ ಅಲ್ಲವೇ ಇಂದಿರಾ ? " ಎಂದು ಆ ಹುಡುಗಿ ಕೇಳಿದಳು. ಇಂದಿರಾ, "ಹೌದು. ನೀನು ಯಾರು ? ನಿನಗೆ ನನ್ನಿಂದ ಏನಾಗಬೇಕು ?" ಎಂದು ವಿಚಾರಿಸಿದಳು.

ಹುಡುಗಿಯ ಪಕ್ಕದಲ್ಲೊಂದು ಕಡೆ ಇಟ್ಟಿದ್ದ ಬಿದಿರಿನ ತಟ್ಟೆಯಲ್ಲಿ ಕನಕಾಂಬರ ಹೂಮಾಲೆಗಳು ಸಂಜೆಯ ಹೊಂಬಿಸಿಲಿನಲ್ಲಿ ಜಿಗಜಿಗನೆ ಕಂಗೊಳಿಸಿದವು.

ಹುಡುಗಿ: ನೀವು ನಿನ್ನೆ ನಮ್ಮ ಅಕ್ಕ ಚಿಕ್ಕಿಯಿಂದ ಎರಡು ಮೊಳ ಕನಕಾಂಬರ ಹೂವು ಕೊಂಡಿರಂತೆ. ಆದರೆ ಕೈಯಲ್ಲಿ ಚಿಲ್ಲರೆ ಇರಲಿಲ್ಲವೆಂದು ಒಂದು ರೂಪಾಯಿ ನೋಟೊಂದನ್ನು ಕೊಟ್ಟರಂತೆ. ಇಕೋ, ಆ ಬಾಕೀ ಕೊಳ್ಳಿ. ಅವಳಿಗೆ ರಾತ್ರಿಯಿಂದ ಬಹಳ ತಲೆನೋವು, ಜ್ವರ. ಮನೇಲಿ ಮಲಗವ್ಳೆ. ನನ್ನನ್ನು ಕೊಟ್ಟು ಬಾ ಅಂದ್ಳು.

ಇಂದಿರಾ: ಅದು ಸರಿ, ನನ್ನ ಗುರುತು ನಿನಗೆ ಹೇಗೆ ಸಿಕ್ಕಿತು? ನನ್ನ ಹೆಸರೂ ಗೊತ್ತಿದೆಯಲ್ಲಾ !

ಹುಡುಗಿ: 'ಬೆಳ್ಳಗೆ, ತೆಳ್ಳಗೆ ಉದ್ದಕ್ಕೆ ಅವ್ರೆ. ಎರಡು ಪಕ್ಕದಲ್ಲೂ ಕಪ್ಪು ಟೇಪು ಕಟ್ಟಿದ ತಲೆಗೂದಲಿನ ಕುಚ್ಚುಗಳು ಅವೆ. ಕಿವಿಗೆ ಬಳೆಯಷ್ಟು ದೊಡ್ಡ ಉಂಗುರ ನೇತು ಹಾಕ್ಕೊಂಡವ್ರೆ' ಎಂದು ನಮ್ಮಕ್ಕ ಗುರುತು ಹೇಳಿದ್ಳು, ತಾಯಿ.

ಕೊಳ್ಳಿ, ಐವತ್ತು ಪೈಸೆ - ಎಂದು ಇಂದಿರೆಯ ಕೈಗೆ ಅರ್ಧ ರೂಪಾಯಿ ನಾಣ್ಯ ಒಂದನ್ನು ಕೊಟ್ಟು ಹೊರಟೇ ಹೋದಳು.

ಆಗ ಆ ಹುಡುಗಿಯ ಮತ್ತು ಅವಳ ಅಕ್ಕ ಚಿಕ್ಕಿಯ ಪ್ರಾಮಾಣಿಕತೆಯನ್ನು ಕಂಡು ಇಂದಿರೆಯೂ ರೇವತಿಯೂ ವಿಸ್ಮಯಗೊಂಡರು. ರೇವತಿಯ ಮನಸ್ಸು ಆ ನೋಟು ಪುಸ್ತಕದ ಕಡೆಗೆ ಹೊರಳಿತು. ಅವಳು, "ಇಂದಿರಾ, ಹೆಚ್ಚಿನ ಪುಸ್ತಕವನ್ನು ಆ ಅಂಗಡಿಯ ಹುಡುಗನಿಗೆ ವಾಪಸ್ ಕೊಟ್ಟು ಬರೋಣ ಬಾ. ಈ ಹೂ ಮಾರುವ ಹುಡುಗಿ ನನ್ನ ಮಂಕುತನ ವನ್ನು ತೋರಿಸಿಕೊಟ್ಟಂತಾಯಿತು. ಛೇ, ಇನ್ನು ಮೇಲೆ ಈ ರೀತಿ ಇನ್ನೊಬ್ಬರ ವಸ್ತುವಿಗೆ ಆಸೆ ಪಡಬಾರದು", ಎಂದಳು.

ಇಬ್ಬರು ಗೆಳತಿಯರೂ ಆ ಪುಸ್ತಕದ ಅಂಗಡಿಯ ಕಡೆಗೆ ನಡೆದರು.

ಮುದ್ದು ಸಿಂಗಾರಿ

—ಬಿ. ಶ್ರೀ. ಪಾಂಡುರಂಗರಾವ್

ನಮ್ಮ ಮುದ್ದು ಸಿಂಗಾರಿ ಉಷಾ ಪುಟ್ಟ ಹುಡುಗಿ. ಅವಳಿಗೆ ಈಗತಾನೇ ಐದು ವರುಷಗಳು. ಅವಳು ಬಲು ಮಾತುಗಾತಿ. ಮುದ್ದು ಮುದ್ದಾಗಿ ಮಾತಾಡುತ್ತಾಳೆ. ಪುಟ್ಟ ಪುಟ್ಟ ಹೆಜ್ಜೆ ಇಡುತ್ತಾಳೆ. ಸಾಯಂಕಾಲವಾಯಿತೆಂದರೆ ಅವಳು ಮನೆಯಲ್ಲಿ ಇರುವುದೇ ಇಲ್ಲ. ಹೊರಗೆ ಹೋಗಿ ತಿರುಗಾಡಿಕೊಂಡು ಬರ ಬೇಕೆಂದು ಬಯಸುತ್ತಾಳೆ. ನಿತ್ಯವೂ ಸಂಜೆ ಅವಳು ಹೊರಗೆ ಹೋಗದೆ ಇರುವುದೇ ಇಲ್ಲ.

"ಎಲ್ಲಿಗೆ ಹೋಗುತ್ತಿ ಉಷಾ?' ಎಂದು ಯಾರಾದರೂ ಕೇಳಿದರೆ "ವಾಲ್ಕಿಂಗ್" ಎನ್ನುತ್ತಾಳೆ. ನಾಲಗೆ ತಿರುಗುವುದಿಲ್ಲ.

ಉಷಾ ವಾಕಿಂಗ್ ಹೋಗುವುದೆಂದರೆ ಸಾಮಾನ್ಯವೇ! ಹೊರಗೆ ತಿರುಗಾಡಿಕೊಂಡು ಬರುವುದೆಂದರೆ ಹೇಗೆಂದರೆ ಹಾಗೆ ಇರಲು ಸಾಧ್ಯವೇ! ಆದರಿಂದ ಉಷಾ ಒಳ್ಳೊಳ್ಳೆಯ ಬಣ್ಣದ ಲಂಗ, ಜುಬ್ಬಗಳನ್ನು ಹೊಲಿಸಿಕೊಂಡಿದ್ದಾಳೆ. ಪೇಟೆಯಲ್ಲಿ ಸಾಮಾನು ಕೊಂಡುಕೊಳ್ಳುವುದಕ್ಕೆ, ದುಡ್ಡು ಹಾಕಿಕೊಳ್ಳಲು ಒಂದು ಚರ್ಮದ ಚೀಲ ಕೊಂಡುಕೊಂಡಿದ್ದಾಳೆ. ಕಾಲಿಗೆ ಹಾಕಿ ಕೊಳ್ಳುವುದಕ್ಕೆ ಚಪ್ಪಲಿ ಇಟ್ಟುಕೊಂಡಿದ್ದಾಳೆ. ಅವಳು ಹೊರಗೆ ವಾಕಿಂಗ್ ಹೋಗಬೇಕಾದರೆ ಇಷ್ಟೂ ಅವಳಿಗೆ ಬೇಕೇಬೇಕು.

ಯಾವೊತ್ತೂ ಹೊರಗೆ ಹೋಗುವಂತೆ ಈವೊತ್ತೂ ಉಷಾ ವಾಕಿಂಗ್ ಹೋಗಲು ಸಿದ್ಧವಾದಳು. ಮೈಸೂರು ಗಂಧದ ಸಾಬೂನು ತಿಕ್ಕಿ ಮುಖ ತೊಳೆದುಕೊಂಡಳು. ತಾಯಿಯ ಕೈಯಲ್ಲಿ ಹೆರಳು ಹಾಕಿಸಿಕೊಂಡಳು. ಗುಲಾಬಿ ಬಣ್ಣದ ಲಂಗ ಜುಬ್ಬ ಧರಿಸಿಕೊಂಡಳು. ಹಿತ್ತಲಿಗೆ ಹೋಗಿ ಗುಲಾಬಿ ಗಿಡದಲ್ಲಿ ಆಗ ತಾನೆ ಅರಳಿದ ಒಂದು ಕೆಂಪು ಗುಲಾಬಿಯನ್ನು ಮೆಲ್ಲಗೆ ಬಿಡಿಸಿ ತಂದು ತಲೆಯಲ್ಲಿ ಮುಡಿದುಕೊಂಡಳು. ಕಾಲಿಗೆ ಚಪ್ಪಲಿ ಮೆಟ್ಟಿಕೊಂಡಳು. ಕಾಮನಬಿಲ್ಲಿನ ಬಣ್ಣದ ಪುಟಾಣಿ ಕೊಡೆ ಬಿಚ್ಚಿ ಹಿಡಿದುಕೊಂಡಳು. ಎಡಗೈಯಲ್ಲಿ ದುಡ್ಡಿನ ಚೀಲ ಹಿಡಿದು ಕೊಳ್ಳುವುದಕ್ಕೆ ಮರೆಯಲಿಲ್ಲ.

ಉಷಾ ಈಗ ಮನೆ ಬಿಟ್ಟು ಹೊರಟಳು ಹೊರಗಡೆ.

"ಚಿನ್ನಿ ಸಿಂಗಾರಿ ನಮ್ಮ ಉಷಾ,
ನಡೆವಳು ಈಗ ವಿಹಾರಕ್ಕೆ.

ಕಾಮನ ಬಿಲ್ಲನು ಹೋಲುವ ಪುಟ್ಟಕೊಡೆ
ಮೆರೆದಿದೆ ನೋಡಿ ಬಲಗೈಯಲ್ಲಿ,
ಹಣದ ಭಾರಕೆ ತೂಗುವ ಚೀಲ
ಕಂಗೊಳಿಸಿದೆ ನೋಡಿ ಎಡಗೈಯಲ್ಲಿ:
ಹೆರಳಿಗೆ ಅಂದ ಕೆಂಪು ಗುಲಾಬಿ,
ಮಿರ ಮಿರುಗುವ ಲಂಗ ಮೈಯ ಮೇಲೆ.
ರಕ್ಷಣೆ ಚಪ್ಪಲಿ ಹೂಪಾದಗಳಿಗೆ,
ನಡೆವಳು ನೋಡಿ ನಮ್ಮ ಸಿಂಗಾರಿ
ಬಿಂಕದ ಬೆಡಗಿನ ನಮ್ಮ ಬಂಗಾರಿ
ಚಿನ್ನಿ ಸಿಂಗಾರಿ ನಮ್ಮ ಉಷಾ"
ಎಂದು ಹೇಳಿ ಅವಳ ಅಮ್ಮ ನಕ್ಕರು.

"ಹೋಗಮ್ಮ" ಎಂದು ನಾಚಿಕೆ ನಟಿಸಿ ನಡೆದಳು ಹೊರಗೆ ತಿರುಗಾಟಕ್ಕೆ. ಸಂಜೆ ಚೆನ್ನಾಗಿತ್ತು.

ಉಷಾ ಇನ್ನೂ ಮನೆಯಿಂದ ಹೊರಟಳೋ ಇಲ್ಲವೋ ಅವಳನ್ನು ಒಂದು ಹುಂಜ ಎದುರುಗೊಂಡಿತು. 'ಕೊ ! ಕ್ಕೊ ! ಕ್ಕೋ ! ನಮಸ್ಕಾರ ಅಕ್ಕ' ಎಂದಿತು ಹುಂಜ.

"ನಮತ್ಕಾರ" ಎಂದಳು ಉಷಾ. ನಮಸ್ಕಾರ ಎನ್ನಬೇಕು. ಅವಳಿಗೆ ನಾಲಗೆ ತಿರುಗುವುದಿಲ್ಲ. "ನಮತ್ಕಾರ" ಎಂದಳು.

"ಎಲ್ಲಿಗೆ ಹೊರಟೆ?" ಎಂದು ಕೇಳಿತು ಹುಂಜ.

"ಗೊತ್ತಿಲ್ಲವೇ ? ವಾಲ್ಕಿಂಗ್ ಹೊರಟಿದ್ದೇನೆ" ಎಂದಳು ಉಷಾ.

"ನಾನೂ ಬರಲಾ ಅಕ್ಕ ವಾಕಿಂಗ್" ? ಹುಂಜ ಕೇಳಿತು ಮತ್ತೆ.

"ಆಗಬಹುದಪ್ಪ ಹುಂಜರಾಜ. ಆದರೆ ನೀನು ಈಗ ಇರುವ ಹಾಗೆ ಬರಬಾರದು. ಕಸದಲ್ಲಿ ಓಡಾಡಿ ನಿನ್ನ ಕಾಲೆಲ್ಲ ಗಲೀಜಾಗಿದೆ. ಬಾಲವೆಲ್ಲಾ ಗಲೀಜಾಗಿದೆ. ರೆಕ್ಕೆಗಳೆಲ್ಲಾ ಗಲೀಜಾಗಿದೆ. ಶುಚಿಯಾಗಿ ಬಂದರೆ ಆಗಬಹುದು" ಎಂದಳು ಉಷಾ ಹುಂಜಕ್ಕೆ.

"ಹಾಗೇ ಆಗಲಿ" ಎಂದು ಹುಂಜ ಶುಚಿಯಾಗಿಯೇ ಬಂತು. ತಲೆಯ ಮೇಲೆ ಕೆಂಪು ಬಣ್ಣದ ಕಿರೀಟ. ಹಸುರು, ನೀಲಿ, ಕೆಂಪು, ಬಿಳುಪು ಎಲ್ಲಾ ಸೇರಿದ ಪುಕ್ಕಗಳ ರೆಕ್ಕೆ. ಅವೇ ಬಣ್ಣಗಳೆಲ್ಲಾ ಜಮಾಯಿಸಿ ಬಿಲ್ಲಿನಂತೆ ಬಾಗಿರುವ ಬಾಲ. ನೋಡಿದರೆ ಸಾಕು. ಹಿಡಿದು ಇಟ್ಟುಕೊಳ್ಳೋಣ ಎಂದು ಆಸೆಯಾಗಬೇಕು ಯಾರಿಗಾದರೂ. ಅಷ್ಟು ಸೊಗಸಾಗಿ ಬಂತು ಹುಂಜ ಮೈ ತೊಳೆದು ಶುಚಿಯಾಗಿ. "ಕೊ, ಕೋ, ಕ್ಕೋ" ಎಂದು ಕೂಗಿತು ಹುಂಜ ಆನಂದಕ್ಕೆ.

ಉಷಾ ಹುಂಜದೊಡನೆ ಹತ್ತು ಹೆಜ್ಜೆ ನಡೆದಳೊ ಇಲ್ಲವೊ ಬೆಕ್ಕು ಬಂತು ಎದುರಿಗೆ.

"ಮಿಯಾವ್, ಮಿಯಾವ್ ನಮಸ್ಕಾರ ಅಕ್ಕ. ಹೊರಟು ಬಿಟ್ಟಿದ್ದೀಯ ವಾಕಿಂಗ್ ?" ಎಂದು ಕೇಳಿತು ಬೆಕ್ಕು.

"ನಮಸ್ಕಾರ. ವಾಕಿಂಗ್ ಹೋಗುತ್ತಿದ್ದೇನೆ" ಎಂದಳು ಉಷಾ.

"ನಾನೂ ಬರಲಾ ಅಕ್ಕ?" ಬೆಕ್ಕು ಕೇಳಿತು. "ಬರಬಹುದು. ಆದರೆ ಒಂದು ಮಾತು" ಎಂದಳು ಉಷಾ.

"ಏನಕ್ಕ ಅದು ?" ಎಂದು ಕೇಳಿತು ಬೆಕ್ಕು.

"ನೋಡಪ್ಪ, ನಿನಗೆ ಇಲಿ, ಹಕ್ಕಿ ಎಂದರೆ ಪ್ರಾಣ. ನಾನು ಆ ಕಡೆ ಈ ಕಡೆ ನೋಡುತ್ತಿರುವಾಗ ಈ ಹುಂಜದ ಮೇಲೆ ಬಿದ್ದು ಅದರ ಕತ್ತನ್ನು ಕಿವಿಚಿಬಿಟ್ಟರೆ, ನಾನೆಲ್ಲಿಗೆ ಹೋಗಲಿ ಆಮೇಲೆ? ಹಾಗೆ ಮಾಡುವುದಿಲ್ಲ ಎಂದರೆ ಆಗಬಹುದು" ಎಂದಳು ಉಷಾ ಬೆಕ್ಕಿಗೆ.

"ಇಲ್ಲಕ್ಕ, ನೀನು ಹೇಳಿದ ಹಾಗೆ ಕೇಳುತ್ತೇನೆ. ಬರಲಾ ಹಾಗಾದರೆ?" ಎಂದಿತು ವಿನಯದಿಂದ ಬೆಕ್ಕು.

"ನೋಡು, ನಿನ್ನ ಮೂತಿಗೆ ಕೆಂಪಗೆ ಏನೋ ಮೆತ್ತಿಕೊಂಡಿದೆ. ಈಗ ತಾನೆ ಇಲಿ, ಹಕ್ಕಿ ಹಿಡಿದು ಫಲಾಹಾರ

ಮಾಡಿರಬೇಕು. ಹೋಗಿ, ಚೆನ್ನಾಗಿ ಬಾಯಿ ತೊಳೆದುಕೊಂಡು ಬಾ. ಹೊರಗೆ ಹೋಗಬೇಕಾದರೆ ಶುಚಿ ರುಚಿಯಾಗಿ ಇರಬೇಕು" ಎಂದಳು ಉಷಾ.

"ಮನೆಯೊಳಗೂ ಗಲೀಜಾಗಿರಬಾರದು, ಅಲ್ಲವೇನಕ್ಕ?" ಎಂದಿತು ಹುಂಜ.

"ಹೌದು ಹುಂಜರಾಜ" ಎಂದಳು ಉಷಾ.

ಬೆಕ್ಕು ಓಡಿತು ಮುಖ ತೊಳೆದುಕೊಂಡು ಬರುವುದಕ್ಕೆ.

"ಮಿಯಾವ್. ಮಿಯಾವ್" ಎಂದು ಮಿಾಗುಟ್ಟುತ್ತಾ ಬೆಕ್ಕು ಓಡಿ ಬಂತು ಶುಚಿಯಾಗಿ. ಬೆಕ್ಕಿನ ಮೈಯೆಲ್ಲಾ ಕಪ್ಪು. ಮಿಣ ಮಿಣ ಹೊಳೆಯುತ್ತಿದೆ ಕಪ್ಪು ರೇಶಿಮೆಯ ಹಾಗೆ, ಕಣ್ಣೋ, ನೀಲಿ ಗಾಜಿನ ಗೋಲಿಗಳು. ಮೀಸೆ ಬೇರೆ ಮುಖಕ್ಕೆ ಮುದ್ದಾಗಿ. ಬಾಲ ಎತ್ತಿಕೊಂಡು ಓಡಿ ಬಂತು.

"ಮಿಯಾವ್, ಮಿಯಾವ್"

ಉಷಾ, ಹುಂಜ ಬೆಕ್ಕುಗಳನ್ನು ಜೊತೆ ಮಾಡಿಕೊಂಡು ಇನ್ನೂ ಹತ್ತು ಹೆಜ್ಜೆ ಮುಂದಿಟ್ಟಳು.

ನಾಯಿ ಎದುರುಗೊಂಡಿತು, ಮೂರು ಮಂದಿಯನ್ನೂ.

"ಬೌ, ಬೌ, ಬೌ, ನಮಸ್ಕಾರ ಅಕ್ಕ. ಆಗಲೇ ಹೊರಟು ಬಿಟ್ಟಿದ್ದೀಯ ವಾಕಿಂಗ್" ಎಂದಿತು ನಾಯಿ.

"ನಮಸ್ಕಾರ ಸಂಜೆಯಾಯಿತು. ಮನೆಯಲ್ಲೇ ಕೂತಿದ್ದರೆ ಚೆನ್ನಾಗಿರುತ್ತೆ? ಹೊರಗೆ ಹೋಗಿ ಬಂದರೆ ಗಟ್ಟಿಯಾಗಿರುತ್ತಾರಂತೆ ಮಕ್ಕಳು. ಅದಕ್ಕೇ ನಾನು ಸಂಜೆಯಾದರೆ ಹೊರಗೆ ಹೋಗುತ್ತೇನೆ ತಿರುಗಾಡುವುದಕ್ಕೆ" ಎಂದಳು ಉಷಾ.

"ಸರಿ ಅಕ್ಕ, ನಾನೂ ಬರಲಾ ನಿನ್ನ ಜೊತೆ?" ಎಂದು ಕೇಳಿತು ನಾಯಿ.

"ಮಹಾರಾಯನಾಗಿ ಬಾಪ್ಪ. ಆದರೆ ಒಂದು ಮಾತು" ಎಂದಳು ಉಷಾ.

"ಅದು ಏನಕ್ಕ" ಎಂದು ಕೇಳಿತು ನಾಯಿ.

"ನೋಡಪ್ಪ, ನೀನು ತುಂಟ ಎಂದರೆ ತುಂಟ. ಒಂದು ನಿಮಿಷವೂ ಸುಮ್ಮನಿರುವುದಿಲ್ಲ. ನನ್ನ ಜೊತೆ ಇದ್ದಾಗ ನೀನು ಅಲ್ಲಿ ಓಡುವುದು, ಇಲ್ಲಿ ಓಡುವುದು ಕೂಡದು. ಹುಂಜರಾಜ, ಈ ಚೀಲಿ ನಿನಗೆ ಹೆದರುತ್ತಾರೆ. ಅವರ ಮೇಲೆ ಬೀಳುವುದಿಲ್ಲ,

ಎಂದರೆ ಆಗಬಹುದು" ಎಂದಳು ನಾಯಿಗೆ ಉಷಾ.

"ನೀನು ಹೇಳಿದ ಹಾಗೆ ಮಾಡುತ್ತೇನೆ ಅಕ್ಕ. ನಿನ್ನ ಜೊತೆಯಲ್ಲೇ ಇರುತ್ತೇನೆ. ಹುಂಜ, ಚೀಲಿಗಳ ಮೇಲೆ ಬೀಳುವುದಿಲ್ಲ, ಸರಿಯೇ ?" ಎಂದಿತು ನಾಯಿ.

"ಸರಿ. ಹೋಗಿ ಶುಚಿಯಾಗಿ ಬಾ" ಎಂದಳು ಉಷಾ.

"ವಾಕಿಂಗ್ ಹೋಗುವಾಗ ಗಂಭೀರವಾಗಿರಬೇಕು ಅಲ್ಲವೇ ಅಕ್ಕ?" ಹುಂಜ ಕೇಳಿತು.

"ಅಲ್ಲಿ ಇಲ್ಲಿ ಓಡುವುದು, ಬೀದಿಯಲ್ಲಿ ಬಿದ್ದಿರುವುದನ್ನು ಆರಿಸಿಕೊಳ್ಳುವುದು, ಇವೆಲ್ಲಾ ಮಾಡಿದರೆ ಇವನೇನಪ್ಪ, ಚಪಲ, ನಯವಿಲ್ಲ, ನಾಜೂಕಿಲ್ಲ ಅನ್ನುತ್ತಾರೆ. ಅಲ್ಲವೇನಕ್ಕ?" ಎಂದಿತು ಬೆಕ್ಕು.

"ಹೌದು" ಎಂದಳು ಉಷಾ.

ನಾಯಿ ಓಡಿತು ಶುಚಿಯಾಗಿ ಬರುವುದಕ್ಕೆ. ಬಾಯಿ ತೊಳೆದುಕೊಂಡು, ಮೈ ಒರಸಿಕೊಂಡು ಓಡಿ ಬಂತು. 'ಬೌ, ಬೌ, ಬೌ' ಎಂದು ಬಾಲ ಅಲ್ಲಾಡಿಸಿಕೊಂಡು ಬೊಗಳುತ್ತಾ ಓಡಿ ಬಂತು.

ಬಿಳಿ ರೇಶಿಮೆಯಂತೆ ಮೆತ್ತಗೆ ಮೈಯೆಲ್ಲಾ ಬಿಳುಪಾಗಿತ್ತು ಅದರ ಚರ್ಮ. ಬೆನ್ನಿನ ಮೇಲೆ, ಬಾಲದ ಹತ್ತಿರ ಮತ್ತು ಎರಡು ಕಿವಿಗಳು ಮಾತ್ರ ಕಪ್ಪು. ಕಣ್ಣುಗಳು ಬೂದಿ ಬಣ್ಣದ ಗಾಜಿನ ಗೋಲಿಗಳಂತೆ ಮಿಣಮಿಣ ಹೊಳೆಯುತ್ತಿವೆ. ಅದನ್ನು ನೋಡಿದರೆ ಸಾಕು. ಯಾರೂ ಎತ್ತಿಕೊಂಡು ಮುದ್ದಾಡುತ್ತಾರೆ. ನಾಯಿ ಅಷ್ಟು ಚೆನ್ನಾಗಿತ್ತು.

"ಬೌ, ಬೌ, ಬೌ" ಎಂದಿತು ಜೊತೆಗೂಡಿ.

ಈಗ ಉಷಾ, ಹುಂಜ, ಬೆಕ್ಕು, ನಾಯಿ ಎಲ್ಲಾ ಕೂಡಿಕೊಂಡು ಹೊರಟರು ವಾಕಿಂಗ್.

ಹೊರಗೆಲ್ಲಾ ತಿರುಗಾಡಿದ ಮೇಲೆ ಉಷಾ ತನ್ನ ಮನೆಯ ಕಡೆ ಬಂದಳು, ತನ್ನ ಪ್ರಟಾಣಿ ಗೆಳೆಯರೊಡಗೂಡಿ. ಅಷ್ಟು ಹೊತ್ತಿಗಾಗಲೇ ಸಂಜೆ ಹೋಗಿ ರಾತ್ರಿ ಆಗುವುದರಲ್ಲಿತ್ತು. ಆಕಾಶದಲ್ಲಿ ಚಂದ್ರ ಕಾಣಿಸಿಕೊಂಡಿದ್ದ. ಒಂದೊಂದಾಗಿ ನಕ್ಷತ್ರಗಳು ಹುಟ್ಟುತ್ತಿದ್ದವು.

"ಇದೇ ನಮ್ಮ ಮನೆ. ಇನ್ನು ನಾನು ಬರಲಾ ? ನಾಳೆ ಸರಿಯಾದ ಹೊತ್ತಿಗೆ ಬಂದು ಬಿಡಿ, ವಾಲ್ಕಿಂಗ್ ಹೋಗೋಣ, ನಮಸ್ಕಾರ" ಎಂದಳು ಉಷಾ ಗೆಳೆಯರಿಗೆ.

"ನಮಸ್ಕಾರ ಅಕ್ಕ, ಕೊ, ಕ್ಕೊ, ಕ್ಕೋ" ಎಂದಿತು ಹುಂಜ ರಾಜ.

"ನಮಸ್ಕಾರ ಅಕ್ಕ, ಮಿಯಾವ್ ಮಿಯಾವ್" ಎಂದಿತು ಬೆಕ್ಕು.

"ನಮಸ್ಕಾರ ಅಕ್ಕ, ಬೌ ಬೌ ಬೌ" ಎಂದಿತು ನಾಯಿ.

ಉಷಾ "ನಮತ್ಕಾರ" ಎಂದು ಮನೆಯೊಳಗೆ ಓಡಿ ಹೋದಳು.

ನಾಟಕ

ದೀಪಾವಳಿ

—ಬಿ. ಶ್ರೀ ಪಾಂಡುರಂಗರಾವ್

ಪಾತ್ರಗಳು

ನರಕಾಸುರ	:	ಒಬ್ಬ ರಾಕ್ಷಸ
ಶ್ರೀ ಕೃಷ್ಣ	:	ಅವನ ಶತ್ರು
ಬಲಿ ಚಕ್ರವರ್ತಿ	:	ರಾಕ್ಷಸ ರಾಜ
ಶುಕ್ರಾಚಾರ್ಯ	:	ಬಲಿ ಚಕ್ರವರ್ತಿಯ ಕುಲಗುರು
ವಾಮನ	:	ಬಾಲಕ ಬ್ರಹ್ಮಚಾರಿ
ವರ್ಧಮಾನ ಕುಮಾರ	:	ಕುಂಡಲಿ ನಗರದ ರಾಜಕುಮಾರ
ಪ್ರಿಯಕಾರಿಣಿ ದೇವಿ	:	ವರ್ಧಮಾನನ ತಾಯಿ
ಸಿದ್ಧಾರ್ಥರಾಜ	:	ವರ್ಧಮಾನನ ತಂದೆ

ವರ್ಧಮಾನನ ಸೇವಕ

ಮೇಳದ ನಾಯಕ

ಎರಡು ಮೇಳಗಳು

ಕಾಲ : ಪುರಾಣ ಕಾಲದಿಂದ ಇಂದಿನವರೆಗೆ.

ಅಭಿನಯದ ಅವಧಿ : ಸುಮಾರು ನಲವತ್ತೈದು ನಿಮಿಷಗಳು.

ದೀಪಾವಳಿ

[ರಂಗಮಂಟಪದ ಮುಂದಿನ ತೆರೆ ಸರಿದ ಕೂಡಲೆ ಮೂವರು ಮಂದಿ ಬಾಲಕ ಬಾಲಕಿಯರಂತೆ ಎರಡು ತಂಡಗಳು ರಂಗಸ್ಥಳದ ಎಡಬಲ ಪಕ್ಕಗಳಲ್ಲಿ ನಿಂತಿರುವುದು ಕಾಣಿಸುತ್ತದೆ. ಈ ಮೇಳಗಳ ಮಧ್ಯೆ ಮೇಳದ ನಾಯಕ ನಿಂತಿದ್ದಾನೆ. ಮೇಳಗಳ ನಾಲ್ಕು ಬಾಲಕಿಯರು ಬಣ್ಣ ಬಣ್ಣದ ಹಬ್ಬದುಡಿಗೆಗಳಲ್ಲಿ ಸಿಂಗರಿಸಿಕೊಂಡಿದ್ದಾರೆ. ಮೇಳಗಳ ಇಬ್ಬರು ಬಾಲಕರು ಉದ್ದವಾದ ಬಿಳಿಯ ಜುಬ್ಬ, ಮೊಳಕಾಲಿನಿಂದ ಕೆಳಗೆ ಬಿಗಿಯಾಗಿ ಮೇಲೆ ಸಡಿಲವಾಗಿರುವಂಥ ಶರಾಯಿ ತೊಟ್ಟಿದ್ದಾರೆ. ಮೇಳದ ನಾಯಕನೂ ಮೇಳದ ಬಾಲಕರಂತೆ ಉಡುಪು ಧರಿಸಿದ್ದಾನೆ. ಮೇಳಗಳ ಕೈಯಲ್ಲಿ ಸಮಯಕ್ಕೆ ತಕ್ಕ ಹಾಗೆ ಖಂಜರಿಯೋ, ಕೋಲೋ ಇರುತ್ತವೆ; ಗೀತ ಪ್ರಾರಂಭವಾದಾಗಲೆಲ್ಲ ಅವುಗಳ ಬಳಕೆ ಇರುತ್ತದೆ. ಮುಂದಿನ ಪರವೆ ಸರಿದ ಕೂಡಲೆ ಮೇಳದ ನಾಯಕ ಸಂಭಾಷಣೆಗೆ ಪ್ರಾರಂಭಿಸುತ್ತಾನೆ.]

ಮೇಳದ ನಾಯಕ : ಹಬ್ಬ ಬಂತು ಹಬ್ಬ ; ದೀಪಾವಳಿಯ ಹಬ್ಬ ; ಬೆಳಗಾಗುತ್ತಲೇ ದೀಪಾವಳಿ ಹಬ್ಬ.

ಎಡಭಾಗದ ಮೇಳ : ಹೌದು, ಹೌದು, ದೀಪಾವಳಿಯ ಹಬ್ಬ. ನಾಡಿಗೆ ನಾಡೇ ನಲಿಯುವ ಹಬ್ಬ.

ಬಲಭಾಗದ ಮೇಳ : ನಮಗಂತೂ ಸಡಗರದ ಹಬ್ಬ, ಸಂತೋಷದ ಹಬ್ಬ.

ಮೇಳದ ನಾಯಕ : ಆದರಿಂದ, ಪುಟ್ಟ ಹಕ್ಕಿಗಳೇ! ನಿಮ್ಮ ಕಲ ಕಲ ದನಿಗಳಿಂದ ದೀಪಾವಳಿ ಹಬ್ಬವನ್ನು ಸ್ವಾಗತಿಸಿ ಹಾಡಿ, ನರ್ತನ ಮಾಡಿ! .

ಎರಡೂ ಮೇಳಗಳು : ಹಬ್ಬ ಬಂತು, ಓ ಗೆಳೆಯರೇ, ತೋರಣ ಕಟ್ಟೋಣ !

ಹಬ್ಬ ಹಬ್ಬಕೂ ಮನೆಯ ಬಾಗಿಲಿಗೆ
ತೋರಣ ಕಟ್ಟೋಣ !
ಮಾವಿನ ತೋಪಿಗೆ ಬನ್ನಿರಿ ಗೆಳೆಯರೆ
ತೋರಣ ಕಟ್ಟೋಣ !

ಮೇಳದ ನಾಯಕ : ಭಲೆ, ಭಲೆ! ಹಾಡು ಚೆನ್ನಾಗಿದೆ, ಮುಂದೆ ಸಾಗಲಿ ನಿಮ್ಮ ಗಾನ.

ಎರಡು ಮೇಳಗಳು : ಅಕ್ಕ ರಂಗೋಲಿ ಯಿಕ್ಕುವ ಮೊದಲೆ
ತೋರಣ ಕಟ್ಟೋಣ
ಚಿಕ್ಕ ಮಕ್ಕಳೇಳುವ ಹೊತ್ತಿಗೆ ಹೊಸ
ತೋರಣ ಕಟ್ಟೋಣ

ಮೇಳದ ನಾಯಕ : ನ್ಯಾಯ, ಭಾವ ಬರುತ್ತಾರೆಂದು ಚಿಕ್ಕ ಮಕ್ಕಳಿಗೆ ಸಡಗರ. ಪತಿದೇವರು ಬರುತ್ತಾರೆಂದು ಅಕ್ಕನಿಗೆ ಸಡಗರ.

ಎರಡು ಮೇಳಗಳು : ದೇವ ದೇವನಾನಂದದ ಹಬ್ಬಕೆ
ತೋರಣ ಕಟ್ಟೋಣ
ಪಾವನ ಮೂರ್ತಿ ಮನೆಗೆ ಬರುವನು
ತೋರಣ ಕಟ್ಟೋಣ

ಮೇಳದ ನಾಯಕ : ನಾಡಿನ ಚಿನ್ನರೇ, ಒಳ್ಳೆಯ ಹಾಡನ್ನೇ ಹಾಡಿದಿರಿ. ಈ ಹಬ್ಬ ದೇವ ದೇವನ ಆನಂದದ ಹಬ್ಬವೇ ಸರಿ. ಏಕೆಂದರೆ, ನಮ್ಮ ಪಾವನಮೂರ್ತಿ ಶ್ರೀ ಕೃಷ್ಣನು ಲೋಕ ಕಂಟಕನಾದ ನರಕಾಸುರನನ್ನು ಸಂಹಾರ ಮಾಡಿ ನಮ್ಮ ನಾಡಿನ ಕಷ್ಟವನ್ನು ಹೋಗಲಾಡಿಸಿದ ಹಬ್ಬ ತಾನೆ ಇದು, ದೀಪಾವಳಿ !

[ಇದ್ದಕ್ಕಿದ್ದ ಹಾಗೆ ಭೂಮಿ ನಡುಗುವಂತೆ, ಆಕಾಶ ಬಿರಿಯು ವಂತೆ, ಭಯಂಕರ ಆರ್ಭಟ ಕೇಳಿ ಬರುತ್ತದೆ.]

ಎರಡು ಮೇಳಗಳು : ಅಯ್ಯಯ್ಯೋ ಕೆಟ್ಟೆವು! ಕೆಟ್ಟೆವು!

[ಎಂದು ದಿಕ್ಕಾಪಾಲಾಗಿ ಪಲಾಯನ ಮಾಡುತ್ತವೆ. ಮೇಳದ ನಾಯಕ ಒಬ್ಬನು ಮಾತ್ರ ಉಳಿಯುತ್ತಾನೆ. ಅವನೂ ಈಗ ರಂಗದ ಎಡಭಾಗಕ್ಕೆ ಸರಿದು ತನ್ನ ಬಲಗಡೆಗೆ ಕಕ್ಕಾಬಿಕ್ಕಿಯಾಗಿ ನೋಡುತ್ತಾನೆ. ಅಷ್ಟರಲ್ಲಿ—]

ತೆರೆಯಲ್ಲಿ : ಭೂಮಿಯ ಮಗ ನಾನು. ಪ್ರಾಗ್ಜ್ಯೋತಿಷ ಪುರಿಯ ದೊರೆ ನಾನು. ಇಂದ್ರನನ್ನು ಅಮರಾವತಿ ಯಿಂದ ಓಡಿಸಿದ ವೀರ ನಾನು. ನಾನೆಂದರೆ ಮೂರು

ಲೋಕಗಳೂ ಗಡಗಡ ನಡುಗುತ್ತವೆ. ನರಕಾಸುರ ನೆಂದರೆ ಸಾಮಾನ್ಯನೇ !

ಮೇಳದ ನಾಯಕ : ಅಯ್ಯಯ್ಯೋ ನರಕಾಸುರ ! ನರಕಾಸುರ ಇತ್ತ ಕಡೆಯೇ ಬರುತ್ತಿದ್ದಾನೆ, ಇನ್ನೇನು ಗತಿ !

[ಹೀಗೆ ಹೇಳುತ್ತಿರುವಾಗ ನರಕಾಸುರ ಎಡಹೆಗಲ ಮೇಲೆ ಗದೆ ಏರಿಸಿ, ಬಲಗೈಯಿಂದ ಮೀಸೆ ಹುರಿ ಮಾಡುತ್ತ ಭೂಮಿ ನಡುಗುವಂತೆ ಧಿಮ ಧಿಮ ಹೆಜ್ಜೆ ಹಾಕುತ್ತಾ ಬರುತ್ತಾನೆ. ರಂಗಸ್ಥಳದ ಮೇಲೆ ಸುತ್ತಾಡುತ್ತ ಹಿಂದೆ ಹೇಳಿದಂತೆಯೇ ಅಬ್ಬರದಿಂದ ಹೇಳುತ್ತಾನೆ.]

ನರಕಾಸುರ : ಭೂಮಿಯ ಮಗ ನಾನು. ಪ್ರಾಗ್ಜ್ಯೋತಿಷ ಪುರಿಯ ದೊರೆ ನಾನು. ಇಂದ್ರನನ್ನು ಅಮರಾವತಿಯಿಂದ ಓಡಿಸಿದ ವೀರ ನಾನು. ನಾನೆಂದರೆ ಮೂರು ಲೋಕಗಳೂ ಗಡಗಡ ನಡುಗುತ್ತವೆ. ಇಂದ್ರ, ವಿಷ್ಣು ಮೊದಲಾದವರ ತಾಯಿಯಾದ ದಿತಿ ದೇವಿಯ ಕಿವಿಗಳ ಓಲೆಗಳನ್ನೇ ಲಪಟಾಯಿಸಿಬಿಟ್ಟಿದ್ದೇನೆ. ನರಕಾಸುರನೆಂದರೆ ಸಾಮಾನ್ಯನೇ !

[ರಂಗಸ್ಥಳವನ್ನು ಗುಡುಗಾಡಿಸಿ ಮೀಸೆ ತಿರುವುತ್ತಾನೆ.]

ಮೇಳದ ನಾಯಕ : ನರಕಾಸುರ, ಇದು ನಿನಗೆ ಒಳ್ಳೆಯದಲ್ಲ. ನೀನು ಇಷ್ಟು ಕೊಬ್ಬಬಾರದು.

ನರಕಾಸುರ : ಭೂಮಿ, ಸ್ವರ್ಗ, ಪಾತಾಳಗಳನ್ನು ಗಡಗಡ ಗುಟ್ಟಿಸುವ ನನಗೆ ಯಾರು ಎದುರು ?

ಮೇಳದ ನಾಯಕ : ಒಪ್ಪಿದೆ. ನೀನು ಧೀರ, ನೀನು ವೀರ. ಮೂರು ಲೋಕಗಳಿಗೂ ಅತಿ ಭಯಂಕರ. ಆದರೂ ನಿನಗೆ ಮೀರಿದವನು ಒಬ್ಬ ಶೂರ, ಅದೊ ಅಲ್ಲಿ....

ತೆರೆಯಲ್ಲಿ : ದೇವ ಬಂದನು ತನ್ನ ನೆನೆವರ ।
ಕಾವ ಬಂದನು ದೈತ್ಯಕುಲವನ ।
ದಾವ ಬಂದನು ಭಾಗವತ ಜನಲೋಲುಪನು
ಬಂದ ॥

ಭಾವಿಸುವರಘಹಾರಿ ಬಂದನು ।
ಓವಿ ಬಂದರೆ ತನ್ನ ಬೀರುವ ॥
ದೇವ ಬಂದನು ವೀರ ನರಯಣ ಬಂದನು

ಮೇಳದ ನಾಯಕ : ಅಗೋ ನೋಡು, ನಿನಗೆ ಯಮನಾಗಿ ಬರುತ್ತಿದ್ದಾನೆ ನಮ್ಮ ಸ್ವಾಮಿ ಶ್ರೀ ಕೃಷ್ಣ.

ನರಕಾಸುರ: ಓಹೋ, ಶ್ರೀಕೃಷ್ಣನೇ! ಹಸುಗಳನ್ನು ಕಾಯುವ ಗೊಲ್ಲ! ಕಾಡುಮೇಡುಗಳನ್ನು ಅಲೆಯುತ್ತಾ ಕೊಳಲೂದಿ ಕಾಲಹರಣ ಮಾಡುತ್ತಿದ್ದ ಗೋಪಾಲ. ಜರಾಸಂಧನಿಗೆ ಹೆದರಿ ಮಧುರೆಯಿಂದ ದ್ವಾರಕಾವತಿಗೆ ಪಲಾಯನ ಮಾಡಿದ ಮಹಾವೀರ. ಬರಲಿ, ಬರಲಿ, ನೋಡಿಯೇ ಬಿಡುತ್ತೇನೆ ಒಂದು ಕೈ.

ಮೇಳದ ನಾಯಕ : ನಮ್ಮ ಸ್ವಾಮಿ ಬಂದ! ನಮ್ಮ ಶ್ರೀ ಕೃಷ್ಣ ಬಂದ. ಶ್ರೀ ಕೃಷ್ಣಸ್ವಾಮಿ, ನಿನಗೆ ನಮೋ, ನಮೋ.

[ಶ್ರೀ ಕೃಷ್ಣನು ಕೈಯಲ್ಲಿ ಚಕ್ರ ಹಿಡಿದು ಬರುವನು.]

ಶ್ರೀ ಕೃಷ್ಣ : ನರಕಾಸುರ, ಅನ್ಯಾಯವಾಗಿ ಹಾಳಾಗಬೇಡ. ದಿತಿ ದೇವಿಯ ಓಲೆಗಳನ್ನು ಆಕೆಗೆ ಕೊಟ್ಟುಬಿಡು. ಇಂದ್ರ ನಿಗೆ ಆತನ ಅಮರಾವತಿಯನ್ನು ಬಿಟ್ಟುಬಿಡು. ಯಾರ ತಂಟೆಗಳಿಗೂ ಹೋಗದ ಸಾಧುಜನಗಳನ್ನು ಅವರವರ ಪಾಡಿಗೆ ನೆಮ್ಮದಿಯಿಂದಿರಲು ಬಿಡು. ನಿನ್ನ ಪಾಡಿಗೆ ನೀನು ಸುಖವಾಗಿದ್ದು ಒಳ್ಳೆಯವನೆನ್ನಿಸಿಕೋ. ದುರಾಸೆ ಬೇಡ. ನಿನ್ನದೇ ನಿನಗೆ ಬೇಕಾದಷ್ಟಿದೆ. ಇನ್ನೊಬ್ಬರ ಗೋಜಿಗೆ ಹೋಗುವುದು ಮಹಾಪಾಪ.

ನರಕಾಸುರ : ಹೋಗೋ ಹೋಗೋ ! ಕೈಲಾಗದ ಹೇಡಿ ಬಂದ, ಉಪದೇಶ ಮಾಡುವುದಕ್ಕೆ. ಧೈರ್ಯವಿದ್ದರೆ ಬಾ ಯುದ್ಧಕ್ಕೆ. ನೀತಿ ಹೇಳಲು ಬಂದೆಯೇನೋ ? ಆ ಅಳು ಮೋರೆ ಇಂದ್ರನ ಮಾತು ಕೇಳಿಕೊಂಡು !

ಶ್ರೀ ಕೃಷ್ಣ : ನಿಧಾನಿಸಿ ನೋಡು ನರಕಾಸುರ. ಅನ್ಯಾಯವಾಗಿ ಸಾಯಬೇಡ ನನ್ನ ಕೈಯಲ್ಲಿ.

ನರಕಾಸುರ : ಈ ಗದೆಯ ಹೊಡೆತ ತಿಂದು ಉಳಿದುಕೊ ಮೊದಲು. ಆಮೇಲೆ ನೋಡೋಣ ಯಾರು ಸಾಯು ತ್ತಾರೆಂದು !

[ಗದೆ ಎತ್ತುವನು. ಮೇಳದ ನಾಯಕ ತಡೆಯುವನು.]

ಮೇಳದ ನಾಯಕ : ನರಕಾಸುರ, ನರಕಾಸುರ, ನೀನು ಮಾಡು ತ್ತಿರುವುದು ಅನ್ಯಾಯ. ಯುದ್ಧ ಪ್ರಾರಂಭವಾಗುವು ದಕ್ಕೆ ಮೊದಲೇ ಶ್ರೀ ಕೃಷ್ಣನ ಮೇಲೆ ಬೀಳುವುದಕ್ಕೆ ಹೋಗುವೆಯಲ್ಲ. ಇದು ನಿನಗೆ ನ್ಯಾಯವಲ್ಲ.

ಶ್ರೀ ಕೃಷ್ಣ : ನಿನ್ನಂಥ ಅನ್ಯಾಯದವನನ್ನು ಸುಮ್ಮನೆ ಬಿಡು ವುದು ನ್ಯಾಯವಲ್ಲ. ಕೈ ಮಿಂಚಿತು. ಇದೋ ನನ್ನ ಚಕ್ರ ವನ್ನು ನಿನ್ನ ಮೇಲೆ ಬಿಡುತ್ತೇನೆ. ಈಗ ಅದು ನಿನ್ನ ತಲೆಯನ್ನು ಹಾರಿಸಿಬಿಡುತ್ತದೆ.

ನರಕಾಸುರ : ಬಾಯಿಮಾತು ಬೇಡ. ಕಾರ್ಯವನ್ನು ಆರಂಭಿಸು. ನಡೆ, ಯುದ್ಧವನ್ನೇ ಮಾಡೋಣ.

[ಎಂದು ಗದೆ ತಿರುವುತ್ತಾ, ಮೀಸೆ ಹುರಿ ಮಾಡುತ್ತಾ ತೆರೆಯ ಪಕ್ಕಕ್ಕೆ ಹೋಗುವನು. ಶ್ರೀ ಕೃಷ್ಣನು ಚಕ್ರ ತಿರುಗಿಸುತ್ತಾ ಅವನನ್ನು ಹಿಂಬಾಲಿಸುವನು.]

ನರಕಾಸುರ : [ತೆರೆಯಲ್ಲಿ] ಸತ್ತೆ, ಸತ್ತೆ! ಕೃಷ್ಣ ,ಕೃಷ್ಣ! ಕಾಪಾಡು ಕಾಪಾಡು.

ತೆರೆಯಲ್ಲಿ : ಜಯ ಜಯ ನರಕಾಸುರ ಮರ್ದನ!

[ದೃಶ್ಯ ಮೊಟ್ಟಮೊದಲು ಇದ್ದಂತೆ ಕಾಣಿಸಿಕೊಳ್ಳುತ್ತದೆ. ಮೇಳದ ನಾಯಕ ರಂಗದ ಮಧ್ಯಕ್ಕೆ ಬಂದು ನಿಲ್ಲುತ್ತಾನೆ. ಎರಡು ಮೇಳಗಳೂ ಈಗ ಕೈಯಲ್ಲಿ ಕೋಲು ಹಿಡಿದು ಎಡ ಬಲ ಭಾಗಗಳಲ್ಲಿ ಬಂದು ನಿಲ್ಲುತ್ತವೆ.]

ಮೇಳದ ನಾಯಕ : ಜನರೇ, ಕೇಳಿದಿರಾ ನರಕಾಸುರನ ಕಥೆ. ಸಾಯುವಾಗ ಅವನು ಶ್ರೀ ಕೃಷ್ಣನನ್ನು ಪ್ರಾರ್ಥಿಸಿಕೊಂಡ ನಂತೆ: "ಸ್ವಾಮಿ, ನನ್ನ ಹಬ್ಬವನ್ನು ಜನವೆಲ್ಲ ಆಚರಿಸುವ ಹಾಗೆ ವರವನ್ನು ಕರುಣಿಸು" ಎಂದು. ದಯಾಮಯನಾದ ನಮ್ಮ ಸ್ವಾಮಿ ಶ್ರೀ ಕೃಷ್ಣ, ನರಕಾಸುರನ ಇಷ್ಟವನ್ನು ನಡಸಿಕೊಡಲು ಒಪ್ಪಿಕೊಂಡನಂತೆ. ಅದರಿಂದ ಕಾರ್ತಿಕದ ಬಲಿಪಾಡ್ಯಮಿಗೆ ಮೊದಲು, ದೀಪಾವಳಿಯ ಹಬ್ಬದ ಮೊದಲ ದಿವಸ ನಾವು ನರಕಚತುರ್ಥಿ ಹಬ್ಬವನ್ನು ನಡಸುತ್ತೇವೆ.

ಒಟ್ಟುಮೇಳ : ಹೊಸತು ಹಬ್ಬವಿದೊ ನಾಡಿನ ಹಬ್ಬಕೆ
ತೋರಣ ಕಟ್ಟೋಣ
ಒಸಗೆಯಾಗಲಿದೆ ನಾಡು ನಾಡಿಗೇ
ತೋರಣ ಕಟ್ಟೋಣ.

ಮೇಳದ ನಾಯಕ : ನಾಡಿನ ಹಬ್ಬವೇ ಸರಿ ದೀಪಾವಳಿ : ಏಕೆಂದರೆ ಯಾರು ಯಾರು ದೇಶಕ್ಕೆ ಕೆಟ್ಟವರೋ ಅವರ ನ್ನೆಲ್ಲ ನಾಶ ಮಾಡಿ ನಮ್ಮ ಸ್ವಾಮಿ ಜನಕ್ಕೆ ಮಂಗಳವನ್ನು ಉಂಟು ಮಾಡಿದ. ದೀಪಾವಳಿಯ ಬಲಿಪಾಡ್ಯಮಿಯೂ ಅಂಥದೇ ಇನ್ನೊಂದು ಹಬ್ಬ. ನಮ್ಮ ಸ್ವಾಮಿ ವಾಮ ನಾವತಾರ ಮಾಡಿ ಜನತೆಗೆಲ್ಲ ಕ್ಷೇಮವನ್ನು ತಂದ ಹಬ್ಬ ಬಲಿಪಾಡ್ಯಮಿ.

ಒಟ್ಟು ಮೇಳ : ಹಾಗೇನು ?

ಮೇಳದ ನಾಯಕ : ಹೌದು. ನರಕಾಸುರನಂತೆ ಬಲಿಯೂ ರಾಕ್ಷಸ ಕುಲಕ್ಕೆ ಸೇರಿದವನು. ಆದರೆ ನಮ್ಮ ಬಲಿ ಚಕ್ರವರ್ತಿ ಕೆಟ್ಟವನಲ್ಲ. ಆದರೆ ಅವನಿಗೆ ಈ ಪ್ರಪಂಚ ವನ್ನು ತನ್ನದು ಮಾಡಿಕೊಳ್ಳಬೇಕೆಂಬ ದುರಾಶೆಯಿತ್ತು. ಆದರಿಂದ ಜನಕ್ಕೆ ಶಾಂತಿಯಿರಲಿಲ್ಲ. ನಮ್ಮ ಸ್ವಾಮಿ ಅದ ಕ್ಕಾಗಿ ಅವತಾರ ಮಾಡಬೇಕಾಯಿತು. ಯುದ್ಧ ಮಾಡದೆ, ರಕ್ತ ಹರಿಸದೆ ಬಲಿಯನ್ನು ಜಯಿಸಿ ನಾಡಿಗೆ ಕ್ಷೇಮ ತಂದ ಹಬ್ಬವಿದು ಬಲಿಪಾಡ್ಯಮಿ. ಬಲಿ ಯಾಗ ಮಾಡಿದಾಗ ನಡೆದ ಕತೆ ಕೇಳಿ.

ಎರಡೂ ಮೇಳಗಳು : ಆಗಬಹುದು.

ಮೇಳದ ನಾಯಕ : ಹೌದು. ನರ್ತನದಿಂದ ಬಲಿಪಾಡ್ಯಮಿ ಹಬ್ಬವನ್ನು ಸಾ ಗತಿಸೋಣ. ಎಲ್ಲಿ. ಪ್ರಾರಂಭಿಸಿ ನಿಮ್ಮ ಗಾನ,

ಒಟ್ಟು ಮೇಳ : ಹಬ್ಬ ಬಂತು ! ಓ ಹಬ್ಬ ! ಗೆಳೆಯರೆ
ತೋರಣ ಕಟ್ಟೋಣ.
ಹಬ್ಬ ಹಬ್ಬಕೂ ಮನೆಯ ಬಾಗಿಲಿಗೆ
ತೋರಣ ಕಟ್ಟೋಣ.
ದೇವ ದೇವನಾನಂದದ ಹಬ್ಬಕೆ
ತೋರಣ ಕಟ್ಟೋಣ
ಪಾವನಮೂರ್ತಿ ಮನೆಗೆ ಬರುವನು
ತೋರಣ ಕಟ್ಟೋಣ.

[ಮೇಳ ಹೀಗೆ ಹಾಡುತ್ತ ಕುಣಿಯುತ್ತ ಮರೆಯಾಗುವುದು. ಮೇಳದ ನಾಯಕ ಒಬ್ಬನು ಮಾತ್ರ ಉಳಿದು ಹಿಂದಿನಂತೆ ಎಡ ಭಾಗಕ್ಕೆ ಸರಿಯುವನು. ದೃಶ್ಯ ಈಗ ಇದ್ದಕ್ಕಿದ್ದಹಾಗೆ ಬದಲಾಯಿಸಿ ಬಲಿ ಚಕ್ರವರ್ತಿಯ ವೈಭವ ಎದ್ದು ಕಾಣುತ್ತದೆ.]

ತೆರೆಯಲ್ಲಿ : ದೈತ್ಯ ಕುಲ ಸಂವರ್ಧನ!
ಭಕ್ತಾಗ್ರೇಸರ ಪ್ರಹ್ಲಾದ ವರಪೌತ್ರ!
ಸ್ವರ್ಗ ಮರ್ತ್ಯ ಪಾತಾಳ
ಮಹಾ ರಾಜ್ಯಮಂಡಲಾಧೀಶ!
ಬಲಿಚಕ್ರವರ್ತಿ
ಸಾರ್ವಭೌಮ! ಜಯ ಜಯ ಜಯ!

[ಬಲಿ ಚಕ್ರವರ್ತಿ, ಕುಲಗುರು ಶುಕ್ರಾಚಾರ್ಯರೊಡನೆ ಬರುವನು]

ಮೇಳದ ನಾಯಕ : ತ್ಯಾಗವೀರ ಬಲಿಚಕ್ರವರ್ತಿ! ಸದಾ ನಿನಗೆ ಸುಸ್ವಾಗತ! ಬಲಿ ಚಕ್ರವರ್ತಿಗೆ ಜಯ ಜಯ ಜಯ!

ಬಲಿ : ಮೂರು ಲೋಕಗಳನ್ನು ಜಯಿಸಿ ಆಯಿತು. ಭೂಮಿ, ಸ್ವರ್ಗ, ಪಾತಾಳ–ಈ ಮೂರು ರಾಜ್ಯಗಳೂ ನಿರಾಯಾಸವಾಗಿ ನನ್ನ ಕೈ ಸೇರಿದುವು. ತೊಂಬತ್ತೊಂಬತ್ತು ಯಾಗಗಳನ್ನು ಮಾಡಿದ್ದೇನೆ. ನೂರನೆಯ ಯಾಗವನ್ನು ಮಾಡಿ ಅಮರಾವತಿಯನ್ನು ನನ್ನ ವಶಪಡಿಸಿಕೊಂಡು ಇಂದ್ರ ಪದವಿ ಅನುಭವಿಸುವುದೊಂದು ಮಾತ್ರ ಉಳಿದಿದೆ. ಈಗ ಮಾಡುವ ನೂರನೆಯ ಯಾಗದಲ್ಲಿ ನಾನು ಯಾರೂ ಮಾಡ

ದಷ್ಟು ದಾನವನ್ನು ಮಾಡಿ ಶಾಶ್ವತವಾದ ಕೀರ್ತಿಯನ್ನು ಪಡೆಯುತ್ತೇನೆ.

ಮೇಳದ ನಾಯಕ : ಜಯ, ಜಯ, ಜಯ! ಬಲಿ ಚಕ್ರವರ್ತಿಗೆ ಜಯ! ವಿಜಯೀ ಭವ!

ಬಲಿ : ನಾನು ಮಾಡುವ ಯಜ್ಞದಲ್ಲಿ ಯಾರು ಬಂದು ಏನೇ ಬೇಡಲಿ, ಯಾರೂ ಇಲ್ಲವೆನ್ನಬೇಡಿ. ನನ್ನನ್ನು ದಾನವಾಗಿ ಬೇಡಿದರೆ ನನ್ನನ್ನೇ ದಾನ ಮಾಡಿಬಿಡುತ್ತೇನೆ.

ಶುಕ್ರಾಚಾರ್ಯ : ಎಲ್ಲಿಯಾದರೂ ಉಂಟೇ ಪ್ರಭು ! ಹಾಗೆ ಮಾಡಬಾರದು.

ಬಲಿ : ಮಹಾ ದೈವಭಕ್ತ ಪ್ರಹ್ಲಾದನ ಮೊಮ್ಮಗನಲ್ಲವೇ ನಾನು ? ಈ ಯಾಗದಲ್ಲಿ ನಾನು ನನ್ನ ಉದ್ಧಾರವನ್ನೇ ಎದುರು ನೋಡುತ್ತಿದ್ದೇನೆ. ನನ್ನ ಯಾಗಕ್ಕೆ ಯಾವ ಮಹಾನುಭಾವನು ದಾನ ಬೇಡಲು ಬರುವನೋ ಎಂದು ಕಾಯುತ್ತಿದ್ದೇನೆ. ಅಂಥ ಮಹಾನುಭಾವನು ಇನ್ನೂ ಬರ ಲಿಲ್ಲವಲ್ಲ ನನ್ನ ದಾನವನ್ನು ಸ್ವೀಕರಿಸುವದಕ್ಕೆ !

ಮೇಳದ ನಾಯಕ : [ಬಲಗಡೆ ನೋಡಿ] ಅದೋ, ಬಾಲ ಬ್ರಹ್ಮ ಚಾರಿ ಯಾಗಮಂಟಪದ ಕಡೆಯೇ ಬರುತ್ತಿರುವ ಹಾಗಿದೆ.

[ಬಲಿ, ಶುಕ್ರಾಚಾರ್ಯರು ಮೇಳದ ನಾಯಕ ತೋರಿಸಿದ ಕಡೆ ನೋಡುತ್ತಾರೆ. ಸುಮಾರು ಎಂಟು ವರ್ಷದ ಬ್ರಾಹ್ಮಣ

ಬಾಲಕ ಬರುತ್ತಾನೆ. ತಪಸ್ವಿಗಳಂತೆ ಉಡುಗೆ ತೊಡಿಗೆ ಧರಿಸಿದ್ದಾನೆ. ಹಣೆಯಲ್ಲಿ ಎರಡು ಎಳೆಗಳ ಗಂಧದ ತಿಲಕ ಉದ್ದವಾಗಿ ಎಳೆದಿದ್ದಾನೆ. ಒಂದು ಕೈಯಲ್ಲಿ ತೀರ್ಥದ ಕಳಶ, ಇನ್ನೊಂದು ಕೈಯಲ್ಲಿ ಕಾವಿ ಬಣ್ಣದ ಛತ್ರಿ ಇದೆ.]

ಬಲಿ : ಧನ್ಯನಾದೆ, ಮಹಾನುಭಾವ, ಧನ್ಯನಾದೆ. ನೀನು ಬಯಸಿರುವುದನ್ನು ಇಲ್ಲವೆನ್ನುವುದಿಲ್ಲ. ಕೇಳಿದುದನ್ನು ದಾನ ಮಾಡಿಬಿಡುತ್ತೇನೆ.

ವಾಮನ : ನನಗೆ ಹೆಚ್ಚೇನೂ ಬೇಡ. ಮೂರು ಹೆಜ್ಜೆಯಗಲ ಭೂಮಿ ಮಾತ್ರ ಕೊಡು.

ಶುಕ್ರಾಚಾರ್ಯ : ಚಕ್ರವರ್ತಿ, ಈ ಬ್ರಾಹ್ಮಣ ಬಾಲಕ ನೋಡುವದಕ್ಕೆ ಸಾಮಾನ್ಯನಾಗಿ ಕಾಣಿಸಿದರೂ ಅಸಾಧ್ಯನಾಗಿ ತೋರುತ್ತಾನೆ. ಬೆಟ್ಟು ತೋರಿಸಿದರೆ ಹಸ್ತ ನುಂಗುವ ಹಾಗೆ ಇದೆ. ಎಚ್ಚರಿಕೆ ?

ಬಲಿ : ನಾನು ಪ್ರತಿಜ್ಞೆ ಮಾಡಿದ್ದೇನೆ. ಮಾತು ಕೊಟ್ಟ ಮೇಲೆ ತೀರಿತು.

ಶುಕ್ರಾಚಾರ್ಯ ; ಬೇಡ, ಬೇಡ! ಈ ಬಾಲಕ ಮೂರೇ ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ನುಂಗುವಂತೆ ಕಾಣುತ್ತದೆ.

ಬಲಿ : ಮಾತು ಕೊಟ್ಟಿದ್ದೇನೆ, ತೀರಿತು. ಬ್ರಾಹ್ಮಣ ಬಾಲಕ,

ಇದೋ, ಅರ್ಘ್ಯ ಬಿಟ್ಟು ಧಾರೆ ಎರೆಯುತ್ತೇನೆ. ಮೂರು ಹೆಜ್ಜೆ ಭೂಮಿ ಅಳೆದುಕೋ.

ವಾಮನ : [ಪಾದ ಎತ್ತಿದಂತೆ ಮಾಡಿ, ಆಕಾಶವನ್ನು ಕೈಯಿಂದ ತೋರಿಸಿ] ಆಯಿತು. ಇದೋ ನನ್ನ ಪಾದವನ್ನು ಆಕಾಶಕ್ಕೆ ಎತ್ತಿದೆ. [ಆಕಾಶದಲ್ಲಿ ದೊಡ್ಡ ಪಾದವೊಂದು ಕಾಣಿಸಿಕೊಳ್ಳುವುದು]


ಮೇಳದ ನಾಯಕ : ಆಶ್ಚರ್ಯ ! ಆಶ್ಚರ್ಯ ! ವಾಮನ ಆಕಾಶವನ್ನೆಲ್ಲ ಒಂದೇ ಪಾದದಿಂದ ಆಕ್ರಮಿಸಿಬಿಟ್ಟ.

ವಾಮನ : ಚಕ್ರವರ್ತಿ, ಆಕಾಶವೆಲ್ಲ ಒಂದೇ ಹೆಜ್ಜೆಗೆ ಸಾಕಾಗಿ ಹೋಯಿತಲ್ಲ ! ಎರಡನೆಯ ಹೆಜ್ಜೆಯನ್ನು ಭೂಮಿಗೆ ಇಡುತ್ತೇನೆ.

ಬಲಿ : ಆಗಬಹುದು ಸ್ವಾಮಿ, ಭೂಮಿಯ ಮೇಲೆ ನಿನ್ನ ಹೆಜ್ಜೆಯನ್ನಿಟ್ಟು ಅಳೆದುಕೋ.

ವಾಮನ : ಇದೋ, ಭೂಮಿಯ ಮೇಲೆ ನನ್ನ ಪಾದವನ್ನಿಟ್ಟೆ. [ಭೂಮಿಗೆ ಸೋಕಿದ ಹಾಗೆ ಒಂದು ದೊಡ್ಡ ಪಾದ ಕಾಣಿಸಿ ಕೊಳ್ಳುವುದು]


Gujjar



ಮೇಳದ ನಾಯಕ : ಆಶ್ಚರ್ಯದ ಮೇಲೆ ಆಶ್ಚರ್ಯ ! ವಾಮನದೇವ ಎರಡನೆಯ ಹೆಜ್ಜೆಯಿಂದ ಭೂಮಿಯನ್ನು ಆಕ್ರಮಿಸಿಕೊಂಡುಬಿಟ್ಟ.

ವಾಮನ : ಬಲಿ ಚಕ್ರವರ್ತಿ, ನನ್ನ ಎರಡನೆಯ ಹೆಜ್ಜೆಗೆ ಭೂಮಿಯೆಲ್ಲಾ ಮುಗಿದು ಹೋಯಿತು. ಮೂರನೆಯ ಹೆಜ್ಜೆಯನ್ನು ಎಲ್ಲಿ ಇಡಲಿ?

ಮೇಳದ ನಾಯಕ : ಮೂರನೆಯ ಹೆಜ್ಜೆಗೆ ಏನನ್ನು ಕೊಡುವೆ ಚಕ್ರವರ್ತಿ ?

ಬಲಿ : ಮಹಾನುಭಾವ, ನೀನು ಸಾಮಾನ್ಯನಲ್ಲ. ನನ್ನನ್ನೇ ಕಾಪಾಡಲು ಬಂದ ಮಹಾಪುರುಷ. ನಿನ್ನ ಮೂರನೆಯ ಹೆಜ್ಜೆಯನ್ನು ನನ್ನ ತಲೆಯ ಮೇಲಿಟ್ಟು ಅಳೆದುಕೊ ನಿನ್ನ ದಾನವನ್ನು.

ಶುಕ್ರಾಚಾರ್ಯ : ಅಯ್ಯಯ್ಯೋ ! ಚಕ್ರವರ್ತಿ, ಬೇಡ, ಬೇಡ, ಈವರೆಗೆ ಇಂಥ ದಾನವನ್ನು ಯಾರೂ ಮಾಡಿಲ್ಲ. ಅನ್ಯಾಯವಾಗಿ ಹಾಳಾಗುವೆ.

ಬಲಿ : ಗುರುಗಳೇ, ಕೊಟ್ಟ ಮಾತಿಗೆ ತಪ್ಪುವುದಿಲ್ಲ. ಆಡಿದಂತೆ ನಡೆದೇ ತೀರುತ್ತೇನೆ. ನನ್ನ ಭಾಗ್ಯದ ದೈವವೆ, ನನ್ನ ತಲೆಯ ಮೇಲೆ ಇಡು ನಿನ್ನ ಮೂರನೆಯ ಹೆಜ್ಜೆಯನ್ನು.

ವಾಮನ : ಆಯಿತು.

ಬಲಿ : ನಿನ್ನ ಪಾದಗಳನ್ನು ಕರುಣಿಸು. ಪಾದ ತೊಳೆಯುತ್ತೇನೆ ಮೊದಲು.

[ದೃಶ್ಯ ಇದ್ದಕ್ಕಿದ್ದ ಹಾಗೆ ಬದಲಾಯಿಸಿ ಹೋಗುತ್ತದೆ. ನಾಟಕ ಪ್ರಾರಂಭವಾದಾಗ ಇದ್ದ ಹಾಗೆ ದೃಶ್ಯ ಕಾಣುತ್ತದೆ. ಮೇಳದ ನಾಯಕ ಮಾತ್ರ ಕಾಣಿಸಿಕೊಳ್ಳುತ್ತಾನೆ.]

ತೆರೆಯಲ್ಲಿ : ಅಯ್ಯಯ್ಯೊ ! ದಾನ ಬೇಡಿ, ವಾಮನ ನಮ್ಮ ಚಕ್ರವರ್ತಿಯನ್ನು ಪಾತಾಳಕ್ಕೆ ಮೆಟ್ಟಿ ತುಳಿದೇಬಿಟ್ಟ. ನಮ್ಮ ದೊರೆ ಬಾಲ ಬ್ರಹ್ಮಚಾರಿಯನ್ನು ನಂಬಿ ಹಾಳಾಗಿ ಹೋದ.

[ಈಗ ಎರಡೂ ಮೇಳಗಳು ಮೇಳದ ನಾಯಕನ ಎಡ ಬಲ ಭಾಗ ಗಳಲ್ಲಿ ಬಂದು ನಿಲ್ಲುವವು. ಕೈಯಲ್ಲಿ ಕೋಲಾಟದ ಕೋಲು ಹಿಡಿದಿದ್ದಾರೆ.]

ಮೇಳದ ನಾಯಕ : ಚಿಣ್ಣರೇ ಕೇಳಿದಿರಾ, ಬಲಿ ಚಕ್ರವರ್ತಿ ದಾನ ಮಾಡಿದ ಕಥೆ. ಬಲಿ ಚಕ್ರವರ್ತಿಯನ್ನು ನಮ್ಮ ಸ್ವಾಮಿ, ವಾಮನ, ತ್ರಿವಿಕ್ರಮಾವತಾರದಿಂದ ಪಾತಾಳಕ್ಕೆ ಮೆಟ್ಟಿಬಿಟ್ಟ. ಬಲಿ ಚಕ್ರವರ್ತಿಯ ರಾಜ್ಯ ಪಾತಾಳದಲ್ಲಿ ಸ್ಥಾಪನೆಯಾಯಿತು. ಅಲ್ಲಿ ಚಕ್ರವರ್ತಿಯ ಅರಮನೆಯ ಬಾಗಿಲು ಕಾಯುವ ಕೆಲಸವನ್ನು ನಮ್ಮ ಸ್ವಾಮಿ ಒಪ್ಪಿ ಕೊಂಡ. ಬಲಿಚಕ್ರವರ್ತಿ ನಿಮ್ಮ ವಾಮನನನ್ನು ಆಗ ಕೇಳಿಕೊಂಡನಂತೆ: "ವಾಮದೇವ, ವರ್ಷಕ್ಕೆ ಒಂದು ದಿನ ನನಗೆ ನನ್ನ ಭೂಲೋಕವನ್ನು ದರ್ಶನ ಮಾಡುವ ವರ

ವನ್ನು ಕರುಣಿಸು. ನನ್ನ ಪ್ರಜೆಗಳನ್ನು ನೋಡುವ ಭಾಗ್ಯ ಕರುಣಿಸು" ಎಂದು. ನಮ್ಮ ಸ್ವಾಮಿ ದಯಾಮಯ ನಲ್ಲವೇ! ಆಗಲಿ ಎಂದು ವರವನ್ನು ಕೊಟ್ಟ. ಅದರಿಂದ ಪ್ರತಿ ವರ್ಷದಲ್ಲಿ ಕಾರ್ತಿಕ ಮಾಸದ ಮೊದಲ ದಿವಸ, ಪಾಡ್ಯಮಿಯ ಸಂಜೆ, ಬಲಿಚಕ್ರವರ್ತಿ ತನ್ನ ರಾಜ್ಯವನ್ನು ನೋಡಲು ಬರುತ್ತಾನೆಂದು ನಮ್ಮ ಜನರ ನಂಬಿಕೆ. ಆ ದಿನ ನಮ್ಮ ಜನವೆಲ್ಲ ತಮ್ಮ ಮನೆಗಳನ್ನು ನೂರಾರು ದೀಪಗಳಿಂದ ಬೆಳಗಿ ಆತನನ್ನು ಮಹಾ ವೈಭವದಿಂದ ಸ್ವಾಗತಿಸುವರು. ಈಗ ನಾವೂ ನಮ್ಮ ಬಲಿ ಚಕ್ರವರ್ತಿ ಯನ್ನು ನಮ್ಮ ನಾಡಿನ ಕೋಲಾಟದ ಪದದಿಂದ ಸ್ವಾಗತಿ ಸೋಣ.

ಒಟ್ಟು ಮೇಳ : ಕೋಲೂ–ಕೋಲೂ ಕೋಲಣ್ಣ ಕೋಲೆ
ಕೋಲೂ–ಕೋಲೂ ಕೋಲೆ–ಕೋಲಣ್ಣ
ಕೋಲೆ ॥

ಹಾಲು ಹಳ್ಳವಾಗಿ
ಬೆಣ್ಣೆ ಬೆಟ್ಟವಾಗಿ
ಮೂರೂ ಮುಕ್ಕಾಲು ಗಳಿಗೆ ಬಲೀಂದ್ರನ ।
ರಾಜ್ಯವೋ ರಾಜ್ಯವಣ್ಣ
ಕೋಲೂ ಕೋಲೂ ಕೋಲಣ್ಣ ಕೋಲೇ
ಕೋಲೂ ಕೋಲೂ ಕೋಲೆ ಕೋಲಣ್ಣ
ಕೋಲೆ ॥

ಮೇಳದ ನಾಯಕ : ನಮಗೆ ಯುಗಾದಿ ಹೇಗೋ ಉತ್ತರ ಭಾರತದಲ್ಲಿ ದೀಪಾವಳಿ ಹಾಗೆ ಹೊಸ ವರ್ಷ.

ಒಂದನೆಯ ಮೇಳದ ಬಾಲಕ : ಆ ದಿವಸ ಗುಜರಾತಿ ಮಾರ್ವಾಡಿ ಅಂಗಡಿಗಳಲ್ಲಿ ಏನು ವೈಭವ! ಅಂಗಡಿಗಳನ್ನು ಬಹಳ ಸೊಗಸಾಗಿ ಶೃಂಗಾರ ಮಾಡಿರುತ್ತಾರೆ. ಅಂಗಡಿಗಳಿಗೆ ಬರುವ ಅತಿಥಿಗೆ ಪನ್ನೀರು ಚಿಮುಕಿಸುವುದೇನು! ಅಪ್ತರು, ಗಂಧಗಳನ್ನು ಕೈಗಳಿಗೆ ಬಳಿಯುವುದೇನು! ಹಾರ ಹಾಕಿ ಲಡ್ಡು ಮಿಠಾಯಿ ಕೊಟ್ಟು ಉಪಚಾರದ ಮಾತಾಡುವುದೇನು! ಅಬ್ಬಬ್ಬ! ಹಬ್ಬವೆಂದರೆ ದೀಪಾವಳಿ ಹಬ್ಬ! ನಮಗೆಲ್ಲ ಮಜದ ಹಬ್ಬ ದೀಪಾವಳಿ!

ಎರಡನೆಯ ಮೇಳದ ಬಾಲಕ : ಅಷ್ಟಕ್ಕೆ ಮುಗಿಯುವದಿಲ್ಲವಪ್ಪ ಗುಜರಾತಿ, ಮಾರ್ವಾಡಿಗಳ ದೀಪಾವಳಿ ಹಬ್ಬ. ಸಂಜೆಯಲ್ಲಿ ಅವರು ಲಕ್ಷ್ಮೀಪೂಜೆ ಬೇರೆ ಮಾಡುತ್ತಾರೆ. ಆಗ ನೋಡಬೇಕು ಅವರ ಸಂತೋಷ !

ಮೇಳದ ನಾಯಕ : ಇವೆಲ್ಲ ಅವರ ಆಚರಣೆಯಾಯಿತು. ದೀಪಾವಳಿಯಲ್ಲಿ ಎಲ್ಲರೂ ದೀಪ ಬೆಳಗುವರಲ್ಲ ; ಅದಕ್ಕೆ ಕಾರಣವೇ ಬೇರೆಯಂತೆ.

ಒಟ್ಟು ಮೇಳ : ಹಾಗೇನು ?

ಮೇಳದ ನಾಯಕ : ಹೌದು, ಅದಕ್ಕೆ ಕಾರಣ ಬೇರೆ ಇದೆ. ನಾವು ಈಗ ಉತ್ತರ ಬಿಹಾರವೆಂದು ಕರೆಯುತ್ತೇವಲ್ಲ !

ಅಲ್ಲಿ ಪೂರ್ವಕಾಲದಲ್ಲಿ ವಿದೇಹ ರಾಜ್ಯವೆಂಬ ಒಂದು ರಾಜ್ಯವಿತ್ತು.

ಒಟ್ಟು ಮೇಳ : ಹೌ ಹೌ ಹೌದು. ವಿದೇಹ ವಿದರ್ಭ ರಾಜ್ಯಗಳ ಹೆಸರು ಪುರಾಣ ಚರಿತ್ರೆಗಳಲ್ಲಿ ಕೇಳಿದ್ದೇವೆ.

ಮೇಳದ ನಾಯಕ : ಆ ವಿದೇಹ ರಾಜ್ಯಕ್ಕೆ ರಾಜಧಾನಿಯಾಗಿ ವೈಶಾಲಿ ಎಂಬ ಹೆಸರಿನ ಪಟ್ಟಣವಿತ್ತು. ಅಲ್ಲಿ ಲಿಚ್ಛವಿ ಎಂಬ ವಂಶದ ಅರಸು ಚೇಟಕರಾಜ ರಾಜ್ಯವಾಳುತ್ತಿದ್ದ.

ಒಟ್ಟು ಮೇಳ : ಓ! ನಮ್ಮ ಬುದ್ಧ ಇಂಥ ಒಬ್ಬ ಅರಸು ಕುಮಾರ ; ಅಲ್ಲವೆ ?

ಮೇಳದ ನಾಯಕ : ಹೌದು ಹೌದು, ನೇಪಾಳದ ಗಡಿಯಲ್ಲಿ ಕಪಿಲವಸ್ತುವಿನಲ್ಲಿ ಬುದ್ಧನ ತಂದೆ ಶುದ್ಧೋದನರಾಯ ಆಳುತ್ತಿದ್ದ. ಆತನು ಶಾಕ್ಯವಂಶದವನು. ಬುದ್ಧ ಆತನ ಮಗ.

ಒಟ್ಟು ಮೇಳ : ಸರಿ, ಸರಿ,

ಮೇಳದ ನಾಯಕ : ನಮ್ಮ ಚೇಟಕರಾಜನ ರಾಜಧಾನಿ ವೈಶಾಲಿಯ ಪಕ್ಕದಲ್ಲಿಯೇ ಕುಂಡಲಿ ನಗರವೆಂಬ ಒಂದು ಊರಿತ್ತು. ಅದಕ್ಕೆ ಒಬ್ಬ ಅರಸು, ಇಕ್ಷ್ವಾಕು ವಂಶದ ಸಿದ್ಧಾರ್ಥರಾಜನೆಂದು. ಅವನಿಗೆ ಚೇಟಕರಾಜ ತನ್ನ ಮಗಳು ಪ್ರಿಯಕಾರಿಣಿ ದೇವಿಯನ್ನು ಕೊಟ್ಟು ಮದುವೆ ಮಾಡಿದ್ದ.

ಈ ದಂಪತಿಗಳಿಗೆ ಮಗನಾಗಿ ಹುಟ್ಟಿದ ನಮ್ಮ ಕಥಾ ನಾಯಕ ಮಹಾವೀರ ಜಿನನೆಂಬ ಮಹಾಪುರುಷ.

ಒಟ್ಟು ಮೇಳ : ಯಾರು ? ಜೈನ ಮತದ ಕಟ್ಟಕಡೆಯ ಇಪ್ಪತ್ನಾಲ್ಕನೆಯ ತೀರ್ಥಂಕರನೆಂದು ಪ್ರಸಿದ್ಧನಾದ ಮಹಾವೀರ ಜಿನನು ಈತನೇ ಏನು ?

ಮೇಳದ ನಾಯಕ : ಹೌದು ಹೌದು, ನಾನೀಗ ಹೇಳುತ್ತಿರುವ ಸಂಗತಿ ಆತನನ್ನೇ ಕುರಿತದ್ದು. ಈ ಮಹಾವೀರ ಜಿನ ಸುಮಾರು ಎರಡೂವರೆ ಸಾವಿರ ವರ್ಷಗಳ ಕೆಳಗೆ ಬದುಕಿದ್ದ. ಅವನು ಎಪ್ಪತ್ತೆರಡು ವರ್ಷಗಳಷ್ಟು ವಯಸ್ಸಿನ ವರೆಗೆ ಬದುಕಿ ಜನರಿಗೆ ಉಪಕಾರ ಮಾಡಿ ಮುಕ್ತಿ ಪಡೆದ.

ಒಟ್ಟು ಮೇಳ : ಬುದ್ಧದೇವನು ಸುಮಾರು ಎಂಬತ್ತು ವರ್ಷ ಗಳಷ್ಟು ಕಾಲ ಜೀವಿಸಿದ್ದನಲ್ಲವೇ !

ಮೇಳದ ನಾಯಕ : ಸರಿಯಾಗಿ ಹೇಳಿದಿರಿ. ಇವರಿಬ್ಬರೂ ಸ್ವಲ್ಪ ಹೆಚ್ಚುಕಡಿಮೆ ಒಂದೇ ಕಾಲದಲ್ಲಿ ಇದ್ದವರು. ಮಹಾ ವೀರ ಜಿನ ಮುಕ್ತಿ ಪಡೆದ ದಿನ ಕಾರ್ತಿಕ ಮಾಸದ ಅಮಾ ವಾಸ್ಯೆಯ ಬೆಳಗಿನ ಜಾವ ಶ್ವೇತ ನಕ್ಷತ್ರಯೋಗವಾಗಿತ್ತಂತೆ. ಆಗ ಆತನ ಶಿಷ್ಯರು ತುಪ್ಪ, ಕರ್ಪೂರಗಳ ದೀಪ ಹೊತ್ತಿಸಿ ಇಟ್ಟರಂತೆ. ಇದೇ ಉತ್ತರ ದೇಶದಲ್ಲಿ ದೀಪಾವಳಿ ಹಬ್ಬಕ್ಕೆ ಕಾರಣವಾಯಿತು.

[ಇದ್ದಕ್ಕಿದ್ದ ಹಾಗೆ ದೃಶ್ಯ ಬದಲಾಯಿಸಿ ಹೋಗುತ್ತದೆ. ಸಿದ್ಧಾರ್ಥ ರಾಜನ ಅರಮನೆಯು ದೃಶ್ಯ ಗೋಚರವಾಗುತ್ತದೆ. ಎರಡು ಮೂರು ಸುಂದರವಾದ ಎತ್ತರದ ಆಸನಗಳನ್ನಿಟ್ಟಿದ್ದಾರೆ. ಮೇಳದ ನಾಯಕ ಒಬ್ಬನು ಪಾತ್ರ ರಂಗದ ಎಡ ಭಾಗದ ತುದಿಯಲ್ಲಿ ನಿಂತು ಯಾರನ್ನೋ ನಿರೀಕ್ಷಿಸುತ್ತಿದ್ದಾನೆ.]

ತೆರೆಯಲ್ಲಿ : ವರ್ಧಮಾನ ಕುಮಾರ, ನಿನಗೆ ಸಮನಾದ ಬಲಶಾಲಿಯಿಲ್ಲ. ನಿನಗೆಣೆಯಾದ ಪರಾಕ್ರಮಿಯಿಲ್ಲ. ನಿನ್ನಂಥ ಧೀರರಿನ್ನಿಲ್ಲ. ಮಹಾವೀರನೆಂದರೆ ನೀನೇ.

ಮೇಳದ ನಾಯಕ : ನ್ಯಾಯವೇ ! ನಮ್ಮ ಮಹಾವೀರ ಜಿನ ತೀರ್ಥಂಕರ, ಬಾಲಕನಾಗಿದ್ದಾಗ ನಡೆಸಿದ ಸಾಹಸಗಳು ಒಂದೇ, ಎರಡೇ. ವರ್ಧಮಾನಕುಮಾರನೆಂದು ಮಹಾವೀರ ಜಿನನ ಚಿಕ್ಕಂದಿನ ಹೆಸರು. ಒಂದು ದಿನ ವರ್ಧಮಾನ ಕುಮಾರ ತನ್ನ ಜೊತೆಯವರೊಡನೆ ಕಾಡಿಗೆ ಹೋದ. ಅಲ್ಲಿ ಒಂದು ಮರ ಹತ್ತಿ ಆಟವಾಡುತ್ತಿದ್ದ. ಅದೇ ಸಮಯದಲ್ಲಿ ಸಂಗಮನೆಂಬ ದೇವತೆಗೆ ಬಾಲಕ ವರ್ಧಮಾನನನ್ನು ಪರೀಕ್ಷಿಸಬೇಕೆಂದು ಮನಸ್ಸಾಯಿತು. ಅವನು ಕಾಳಸರ್ಪವಾಗಿ ತಾನೂ ಮರ ಹತ್ತತೊಡಗಿದ. ಬಾಲಕರೆಲ್ಲರೂ ಹೌಹಾರಿ ನಡುಗಿ ಬಿಟ್ಟರು. "ಘಟ ಸರ್ಪ, ಘಟ ಸರ್ಪ" ಎಂದು ಕೂಗುತ್ತಾ ದಿಕ್ಕಾಪಾಲಾಗಿ ಪಲಾಯನ ಮಾಡಿದರು. ಆದರೆ ವರ್ಧಮಾನ ಕುಮಾರ ಸ್ವಲ್ಪವೂ ಹೆದರದೆ ಸರ್ಪದ ಹೆಡೆಯ ಮೇಲೆ ತನ್ನ ಪುಟ್ಟ

ಪಾದಪೂರಿ ಸರಸರನೆ ಮರವಿಳಿದು ಬಂದುಬಿಟ್ಟ. ಹಾವೇ ಅವನಿಗೆ ಹಗ್ಗವಾಗಿತ್ತು.

ತೆರೆಯಲ್ಲಿ : ಮಹಾವೀರನೆಂದರೆ ನೀನೇ ದಿಟ. ಕಾಳ ಸರ್ಪವಾಗಿ ಬಂದ ಸಂಗಮನೆಂಬ ದೇವತೆಯ ಗರ್ವ ಭಂಗಿಸಿದ ಮಹಾವೀರ ನೀನೇ. ದೇವತೆಗಳಟ್ಟಿದ ಆನೆಯ ಮದವಿಳಿಸಿದ ಮಹಾವೀರ ನೀನೇ. ನಿನಗಾರು ಎಣೆ ಪರಾಕ್ರಮದಲ್ಲಿ ?

ಮೇಳದ ನಾಯಕ : ಹೌದು ಹೌದು. ಮರೆತಿದ್ದೆ. ಇನ್ನೊಂದು ಸಲ ಇಂಥದೇ ಪರೀಕ್ಷೆಯಾಯಿತು. ದೇವತೆಗಳಿಗೆ ವರ್ಧಮಾನ ಕುಮಾರನನ್ನು ಪರೀಕ್ಷಿಸುವ ಮನಸ್ಸಾಯಿತು. ಸರಿ. ಒಂದು ಆನೆಯನ್ನು ಸೃಷ್ಟಿಸಿದರು. ಅದಕ್ಕೆ ಮದವೇರುವಂತೆ ಮಾಡಿದರು. ಅದು ಹುಚ್ಚಾಪಟ್ಟೆ ರೇಗಿ ಎಲ್ಲೆಂದರಲ್ಲಿ ನುಗ್ಗುವುದಕ್ಕೆ ಪ್ರಾರಂಭಿಸಿತು. ಅದನ್ನು ಹಿಡಿದು ನಿಲ್ಲಿಸುವ ಗಂಡು ಅಲ್ಲಿ ಯಾರೂ ಇಲ್ಲದಂತಾಯಿತು. ಅಂಥ ಅಪಾಯ ಸಮಯದಲ್ಲಿ ನಮ್ಮ ವರ್ಧಮಾನ ಕುಮಾರ ಮುಂದಾದ. ಮದವೇರಿದ ಗಜದ ಕೊಂಬುಗಳೆರಡನ್ನೂ ಹಿಡಿದು ಸೊಂಡಿಲು ಏರಿ, ಅದರ ಮೇಲೆ ಹತ್ತಿ ಕುಳಿತ. ಕಲ್ಲಿನಂತೆ ಬಂದ ಗಂಡಾಂತರವನ್ನು ಬೆಣ್ಣೆಯಂತೆ ಕರಗಿಸಿ ಜನರಿಂದ ಮಹಾವೀರನೆಂದು ಹೊಗಳಿಸಿಕೊಂಡ. ಅಂದಿನಿಂದ ವರ್ಧಮಾನನೆಂಬ ಹೆಸರು ಹೋಗಿ ಮಹಾವೀರನೆಂಬ ಹೆಸರೇ ಲೋಕಪ್ರಖ್ಯಾತವಾಯಿತು.

[ಹೀಗೆ ಮೇಳದ ನಾಯಕ ಹಿಂದಿನ ಸಂಗತಿಗಳನ್ನು ನೆನಪು ಮಾಡಿಕೊಳ್ಳುತ್ತಿರುವಾಗ ವರ್ಧಮಾನ ಕುಮಾರನೇ ಬರುತ್ತಾನೆ. ಅವನನ್ನು ಒಬ್ಬ ಸೇವಕ ಹಿಂಬಾಲಿಸಿದ್ದಾನೆ.]

ವರ್ಧಮಾನ : ಅರಮನೆ !......ಸಿಂಹಾಸನ !......ಕಿರೀಟ ! ಅಧಿಕಾರ !... ಇವೆಲ್ಲ ನನಗೆ ಕಾಲಿನ ಸರಪಳಿಗಳಾಗಿವೆ. ಇವುಗಳಿಂದ ನಾನೀಗ ಬಿಡಿಸಿಕೊಳ್ಳಬೇಕು. ಅರಮನೆ !... ಅರಮನೆಯನ್ನು ಬಿಡುತ್ತೇನೆ...ಸಿಂಹಾಸನ !...ಅದನ್ನೂ ಬಿಟ್ಟುಬಿಡುತ್ತೇನೆ...ಅದು ನನಗೆ ಬೇಡ...ಕಿರೀಟ !... ಇದು ನನಗೆ ಅಲಂಕಾರವಾಗಿಲ್ಲ...ಮುಳ್ಳಾಗಿ ಕೂತಿದೆ... ನನಗೆ ಕಿರಿಕಿರಿಯಾಗುತ್ತದೆ, ಈ ಕಿರೀಟದಿಂದ...ಮೊದಲು ಈ ಕಿರೀಟವನ್ನು ತೆಗೆದುಹಾಕಬೇಕು ತಲೆಯಿಂದ... [ಕಿರೀಟವನ್ನು ತೆಗೆದು ಸೇವಕನ ಕೈಗೆ ಕೊಟ್ಟು] ಅಬ್ಬಾ ; ಈಗ ನನಗೆ ಎಷ್ಟು ಹಗುರವಾಯಿತು, ಜೀವಕ್ಕೆ!... ಎಂಥ ಆಡಂಬರದಿಂದ ಕೂಡಿದೆ ನನ್ನ ಜೀವನ ! ಮೈಮೇಲೆ ನಾನು ಧರಿಸುವ ಈ ಪೀತಾಂಬರಗಳು ಮಣ ಭಾರವಾಗಿವೆ ! ಕಿರೀಟದಂತೆ ಇವೂ ನನ್ನ ಜೀವನಕ್ಕೆ ಹೊರೆಯಾಗಿವೆ...ಈಗ ನಾನು ಇವುಗಳನ್ನು ಕಳಚಿಬಿಡುತ್ತೇನೆ.

[ಮೈಮೇಲೆ ಹೊದ್ದಿರುವ ಪೀತಾಂಬರವನ್ನು ತೆಗೆದು ಸೇವಕನ ಕೈಗೆ ಕೊಡುವನು.]

ಸೇವಕ : ಪ್ರಭೋ ! ಪ್ರಭೋ ! ಇದು ಸಲ್ಲದು...ಇದು ಸಲ್ಲದು ! ನೋಡಿದವರು ಏನಂದಾರು ಪ್ರಭೋ !

ವರ್ಧಮಾನ : ಯಾರೂ ಏನೂ ಅನ್ನುವದಿಲ್ಲವಪ್ಪ. ನಾನು ಮಾಡುವ ಕೆಲಸವನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಾರೆ. ಇಂದಲ್ಲ ನಾಳೆ ಮೆಚ್ಚಿಕೊಳ್ಳುತ್ತಾರೆ.

ಸೇವಕ : ಪ್ರಭೋ ! ಪ್ರಭೋ ! ನಮ್ಮನ್ನು...ನಮ್ಮನ್ನು ತಬ್ಬಲಿಗಳನ್ನಾಗಿ ಮಾಡಬೇಡಿ ಪ್ರಭೋ !

ವರ್ಧಮಾನ : ಎಂದಿಗಾದರೂ ಉಂಟೇ ? ನನಗೆ ನೀನೂ ಬೇಕು, ಎಲ್ಲರೂ ಬೇಕು. ಈ ಪ್ರಪಂಚವೇ ನನ್ನವರು ಅಣ್ಣ.

ಸೇವಕ : [ಬೆಚ್ಚಿ] ಅಣ್ಣಾ, ನಾನು ತಮ್ಮ ಸೇವಕ ಪ್ರಭೋ.

ವರ್ಧಮಾನ : ಇಲ್ಲವಣ್ಣ, ಇಂದಿನಿಂದ ನನಗೆ ಯಾರೂ ಸೇವಕ ರಲ್ಲ. ಎಲ್ಲರೂ ನನಗೆ ಸರಿಸಮಾನ. ಇಂದಿನಿಂದ ನನಗೆ ನಾನೇ ಸ್ವಯಂ ಸಿದ್ಧ.

ಸೇವಕ : ಸ್ವಯಂ ಸಿದ್ಧ ! ಅಂದರೆ ಪ್ರಭೋ !

ವರ್ಧಮಾನ : ನಾನು ನಿನಗೆ ಪ್ರಭುವಲ್ಲ. ನೀನು ನನಗೆ ಸೇವಕ ನಲ್ಲ. ಸ್ವಯಂ ಸಿದ್ಧ ಎಂದರೆ ಏನೆಂದು ಕೇಳಿದೆಯಲ್ಲವೆ ? ಹಾಗೆಂದರೆ ಯಾರ ಕೈ ಬಾಯಿಗಳಿಗೂ ಕಾಯದೆ ತನಗೆ ಬೇಕಾದುದನ್ನು ತಾನೇ ಮಾಡಿಕೊಳ್ಳುವವನು ಎಂದರ್ಥ.

ಸೇವಕ : [ಏನೂ ತಿಳಿಯದಂತಿರುವನು.]

ವರ್ಧಮಾನ : ಆಯಿತು, ಇನ್ನು ನಾನು ಇಲ್ಲಿಂದ ಹೊರಡಲು ಸಿದ್ಧನಾಗಬೇಕು. ತಾಯಿತಂದೆಗಳ ಅಪ್ಪಣೆ ಪಡೆವರೆ ನನ್ನ ಕೆಲಸವಾದಂತಾಯಿತು. [ಎಂದು ಬಂದ ದಾರಿಯಲ್ಲಿ ಹಿಂದಿರುಗುವನು. ಸೇವಕನು ಅವನನ್ನು ಅನುಸರಿಸುವನು.]

ತೆರೆಯಲ್ಲಿ : ವರ್ಧಮಾನ ಕುಮಾರನಿಗೆ ಜೈ!
ಮಹಾವೀರನಿಗೆ ಜೈ!

[ಈಗ ಪ್ರಿಯಕಾರಿಣೀದೇವಿ ಚಿಂತೆಯ ಮುಖವನ್ನು ಹೊಂದಿ ಬರುತ್ತಾಳೆ. ಸಿದ್ಧಾರ್ಥರಾಜ ಅವಳನ್ನು ಹಿಂಬಾಲಿಸುತ್ತಾನೆ. ಪ್ರಿಯಕಾರಿಣೀದೇವಿ ಅಲ್ಲಿಯ ಒಂದು ಆಸನದ ಮೇಲೆ ಕೂಡುತ್ತಾಳೆ. ಸಿದ್ಧಾರ್ಥರಾಜ ಪಕ್ಕದಲ್ಲಿ ನಿಂತು ಸಂಭಾಷಣೆಗೆ ಪ್ರಾರಂಭಿಸುತ್ತಾನೆ.]

ಸಿದ್ಧಾರ್ಥರಾಜ : ದೇವಿ, ಚಿಂತೆ ಬಿಡು. ಕುಮಾರ ಇಂದಿನಿಂದ ನಮ್ಮವನಲ್ಲ. ಪ್ರಪಂಚದ ಮಗು ಅವನು. ಜನರ ಉದ್ಧಾರಕ್ಕೆ ಹೊರಟಿರುವ ಮಗನನ್ನು ಸಂತೋಷದಿಂದ ಬಿಟ್ಟುಕೊಡೋಣ. ಕಣ್ಣೀರು ಬೇಡ.

ಪ್ರಿಯಕಾರಿಣಿ ದೇವಿ : ದೊರೆಯೇ, ನಾನು ಹೇಗೆ ಸಹಿಸಲಿ ಈ ದುಃಖವನ್ನು ? ಮೂವತ್ತು ವರುಷಗಳು ಅರಮನೆಯಲ್ಲಿ ಗಿಳಿಯಂತೆ ಸಾಕಿದ ಮಗನನ್ನು ಈಗ ಕಾಡಿಗೆ ಒಪ್ಪಿಸುತ್ತಿರುವೆನಲ್ಲ ? ಎಂಥ ಕಠಿಣ ಹೃದಯದವಳು ನಾನು !

ಸಿದ್ಧಾರ್ಥರಾಜ : ದೇವಿ, ಎಂಥ ಭ್ರಮೆ ಹಿಡಿಯಿತು ನಿನಗೆ! ವರ್ಧಮಾನ ಕುಮಾರ ಹುಟ್ಟುವ ಮೊದಲು ನಿನಗೆ ಆದ

ಕನಸುಗಳನ್ನು ನೆನೆ. ಅವುಗಳ ಅರ್ಥವೇನು ಬಲ್ಲೆಯಾ ? ನಮ್ಮ ಕುಮಾರ ಅರಮನೆಗಾಗಿ ಹುಟ್ಟಿದವನು ; ನಮ್ಮ ಮಗನಾಗಿ ಇರುವುದಕ್ಕಾಗಿ ಭೂಮಿಗೆ ಬಂದವನು ಎಂದು ಅವು ಸೂಚಿಸಿರುವುವೇ ? ಯೋಚಿಸಿನೋಡು ?

ಪ್ರಿಯಕಾರಿಣಿ ; ಹೌದು, ಹೌದು, ಮೂವತ್ತು ವರ್ಷಗಳ ಹಿಂದೆ, ಕನಸು ಕಂಡೆ...ದಿವ್ಯ ಕನಸುಗಳನ್ನು ಕಂಡೆ... ಒಂದಲ್ಲ...ಎರಡಲ್ಲ... ಹದಿನಾರು ಸುಂದರ ಸ್ವಪ್ನಗಳು.. ಈಗ ನೆನಸಿಕೊಂಡರೆ ಅವು ಒಂದೊಂದೂ ಮಹಾ ಮಹಾ ಅದ್ಭುತಗಳು. ಒಂದು ಕನಸಿನಲ್ಲಿ ಆನೆಯನ್ನು ಕಂಡೆ...

ಸಿದ್ಧಾರ್ಥರಾಜ : ಆಗ ನಾನೇನು ಹೇಳಿದೆ ? ನೆನಪಿದೆಯೇ ದೇವಿ !

ಪ್ರಿಯಕಾರಿಣಿದೇವಿ ; ನೆನಪಿದೆ ದೊರೆ, ನೆನಪಿದೆ. ಆನೆಯನ್ನು ಕಂಡದ್ದರಿಂದ ಹುಟ್ಟುವ ಮಗ ತೀರ್ಥಂಕರನಾಗುವನೆಂದು ಅಪ್ಪಣೆ ಕೊಡಿಸಿದ್ದಿರಿ.

ಸಿದ್ಧಾರ್ಥರಾಜ : ದೇವಿ, ನೀನು ಕಂಡ ಹದಿನಾರು ಕನಸುಗಳಲ್ಲಿ ಒಂದರಲ್ಲಿ ವಿಮಾನವನ್ನು ನೋಡಿದೆನೆಂದು ಹೇಳಿದ್ದೆ ಯಲ್ಲವೇ ? ಆಗ ನಾನು ಹೇಳಿದ್ದ ಅರ್ಥವನ್ನು ಈಗ ನೆನ ಪಿಗೆ ತಂದುಕೋ.

ಪ್ರಿಯಕಾರಿಣಿ : ಈಗ ಅದೂ ಸತ್ಯವಾಗುತ್ತಿದೆ ದೊರೆ. "ಸ್ವರ್ಗದಿಂದ ಒಬ್ಬ ದೇವತೆ ಭೂಮಿಗಿಳಿದು ಬರುವನು.

ಆವನು ಈ ಭೂಮಿಯ ಜನಕ್ಕೆ ಸುಖ ಶಾಂತಿ ತರುವ ಸೂಚನೆ ಇದು" ಎಂದು ಅಪ್ಪಣೆ ಕೊಡಿಸಿದ್ದಿರಿ.

ಸಿದ್ಧಾರ್ಥರಾಜ : ವರ್ಧಮಾನ ಕುಮಾರ ನಮಗೆ ಹುಟ್ಟು ವುದಕ್ಕೆ ಮೊದಲು ನೀನು ಕಂಡ ಹದಿನಾರು ಕನಸುಗಳೂ ಇಂಥ ಸೂಚನೆಗಳನ್ನೇ ತಂದಿದ್ದವು. ಅವುಗಳ ಫಲ ಈಗ ಕಾಣುತ್ತಿದೆ. ಆದರಿಂದ ಚಿಂತಿಸಿ ಫಲವೇನು? ಧೈರ್ಯ ತಾಳೋಣ. ಲಿಚ್ಛವಿ ವಂಶದ ವೀರ ಚೇಟಕ ರಾಜರ ಮಗಳು ನೀನು. ಕುಂಡಲಿ ನಗರದ ಮಹಾ ಇಕ್ಷ್ವಾಕು ವಂಶದ ವೀರ ಕ್ಷತ್ರಿಯ ರಾಜ ಸಿದ್ಧಾರ್ಥನ ವೀರ ಪತ್ನಿ ನೀನು. ಮಹಾವೀರನೆಂದು ಪ್ರಸಿದ್ಧನಾದ ಶೂರ ಮಗನ ವೀರಮಾತೆ ನೀನು ! ನೀನೀಗ ಧೈರ್ಯ ತೋರಿಸಬೇಕಾ ಗಿದೆ. ಮಹಾತ್ಯಾಗ ಮಾಡಬೇಕಾಗಿದೆ.

ಪ್ರಿಯಕಾರಿಣಿದೇವಿ : ಆಗಲಿ ದೊರೆ, ಮಗ ನನ್ನವನು ಎಂಬ ಚಿಂತೆ ಬಿಟ್ಟೆ. ಆದರೂ ಕಡೆಯದಾಗಿ ಒಂದು ಸಲ ಬೇಡಿ ಕೊಳ್ಳುತ್ತೇನೆ. ಇದರ ಮೇಲೆ ಹಣೆಯ ಬರಹ ಇದ್ದಂತಾಗಲಿ.

ಸಿದ್ಧಾರ್ಥರಾಜ : ಆಗಬಹುದು ದೇವಿ. ಅದೋ, ವರ್ಧಮಾನ ಕುಮಾರನೇ ನಮ್ಮ ಕಡೆ ಬರುತ್ತಿದ್ದಾನೆ. [ಪ್ರಿಯಕಾರಿಣಿ ಆ ಕಡೆ ನೋಡುವಳು.]

ಪ್ರಿಯಕಾರಿಣಿದೇವಿ : [ಕಣ್ಣೀರು ಒರಸಿಕೊಂಡು] ಎಂಥ ದಿವ್ಯ ಕಳೆ ಬಂದಿದೆ ಇವೊತ್ತು ಕುಮಾರನ ಮುಖದಲ್ಲಿ !

ಸಿದ್ಧಾರ್ಥರಾಜ : ನಮ್ಮ ಕುಮಾರ ಎಲ್ಲವನ್ನೂ ಬಿಟ್ಟುಬಿಟ್ಟು ಸಾಧಾರಣ ಮನುಷ್ಯನಂತೆ ಬರುತ್ತಿದ್ದಾನೆ. ಕಿರೀಟ, ಅಲಂಕಾರ, ಪೀತಾಂಬರ ಎಲ್ಲವನ್ನೂ ಕಳಚಿಬಿಟ್ಟು ಶುಭ್ರ ಬಿಳಿಯ ಉಡುಗೆಯಲ್ಲಿ ಬರುತ್ತಿದ್ದಾನೆ. ನೋಡು ನೋಡು, ದೇವಿ, ನೋಡು. ಆಗ ಆ ಅಲಂಕಾರಗಳು ಚೆನ್ನಾಗಿದ್ದುವು. ಕುಮಾರನಿಗೆ ಈಗ ಈ ಸರಳತನವೂ ಒಪ್ಪುತ್ತಿದೆ. ನಿರಾಭರಣ ಸುಂದರನಾಗಿದ್ದಾನೆ ನಮ್ಮ ಕುಮಾರ.

[ಬಿಳಿಯುಡಿಗೆ ಉಟ್ಟ ವರ್ಧಮಾನ ಕುಮಾರ ಬರುತ್ತಾನೆ. ತಾಯಿ ತಂದೆಗಳ ಪಾದಗಳಿಗೆ ನಮಸ್ಕಾರ ಮಾಡುತ್ತಾನೆ.]

ವರ್ಧಮಾನ ಕುಮಾರ : ಅಪ್ಪಾಜಿ, ಅಮ್ಮಾಜಿ, ಕಡೆಯದಾಗಿ ನಿಮಗೆ ನಮಸ್ಕಾರ ಮಾಡುತ್ತಿದ್ದೇನೆ. ನನಗೆ ಅಪ್ಪಣೆ ಕೊಡಿ ಹೋಗುವುದಕ್ಕೆ.

ಪ್ರಿಯಕಾರಿಣಿದೇವಿ : ಮಗನೇ, ಮಗನೇ, ನೀನು ಹೋಗಲೇ ಬೇಕೆ ನಮ್ಮನ್ನು ಬಿಟ್ಟು !...ಅಯ್ಯೋ ಮಗನೆ! ನಿನ್ನನ್ನು ಕಾಡಿಗೆ ಹೇಗೆ ಕಳಿಸಿಕೊಡಲಿ ಮಗನೆ! ಅರಮನೆಯಲ್ಲಿ ಬೆಳೆದವನು ನೀನು. ಸುಪ್ಪತ್ತಿಗೆಯಲ್ಲಿ ಮಲಗುತ್ತಿದ್ದವನು ನೀನು. ಮೃದುವಾದ ರತ್ನಗಂಬಳಿಯ ಮೇಲೆ ನಡೆದು ಹೂವಿನಂತೆ ಬೆಳೆದವನು ನೀನು. ಹಸಿವು, ಆಯಾಸಗಳನ್ನು ಅನುಭವಿಸಿ ಅರಿಯದ ಸುಕುಮಾರ ನೀನು. ಈಗ ಹೇಗೆ ಇದ್ದಕ್ಕಿದ್ದಂತೆ ಸುಖದಲ್ಲಿ ಉಂಡ ಮೈಯನ್ನು ಕಷ್ಟಕ್ಕೆ ಒಡ್ಡುವೆ ? ತಾಯಿಯ ಕರುಳು ನಿನಗೆ ತಿಳಿಯದೆ ಮಗನೆ? ಹಟಬೇಡ, ನಮ್ಮನ್ನು ಕೈಬಿಡಬೇಡ,

ವರ್ಧಮಾನ : ಅಮ್ಮ ! ಅಮ್ಮ ! ನನಗಾಗಿ ನೀನು ಚಿಂತಿಸ ಬೇಡಮ್ಮ. ನನ್ನಂತೆ ನಿನಗೆ ಪ್ರಪಂಚದಲ್ಲಿರುವ ಜನವೆಲ್ಲ ಮಕ್ಕಳೆಂದು ಯೋಚಿಸಿ ನೋಡಮ್ಮ. ಎಷ್ಟು ಜನಕ್ಕೆ ನನಗೆ ಇರುವ ಹಾಗೆ ಅರಮನೆಗಳಿವೆಯಮ್ಮ! ಎಷ್ಟು ಜನಕ್ಕೆ ಹಾಸಲು, ಹೊದೆಯಲು ಅರಿವೆಗಳಿವೆಯಮ್ಮ ! ಎಷ್ಟು ಜನಕ್ಕೆ ಒಂದು ಹೊತ್ತು ಊಟ ಸಿಗುತ್ತಿದೆಯಮ್ಮ! ಅವರ ಕಷ್ಟ ಸುಖಗಳೇನು ಎಂದು ನಾನು ವಿಚಾರಿಸ ಬೇಡವೆ ? ಅವರಿಗೆ ಹೇಗೆ ಶಾಂತಿ, ಸಮಾಧಾನ ದೊರೆ ತೀತು ಎಂದು ನಾನು ಯೋಚನೆ ಮಾಡಬೇಡವೆ ? ನನ್ನ ಪಾಲಿಗೆ ನಾನಿದ್ದರೆ ಏನು ಮಾಡಿದ ಹಾಗಾಯಿತಮ್ಮ ? ದಿನವೂ ಲೆಕ್ಕವಿಲ್ಲದಷ್ಟು ಹುಳುಗಳು ಹುಟ್ಟುತ್ತವೆ, ಸಾಯುತ್ತವೆ. ಹಾಗೆಯೇ ನಾನೂ ಒಂದು ಹುಳುವಾಗಿ ಸಾಯಬೇಕೇ? ಹೇಳಮ್ಮ, ಏನು ಮಾಡಬೇಕು ತಿಳಿಸಮ್ಮ; ಹಾಗೆ ಮಾಡುತ್ತೇನೆ.

ಪ್ರಿಯಕಾರಿಣಿದೇವಿ: ನನ್ನ ಮಗ ವರ್ಧಮಾನ ಕುಮಾರ ಮಹಾ ವೀರನೆಂದು ಹೆಸರಾಗಿದ್ದಾನೆ. ಅದನ್ನು ಉಳಿಸಿಕೊಳ್ಳು ತ್ತೇನೆ ಮಗನೇ. ನಾನು ಇನ್ನು ನಿನಗಾಗಿ ಕೊರಗುವುದಿಲ್ಲ. ಹುಳುವಿನಂತೆ ಸಾಯಲು ಬಿಡುವುದಿಲ್ಲ. ಮಹಾವೀರ ಮಹಾವೀರನಾಗಿಯೇ ಉಳಿಯಬೇಕು ನನ್ನ ಕುಮಾರ.

ವರ್ಧಮಾನ : ಲಿಚ್ಛವಿ ವೀರ ವಂಶದ ತಾತ ಚೇಟಕ ರಾಜರ ವೀರ ಮಗಳು ನೀನಮ್ಮ ! ಕುಂಡಲಿ ನಗರದ ಶೂರ ರಾಜ ಸಿದ್ಧಾರ್ಥ ರಾಜರ ವೀರ ಪತ್ನಿ ನೀನಮ್ಮ, ಮಹಾ

ವೀರ ವರ್ಧಮಾನ ಕುಮಾರನ ವೀರ ತಾಯಿ ನೀನಮ್ಮ. ಆದರಂತೆ ಮಾತಾಡಿದೆ. ನನ್ನನ್ನು ಆಶೀರ್ವಾದ ಮಾಡಿ ಕಳಿಸಿಕೊಡು. [ತಾಯಿಗೆ ನಮಸ್ಕಾರ ಮಾಡುವನು; ತಂದೆಗೆ ನಮಸ್ಕಾರ ಮಾಡುವನು.]

ಪ್ರಿಯಕಾರಿಣಿ : ಮಂಗಳವಾಗಲಿ ಮಗನೇ ನಿನಗೆ.

ಸಿದ್ಧಾರ್ಥ ರಾಜ : ನಿನ್ನಿಂದ ಲೋಕಕ್ಕೆ ಕಲ್ಯಾಣವಾಗಲಿ. ಮಗನೇ.

[ತಟ್ಟೆಯಲ್ಲಿದ್ದ ಹೂವನ್ನು ವರ್ಧಮಾನ ಕುಮಾರನ ಮೇಲೆ ಎರಚುವರು. ಅವನು ತಂದೆ ತಾಯಿಗಳನ್ನು ಬಿಟ್ಟು ಹೋಗುತ್ತಿರುವನು. ಅವನು ಹೋಗುವವರೆಗೂ ಹೂವಿನ ಅರಳನ್ನು ಅವನ ಮೇಲೆ ಎರಚುತ್ತಲೇ ಇರುವರು]

[ದೃಶ್ಯ ಕೂಡಲೆ ಬದಲಾಯಿಸಿ ನಾಟಕ ಪ್ರಾರಂಭವಾದ ದೃಶ್ಯಕ್ಕೆ ತಿರುಗುತ್ತದೆ. ಮೇಳದ ನಾಯಕ ಈಗ ಮತ್ತೆ ರಂಗದ ಮಧ್ಯಕ್ಕೆ ಬಂದು ನಿಲ್ಲುತ್ತಾನೆ, ಎರಡು ಮೇಳಗಳೂ ಮೊದಲಿನಂತೆ ಅವನ ಎರಡು ಪಕ್ಕಗಳಲ್ಲೂ ಬಂದು ನಿಲ್ಲುತ್ತವೆ. ಮೇಳದ ನಾಯಕ ಸಂಭಾಷಣೆಗೆ ಪ್ರಾರಂಭಿಸುತ್ತಾನೆ.]

ಮೇಳದ ನಾಯಕ : ಹೀಗೆ ನಮ್ಮ ವರ್ಧಮಾನ ಕುಮಾರ ಅರಮನೆ ಬಿಟ್ಟು ಕಾಡಿಗೆ ನಡೆದ. ತಂದೆ ತಾಯಿಗಳನ್ನು ಬಿಟ್ಟು ಹೊರಗಿನ ಜನರನ್ನೇ ತನ್ನ ಬಂಧು ಬಳಗ ಮಾಡಿಕೊಂಡ. ತನ್ನದು ಎಲ್ಲವನ್ನೂ ಬಿಟ್ಟಿದ್ದೇನೆ ಎಂಬುದಕ್ಕೆ ಗುರುತಾಗಿ ತನ್ನ ಆಭರಣಗಳನ್ನು ಕಳಚಿದ. ಉಡುತ್ತಿದ್ದ

ಪಟ್ಟೆ ಪೀತಾಂಬರ, ಹೊದೆಯುತ್ತಿದ್ದ ಪಟ್ಟೆ ಪೀತಾಂಬರ ಗಳನ್ನು ದಾನ ಮಾಡಿದ. ಕಡೆಗೆ ಮೈಮೇಲೆ ಅವನಿಗೆ ಲಂಗೋಟಿ ಉಳಿದು ಏನೇನೂ ಬಟ್ಟೆ ಇರಲಿಲ್ಲವಂತೆ. ತಲೆಯಲ್ಲಿ ರೇಶಿಮೆಯಂತೆ ಮೃದುವಾದ ಕಪ್ಪು ಕೂದಲಿತ್ತು. ಅದನ್ನೆಲ್ಲ ಕತ್ತರಿಸಿ ಬಿಟ್ಟ. ಹೀಗೆ ಮಹಾವ್ರತ ಸಾಧಿಸಿ ಸನ್ಯಾಸಿಯಾದ. ಯಾವಾಗಲೂ ಜನಕ್ಕೆ ಒಳ್ಳೆಯದು ಮಾಡಬೇಕು ಎಂಬುದನ್ನು ಬಿಟ್ಟು ಬೇರೆ ಹಂಬಲವಿರಲಿಲ್ಲ ನಮ್ಮ ಮಹಾವೀರ ಸ್ವಾಮಿಗೆ.

ಎರಡೂ ಮೇಳಗಳು : ಎಂಥ ಪುಣ್ಯವಂತ ನಿಮ್ಮ ಮಹಾವೀರ ಸ್ವಾಮಿ ! ಬುದ್ಧ ಭಗವಂತನೂ ಹೀಗೆ ಮಾಡಿದ ಅಲ್ಲವೇ ?

ಮೇಳದ ನಾಯಕ : ಹೌದು. ಬುದ್ಧನೂ ಸುಖ, ಸಂಪತ್ತು ಬಿಟ್ಟು ಕಾಡಿಗೆ ನಡೆದ. ಇಬ್ಬರೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಕಾಲದಲ್ಲಿದ್ದವರು. ಅಕ್ಕಪಕ್ಕದವರುಕೂಡ. ಇರಲಿ. ನಮ್ಮ ಮಹಾವೀರ ಸ್ವಾಮಿ ಕಟ್ಟುನಿಟ್ಟಾಗಿ ನಿಯಮ ಪಾಲಿಸಿ ಕೇವಲ ಜ್ಞಾನ ಪಡೆದ. ಅದನ್ನು ಲೋಕಕ್ಕೆ ಉಪದೇಶ ಮಾಡಿದ.

ಎರಡೂ ಮೇಳಗಳು : ಎಂಥ ಮಹಾನುಭಾವ ನಮ್ಮ ಮಹಾ ವೀರ ಸ್ವಾಮಿ!

ಮೇಳದ ನಾಯಕ : ನಮ್ಮ ಮಹಾವೀರ ಸ್ವಾಮಿ ಸುಮಾರು ಎಪ್ಪತ್ತೆರಡು ವರ್ಷಗಳ ಕಾಲ ಬದುಕಿದ್ದ. ಸುಮಾರು

ಹನ್ನೆರಡು ವರ್ಷಗಳಷ್ಟು ಕಾಲ ತಪಸ್ಸಿನಲ್ಲಿ ಕಳೆದ. ಉಳಿದ ಮೂವತ್ತು ವರ್ಷಗಳು ದೇಶ ಸಂಚಾರ ಮಾಡಿ ಜನಕ್ಕೆ ಉಪದೇಶ ಮಾಡಿದ. ಕಡೆಗೆ ತನ್ನ ಎಪ್ಪತ್ತೆರಡನೆಯ ವರ್ಷದಲ್ಲಿ ಕಾರ್ತಿಕ ಮಾಸದ ಕೃಷ್ಣ ಚತುರ್ದಶಿಯ ರಾತ್ರಿ ಕಳೆದು ಬೆಳಗಿನ ಜಾವ ಶ್ವೇತ ನಕ್ಷತ್ರ ಯೋಗದಲ್ಲಿ ಕಾಲವಾದ.

ಎರಡೂ ಮೇಳಗಳು : ಧನ್ಯ ! ಧನ್ಯ ! ಮಹಾವೀರ ಸ್ವಾಮಿಗೆ ಜಯ ಜಯ!!

ಮೇಳದ ನಾಯಕ : ಮಹಾವೀರ ಸ್ವಾಮಿ ಕಾಲವಾದುದಕ್ಕೆ ಮಹಾನಿರ್ವಾಣವೆಂದು ಹೆಸರು. ಆಗ ಆತನ ಶಿಷ್ಯರು ತುಪ್ಪ ಕರ್ಪೂರದ ದೀಪ ಹೊತ್ತಿಸಿ ಇಟ್ಟರು. ಅದೇ ದೀಪಾವಳಿ ಹಬ್ಬವಾಯಿತು ಜನರಿಗೆ. ಈಗ ಉತ್ತರ-ದಕ್ಷಿಣ ಭಾರತ ದೇಶಗಳು ಒಂದಾಗಿ ಮಹಾ ವೈಭವದಿಂದ ದೀಪಾವಳಿ ಹಬ್ಬವನ್ನು ನಡೆಸುತ್ತವೆ.

ಎರಡೂ ಮೇಳಗಳು : ಮಹಾವೀರ ಜಿನ ಸ್ವಾಮಿಗೆ ಜಯ!
ಮಹಾವೀರ ಜಿನ ಸ್ವಾಮಿಗೆ ಜಯ !
ಮಹಾವೀರ ಜಿನ ಸ್ವಾಮಿಗೆ ಜಯ !

ಮೇಳದ ನಾಯಕ : ಈಗಂತೂ ನಮ್ಮ ದೇಶ ಸ್ವತಂತ್ರವಾಗಿದೆ. ಹೊರಗಿನಿಂದ ಬಂದ ಇಂಗ್ಲಿಷರು ನಮ್ಮ ದೇಶವನ್ನು ನಮಗೇ ಒಪ್ಪಿಸಿ ಹೋದರು. ಅದರಿಂದ ನಾಡಿನ ಚಿಣ್ಣರೇ ದೀಪಾವಳಿ ನಮಗೆ ರಾಷ್ಟ್ರೀಯ ಹಬ್ಬ ; ಹೊಸ ಹಬ್ಬದಲ್ಲಿ

ನಿಮ್ಮ ಏರು ಸ್ವರಗಳಿಂದ ಈ ಹೊಸ ರಾಷ್ಟ್ರದ ಹಬ್ಬವನ್ನು ಸ್ವಾಗತಿಸಿ.

ಎರಡೂ ಮೇಳಗಳು : ಹಬ್ಬ ಬಂತು, ಓ ಹಬ್ಬ ಗೆಳೆಯರೇ
ತೋರಣ ಕಟ್ಟೋಣ

ಹಬ್ಬ ಹಬ್ಬಕೂ ಮನೆಯ ಬಾಗಿಲಿಗೆ
ತೋರಣ ಕಟ್ಟೋಣ

ಮಾವಿನ ತೋಪಿಗೆ ಬನ್ನಿರಿ ಗೆಳೆಯರೆ
ತೋರಣ ಕಟ್ಟೋಣ

ಬೆಳಗಿನ ಜಾವ ಮುಗಿಯುವ ಮುನ್ನ
ತೋರಣ ಕಟ್ಟೋಣ

ಹೊಸದು ಹಬ್ಬವಿದೊ ನಾಡಿನ ಹಬ್ಬಕೆ
ತೋರಣ ಕಟ್ಟೋಣ

ಒಸಗೆಯಾಗಲಿದೆ ನಾಡು ನಾಡಿಗೇ
ತೋರಣ ಕಟ್ಟೋಣ

ಬಂದಿತು ಬಿಡುಗಡೆ ! ಬಿಡುಗಡೆ ಹಬ್ಬಕೆ
ತೋರಣ ಕಟ್ಟೋಣ

ನಾಡು ನಗುತಿರಲಿ ! ಅಶೋಕ ತಳಿರಿನ
ತೋರಣ ಕಟ್ಟೋಣ.*

* ['ತೋರಣ ಕಟ್ಟೋಣ' ಹಾಡನ್ನು ಕವಿ ರಾಘವರ 'ಅಶೋಕ ಚಕ್ರ' ಸಂಕಲನದಿಂದ ಅನುಮತಿ ಪಡೆದು ಉದ್ಧರಿಸಿಕೊಟ್ಟಿದೆ.]

ಎರಡನೆಯ ಅರ್ಧ

ಹಿರಿಯ ಮಕ್ಕಳಿಗಾಗಿ

ಚಂದ್ರಹಾಸನ ಬಾಲ್ಯ

ಲಕ್ಷ್ಮೀಶನ ಜೈಮಿನಿಭಾರತದಿಂದ

[ಮೇಧಾವಿ ಎಂಬುವನು ಕೇರಳ ದೇಶದ ರಾಜ, ಅವನ ಪಟ್ಟದ ರಾಣಿಗೆ ಬಹಳ ಭಾಗ್ಯವಂತನಾದ ಕುಮಾರನು ಹುಟ್ಟಿದನು. ಅವನ ಎಡ ಪಾದದಲ್ಲಿ ಆರು ಬೆರಳುಗಳು ; ಇದು ಒಳ್ಳೆಯ ಅದೃಷ್ಟದ ಲಕ್ಷಣ ಎಂದು ನಂಬಿಕೆ. ಅವನು ಮೂಲ ನಕ್ಷತ್ರ ದಲ್ಲಿ ಹುಟ್ಟಿದ್ದನಾಗಿ ತಂದೆಗೆ ಕೇಡು. ಅದರಂತೆ, ಪುತ್ರನು ಹುಟ್ಟಿ ಕೆಲವು ಕಾಲ ಕಳೆದ ಮೇಲೆ ಶತ್ರುಗಳು ಬಂದು ರಾಜ್ಯವನ್ನು ಮುತ್ತಿದರು. ರಾಜನು ಯುದ್ಧರಂಗದಲ್ಲಿ ಹೋರಾಡಿ ಮಡಿ ದನು, ಅವನ ಹೆಂಡತಿ ಅಗ್ನಿಪ್ರವೇಶ ಮಾಡಿದಳು. ಶತ್ರುಗಳು ರಾಜ್ಯವನ್ನು ಆಳತೊಡಗಿದರು. ಮಗು ತಬ್ಬಲಿಯಾಯಿತು.]

ಬಳಿಕೊರ್ವ ದಾದಿ ಶಿಶುವಂ ಕೊಂಡು ಪೊರಮಟ್ಟು
ತೊಳಲಿ ಬಳಲುತೆ ಮೆಲ್ಲಮೆಲ್ಲನೈತಂದು ಕುಂ
ತಳ ನಗರಮಂ ಪೊಕ್ಕಳಲ್ಲಿ ಸಾಕಿದಳರ್ಭಕನನತಿ ಪ್ರೇಮದಿಂದೆ

ಎಳೆಯಂಗೆ ಬೇಕಾದುದಿಲ್ಲದಿರೆ ಮರುಗುವಳ್
ಪೊಳಲೊಳಗೆ ತಿರಿದು ಹೊರೆದಳಲುವಳ್ಮುದ್ದಿಸಿ ಪ
ಸುಳಿಯ ಬಿನದಂಗಳ್ಗೆ ಹಿಗ್ಗಿ ಬಿಸುಸುಯ್ವಳವಳನು
ದಿನದೊಳಾರ್ತೆಯಾಗಿ

ಇಡೆ ತೊಟ್ಟಿಲಿಲ್ಲಾಡಿಸುವರಿಲ್ಲ ನಿನಗೆ ಪೊಂ
ದೊಡಿಗೆಯಿಲ್ಲಿರೆ ನಿಳಯಮಿಲ್ಲ ಬಿಡದೆರೆವ ನೀ
ರ್ಕುಡಿವಾಲ್ಗಳೆಣ್ಣೆಬೆಣ್ಣೆಗಳಿಲ್ಲ ಲಾಲಿಸಿ ನಲಿವ ತಂದೆತಾಯ್ಗಳಿಲ್ಲ
ಪೊಡವಿಪತಿ ಕೇರಳಾಧೀಶ್ವರಂ ಪರಕೆಯೊಳ್
ಪಡೆದನಿದಕೀಗ ನಿನ್ನಂ ನೋಡುವೆನ್ನ ಕ
ಣ್ಣೊಡೆಯದಕಟಕಟೆಂದು ಬಿಸುಸುಯ್ದಳಲ್ದು ಮರುಗುವಳಾಕೆ
ದಿನದಿನದೊಳು

ಮೊಳೆವಲ್ಲುಗುವ ಜೊಲ್ಲು ದಟ್ಟಿತಡಿ ತೊದಲು ನುಡಿ
ತೊಳತೊಳಗುತಿಹ ಸೊಬಗು ಮೆರೆವ ನಗೆಮೊಗದ ಬಗೆ
ಪೊಳೆವ ಕಣ್ ಮಿಸುಪನುಣ್ಗದಪಿನೆಣೆ ಚೆಲ್ವ ಪಣೆ ಕುರುಳ
ಜೋಲಂಬೆಗಾಲು

ಸುಳಿನಾಭಿ ಮಿಗೆ ಶೋಭಿಪಧರದೆಡೆ ಬಟ್ಟದೊಡೆ
ನಳಿತೋಳಿಡಿದ ಧೂಳಿ ಸೊಗಯಿಸುವ ವರ ಶಿಶುವ
ನಲಿದಾಡಿಸುವ ರೂಢಿಯಿಲ್ಲೆಂದು ನೆರೆ ನೊಂದು
ಮರುಗುವಳಜಸ್ರಮವಳು

ಬಾಲಕನ ಲೀಲೆಯಂ ಕಂಡು ಹಿಗ್ಗುವಳೊಮ್ಮೆ
ಲಾಲನೆಗಳಿಲ್ಲೆಂದಳಲ್ದು ಮರುಗುವಳೊಮ್ಮೆ
ಪಾಲಿಸಿದಳಿಂತು ನಡೆನುಡಿಗಳಂ ಕಲಿವಲ್ಲಿಪರಿಯಂತಮಾ
ಶಿಶುವನು

ಮೇಲೆ ರುಜೆ ಬಂದಡಸಿ ವಿಧಿವಶದೊಳಾಧಾತ್ರಿ
ಕಾಲನರಮನೆಗೈದಿದಳ್ ಬಳಿಕ ಪಸುಳೆಗೆ ನಿ
ರಾಲಂಬವಾಗಲಾ ಪಟ್ಟಣದೊಳೆಲ್ಲರ್ಗೆ ಕಾರುಣ್ಯಕೀಡಾದನು

ಚೆಲ್ವಶಿಶು ಬೀದಿಯೊಳ್ಬಂದು ದೇಸಿಗನಾಗಿ
ನಿಲ್ವಿನಂ ಕಂಡಕಂಡಬಲೆಯರ್ಕರೆಕರೆದು
ಮೆಲ್ವ ತನಿವಣ್ಗಳಂ ಕಜ್ಜಾಯ ಸಕ್ಕರೆಗಳಂ ಕುಡವರೆತ್ತಿಕೊಂಡು
ಸೊಲ್ವ ಮಾತುಗಳನಾಲಿಸಿ ಮುದ್ದಿಸುವರೀವ
ರೊಲ್ವ್ವದಂ ಮಜ್ಜನಂಗೈಸಿ ಮುಡಿಯಂ ಪೊದಿಸಿ
ಮೆಲ್ವಾಸಿನೊಳ್ಮಲಗಿಸುವರಳ್ತಿಯಿಂದೊಸೆದು ತಂತಮ್ಮ
ಮಕ್ಕಳೊಡನೆ

ಆಡುವೆಳಮಕ್ಕಳೊಡನಾಡುವಂ ಲೀಲೆ ಮಿಗೆ
ನೋಡುವಚ್ಚರಿಗಳಂ ನೋಡುವಂ ಬಾಲಕರ
ಕೂಡೆ ಮನೆಮನೆಗಳೊಳಗೂಡುತಿಹನೆಲ್ಲರ್ಗೆ ಮುದ್ದಾಗಿ
ಮೋಹಿಸುವನು

ನೋಡುವರ ಕಣ್ಗಳೊಡನಾಡೆ ತಮ್ಮಿಚ್ಛೆಯಿಂ
ದಾಡುವರ ನೆರವಿಯೊಳ್ ಕ್ರೀಡಿಸುವನಾ ಪುರದ
ರೂಡಿಸಿದ ಬೀದಿಯೊಳ್ಕೋಡದೆಲ್ಲೆಡೆಯೊಳಂ ಪಸುಳೆ
ಪರಪುಟ್ಟನಾಗಿ

ಚಟಾಕಿ

—ಎಲ್. ಗುಂಡಪ್ಪ

೧

ಅಪ್ಪನ ಜೇಬಿನ ದುಡ್ಡುಗಳೆಲ್ಲ
ಚಟಪಟಗುಟ್ಟುತ ಸಿಡಿಯುವುವು.
ಒಪ್ಪದ ನೀತಿಯ ಮಾತುಗಳೆಲ್ಲ
ತಟ್ಟನೆ ದಾರಿಯ ಹಿಡಿಯುವುವು.
ಬಗೆಬಗೆ ಬಣ್ಣದ ಹೂಗಳ ರೂಪದಿ
ಹಾರುತ ಬುಸುಬುಸುಗುಟ್ಟುವುವು.
ಉರಿಯನು ಸುರಿಸುತ ಮೊರೆಯುತ ತಿರುಗುತ
ಸರಸರನೆಲ್ಲೆಡೆ ಹರಿಯುವುವು,
ಸರುವರ ಕಿವಿಗಳ ಕೊರೆಯುವುವು,
ಮೂಗಿನ ಸೆಲೆಗಳನೊಡೆಯುವುವು ;
ಸಾರವ ತೊರೆಯುತ ಕಡೆಯಲಿ ಕಪ್ಪಗೆ
ನೆಲದಲಿ ಧೊಪ್ಪನೆ ಕೆಡೆಯುವುವು,
ಅಜ್ಜನ ಮಡಿಯನು ತೊಡೆಯುವುವು,
ಅಪ್ಪನ ಜೇಬುಗಳೊಡೆಯುವುವು,
ಸಿಡಿಯುವುವು.

೨

ಕಬ್ಬೊರ್ಗೆಯು ಮೈಮೊಗರ ಹಬ್ಬಿಸುತ ಜಗಕೆ
ಮಬ್ಬ ಕವಿಸುತ ಬರುವ ದೇವಿ ಯಾರಿವಳು ?
ಕೆಂಜಡೆಯನಡಿಗಡಿಗೆ ಕೊಡಹುತ್ತಲಿಹಳು,
ಕಿಡಿಗಣ್ಣ ಬಿರುಬಿರನೆ ತಿರುಗಿಸುತಲಿಹಳು,
ಉರಿಯ ನಾಲಗೆಗಳನು ಮುಂದೆ ಚಾಚಿಹಳು,
ತನಿಗೆಂಡದುಂಡೆಗಳ ತಾನುಗುಳುತಿಹಳು,
ಸಿಡಿಲ ನಡುಗಿಸುವಂತೆ ಬೊಬ್ಬಿರಿಯುತಿಹಳು,
ಕುಲಗಿರಿಗಳೊಡೆವಂತೆ ಅಡಿಯಿಡುತಲಿಹಳು,
ಯುದ್ಧನರ್ತನದಿಂದ ಮತ್ತಳಾಗಿಹಳು–
ಘೋರರೂಪದ ಕಾಳಿಕಾದೇವಿಯಿವಳು.

೩

ಈ ಕರಾಳಿಯ ಕಂಡು ನಡುಗಿದೆನೊಡನೆ ನೆಲದಲಿ ಕೆಡೆದೆನು.
ಧೈರ್ಯವುಡುಗಲು ಸಣ್ಣ ದನಿಯೊಳಗಿನಿತು ಬೇಡುತ
ನುಡಿದೆನು—
"ತಾಯಿ, ಕೃಪೆಯಲಿ ಕಾಯಿ ನಮ್ಮನು. ನಿನ್ನ ರೂಪವ
ನೋಡಲು
ನಡುಗಿ ನಮ್ಮೆದೆ ತಡೆಯದೊಡೆವುದು ; ಸೌಮ್ಯರೂಪವ
ತೋರಿಸು.
ರುಂಡಮಾಲೆಯು ರಕ್ತವಸ್ತ್ರವ ನೋಡುತಿರೆ ಮೈಮರೆವೆವು,

ಆ ಫಿರಂಗಿಯ ಗುಂಡಿನಬ್ಬರ ಕಿವಿಗೆ ಬೀಳಲು ಮಡಿವೆವು,
ನಮ್ಮ ಹಿರಿಯರು ನಿನ್ನ ಭಕ್ತರು ; ನಿನ್ನ ಪೂಜಿಸಿ ನಲಿದರು.
ಅವರ ಮಕ್ಕಳು ನಾವು ; ನಮ್ಮನು ಕರುಣೆಯಿಂದಲಿ ಪಾಲಿಸು,
ನಮ್ಮ ಹೆದರಿಕೆಯೋಡಿಸು,
ಸೌಮ್ಯ ರೂಪವ ತೋರಿಸು."

೪

ನಾನಿಂತು ಕೈಮುಗಿದು ಹೊಗಳೆ,
ಕಣ್ಮುಚ್ಚಿ ಹೊಗಳುತಿರೆ ಮಗುಳೆ,
ಸಿಡಿಲ ಪರಿಯಬ್ಬರವು ಜಗುಳೆ,
ಗುಡುಗುದನಿಯನುಕರಿಸುವಂತು
ಮಾಕಾಳಿ ನುಡಿದಳಿಂತುಃ

೫

"ಹೆದರಬೇಡಿರಿ ; ಘೋರರೂಪವನು ತೋರಿಸೆನು.
ಈ ಫಿರಂಗಿಯ ಗುಂಡ ಸಿಡಿಸೆನಿಲ್ಲಿ.
ಪಡುವದಿಕ್ಕಿಗೆ ನಡೆದು ಕಡಲ ತೆರೆಗಳನೊಡೆದು,
ನಡುಗಿಸುತ ಲೋಕಗಳ, ಕುಣಿವೆನಲ್ಲಿ.
ಪಡುವನಾಡಿನ ಜನರ ಕಡೆಗಾಣದಸ್ತ್ರಗಳ
ಹಿಡಿದು ಮೈಗುಡಿಗಟ್ಟಿ ಕುಣಿವೆನಲ್ಲಿ.
ಕಡುಮುದದಿ ಕುಣಿಕುಣಿದು ತಣಿವೆನಲ್ಲಿ.

ಕೆಂಡವನು ಕಾರುವ ಫಿರಂಗಿಗಳ ಗುಂಡುಗಳು
    ಗುಂಡಿಗೆಯನೊಡೆಯುವುವೆ ? ಪಡುವಣವರು
ಕೊಂಡುಹೋಗಲಿ. ನಿಮಗೆ ತಕ್ಕುದಲ್ಲದು, ಪಾಪ !
    ಮಕ್ಕಳಿರ, ನೀವೆ ಮೃದುಹೃದಯದವರು !
ಮೆಚ್ಚಿದೆನು, ಮೆಚ್ಚಿದೆನು, ಹೆಚ್ಚಿ ಬರುವೀ ನಿಮ್ಮ
    ಧೈರ್ಯದುಬ್ಬರವ ನೋಡಿ !
ಮೆಚ್ಚನೀವೆನು ನಿಮಗೆ ಸಿಡಿವೀ ಚಟಾಕಿಯನು ;
    ಹಿಡಿಯಿರಿದ ಕೈಯ ನೀಡಿ !
ಕಾರದಿದು ಕಿಡಿಗಳನು, ತೋರದಾರ್ಭಟಗಳನು ;
    ಹಾರುವುದು ಬಣ್ಣಗೂಡಿ.
ಮೀರಿದುತ್ಸಾಹದಲಿ ಸುಡಿರೀ ಚಟಾಕಿಯನು ;
    ಸುಡುತಾಡಿ, ಮೋದಗೂಡಿ !
    ಹಿಡಿಯಿರಿದ ಕೈಯ ನೀಡಿ !”

೬

ಹರಿಯಿತು ಹರ್ಷದ ಹೊನಲದು ದೇಶದಿ ಹಬ್ಬವು ಹತ್ತಿರ ಬರುತಿರಲು,
ಹರಡುತ ಕಾಳಿಯ ವರದಾ ವಾರ್ತೆಯ ದೀಪಾವಳಿಯದು ಬರುತಿರಲು,
ಹೊರಲಾರದೆ, ಸಾಹಸದಿ ಚಟಾಕಿಯ ಹೊರೆಗಳ ಮೆಲ್ಲನೆ ತರುತಿರಲು,
ಸಿಡಿವ ಚಟಾಕಿಯು ತರುತಿರಲು.





ಹುಡುಗರು ನಲಿಯುತ ಕುಣಿಕುಣಿದಾಡುತ ಹಿಡಿದು
ಚಟಾಕಿಯ ಸುಡುತಿಹರು.
ಸಿಡಿದು ಚಟಾಕಿಯು ಮೇಲಕೆ ಹಾರಲು ನಿಲ್ಲದೆ ಚಪ್ಪಳೆ
ತಟ್ಟುವರು.
ಸಡಗರಗೊಳ್ಳುತ ದೂರದಿ ನೋಡುತ ಲಲನೆಯರೆಲ್ಲರು
ನಗುತಿಹರು,
ಸಿಡಿಯೆ ಚಟಾಕಿಯು ನಗುತಿಹರು.
ಮುದ್ದಿನ ದೇವಿಯ ಮುದ್ದಿನ ಮಕ್ಕಳು ಗದ್ದಲ
ಮಾಡುತ ಬರುತಿಹರು,
ಮುದ್ದಿನ ಮಕ್ಕಳ ನಿದ್ದೆಯನೋಡಿಸಿ ನಗಿಸುತ ಕುಣಿಸುತ
ಬರುತಿಹರು,
ಚಟಪಟಗುಟ್ಟಿ ಚಟಾಕಿಯು ಮುಂಗಡೆ ಠೀವಿಯ ತೋರುತ
ಬರುತಿರಲು.
ಪೆಟ್ಟಿಗೆ ಚಟ್ಟನೆ ಸಿಡಿವ ಪಟಾಸಿನ ಬಳಗವು
ಹಿಂಬಾಲಿಸುತಿರಲು,
ಅರಳನು ಹುರಿಯುವ ಪರಿಯಲಿ ಮೊರೆಯುತ ಬಲು
ಚಿನುಕುರಳಿಗಳೈತರಲು
ಸರಸರಸರಸರ ಶಬ್ದದಿ ಮೊರೆಯುತ ತಿರುಗುವ
ಬಾಣಗಳೈತರಲು,
ಬೆಳಕನು ಬೀರಿ ಮತಾಪಿನ ಸಾಲ್ಗಳು ಪಂಜನು ಹಿಡಿಯುತ
ಬರುತಿರಲು,
ಹೊಳೆಯುವ ಹೂಗಳ ಮಳೆಯನು ಸುರಿಸುತ ಹೂವಿನ
ಬಾಣಗಳೈತರಲು,

ಒಡೆಯ ಚಟಾಕಿಯು ಬರುತಿರಲು,
ಕಡು ಹಿತದಿಂದಲಿ ಬರುತಿರಲು ;
ಹರಿಯಿತು ಹರ್ಷದ ಹೊನಲು ಚಟಾಕಿಯ ವೊಳಗದು
ಹತ್ತಿರ ಬರುತಿರಲು,
ದೀಪಾವಳಿಯದು ಬರುತಿರಲು.

೭

ಅಪ್ಪನ ಜೇಬಿನ ದುಡ್ಡುಗಳೆಲ್ಲ
ಚಟಪಟಗುಟ್ಟುತ ಸಿಡಿಯುವುವು,
ಹಾರುತ ಬುಸುಬುಸುಗುಟ್ಟುವುವು,
ಉರಿಯನು ಸುರಿಸುತ ವೊರೆಯುವುವು,
ಸರಸರನೆಲ್ಲೆಡೆ ಹರಿಯುವುವು.
ಒಪ್ಪದ ನೀತಿಯ ಮಾತುಗಳೆಲ್ಲ
ತಟ್ಟನೆ ದಾರಿಯ ಹಿಡಿಯುವುವು.

ಪ್ರಾಣ ಪುಷ್ಪ

—ಕಾವ್ಯಾನಂದ

ಭಾರತ ನವೋದಯದಿ ಅರಳಿರುವ ಹೂ ನಾನು
ಹಣ್ಣಾಗಿ ಮೆರೆಯುವೆನು ಉರಿವ ಬಿಸಿಲಲ್ಲಿ !
ಬಾಡುವೆನೆ, ಬತ್ತುವೆನೆ, ಪ್ರಾಣಪುಷ್ಪವು ನಾನು ?
ಬರಲಿ ಬರ ಹಸಿವೆಗಳ ಸುಡುವ ಉಸಿರಲ್ಲಿ !
ಋಷಿವರರ ಉಸಿರೆನಗೆ ಮಲಯಜವು, ಬಾಪುವಿನ
ಆತ್ಮಸಂಪದ ನೆರಳು ವಲ್ಲಭನ ಕೆಚ್ಚು
ಕವಚಕುಂಡಲ ನನಗೆ ! ಭಯವೇಕೆ ? ಬಾ ಬಾರ
ಹೊಟ್ಟೆಬಟ್ಟೆಯ ಕೊರತೆ ಬಡತನದ ಕೆಚ್ಚು !
ಉರಿಬರಲಿ ಸಿರಿಬರಲಿ ಪರಿಮಳವ ಬೀರುವೆನು !
ಕೇಶಗಳ ಜ್ವಾಲೆಯಲೆ ಹಣ್ಣಾಗಿ ತೋರುವೆನು !
ಸಾವಿನ ಸಮಕ್ಷಮದಿ ಜೀವಿಸಿಯೆ ತೀರುವೆನು !
ಜಯವು ಭಾರತ ನಿನಗೆ ಎಂದೆ ಕೋರುವೆನು !
ಸ್ವಸ್ಥಾನದಲಿ ನಿಂತು ಸ್ವೀಯ ಧರ್ಮದಿ ನಡೆದು
ಸರ್ವರಿಗೆ ಹಿತಕಾರಿಯಾಗಿ ಬಾಳುವೆನು.
ಸಾವು ಬಂದರು ಸಹಿತ ಭರತ ಭೂಮಿಯ ಕೂಡಿ
ಮತ್ತೊಂದು ಸಸಿಗಾಗಿ ಗೊಬ್ಬರಾಗುವೆನು !

ನಿದ್ದೆ

—ಬಿ. ಎ. ಸನದಿ

ಯಾರರೆ ಬಲ್ಲರೆ ಏನಿಹುದೆಂದು
ನಿದ್ದೆಯು ಒಡಲೊಳಗೆ ?
ನಿದ್ದೆಯು ಗೈದರೆ ಮುಳುಗೆದ್ದಂತೆಯೆ
ಶಾಂತಿಯು ಕಡಲೊಳಗೆ !

ಹಗಲಿಡಿ ದುಡಿದು ಮೈಮನ ದಣಿದು
ಬೇಸರ ಬಂದಿರಲು
ನಿದ್ದೆಯೆ ಮದ್ದಾಗಿರುವುದು ಅದಕೆ
ಆಸರಕಿರೆ ಇರುಳು !

ಚಿಂತೆಯ ಕತ್ತಲೆ ಮುತ್ತಿದ ಮನವನು
ಬೆಳಗಿಸುವುದು ನಿದ್ದೆ
ಬಾಳಿನ ಕಹಿಯನು ಮರೆಸುವುದೀ ಸವಿ
ಬೆಲ್ಲದ ಬಿಸಿ ಮುದ್ದೆ !

ನಿದ್ದೆಯ ಮಾಡಿ ಬೆಳಗಿನೊಳೆದ್ದರೆ
ಮೈಯೊಳು ಹೊಸತನವು
ತುಂಬಿರುವುದು ಹೊಸ ಕೆಲಸವ ಮಾಡಲು
ದೊರೆವುದು ಚೇತನವು !

ನಿದ್ದೆಯು ಸೊಗಸಾಗಿದ್ದರು, ಸಲ್ಲದು
ಹೆಚ್ಚಿಗೆ ಬಾಳಿನಲಿ !
ಬಹಳೇ ನಿದ್ದೆಯ ಗೈವರ ಬಾಳುವೆ
ನವೆವುದು ಗೋಳಿನಲಿ !!

ತೆಂಕಣ ಗಾಳಿಯಾಟ

—ಕವಿಶಿಷ್ಯ
(ಪಂಜೆ ಮಂಗೇಶ ರಾವ್)

ಬರಲಿದೆ! ಅಹಹಾ! ದೂರದಿ ಬರಲಿದೆ—
ಬುಸುಬುಸುಗುಟ್ಟುವ ಪಾತಾಳದ ಹಾವೊ ?
ಹಸಿವಿನ ಭೂತವು ಕೂಯುವ ಕೂವೊ ?
ಹೊಸತಿದು ಕಾಲನ ಕೋಣನ–ಓವೊ !
ಉಸಿರಿನ ಸುಯ್ಯೋ ? – ಸೂಸೂಕರಿಸುತ,
ಬರುವುದು ಬರಬರ ಭರದಲಿ ಬರುವುದು—

ಬೊಬ್ಬೆಯ ಹಬ್ಬಿಸಿ, ಒಂದೇ ಬಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ,
ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ,
ಅಬ್ಬರದಲಿ ಭೋರ್‌ಭೋರೆನೆ ಗುಮ್ಮಿಸಿ,
ಬರುತದೆ! ಮೈತೋರದೆ ಬರುತದೆ ಅದೆ—

ನಡು ಮುರಿಯುತ ನಗನಾವೆಗೆ, ಕೂವೆಗೆ
ಉಡಿಸಿದ ಹಾಯಿಯ ಹರಿಯುತ ಬಿರಿಯುತ,
ಹಡಗನು ಕೀಲಿಸಿ, ತುಮುರನು ತೇಲಿಸಿ,





ದಡದಲಿ ಝಾಡಿಸಿ, ದೋಣಿಯನಾಡಿಸಿ,
ಇದೆ! ಇದೆ! ಬರುತಿದೆ! ಇದೆ! ಇದೆ! ಬರುತಿದೆ—

ಹಕ್ಕಿಯ ಕಣ್ಣಿಗೆ ಧೂಳಿನ ಕಾಡಿಗೆ
ಇಕ್ಕುತ, ಹೊಲದೆತ್ತಿಗೆ ದನ ಕಾಡಿಗೆ
ಫಕ್ಕನೆ ಹಟ್ಟಿಗೆ ಅಟ್ಟಿಸಿ, ಕಾಡಿಗೆ
ಸಿಕ್ಕಿದ ಕಿಚ್ಚನು ಊದಲು ಹಾರುತ,
ಬರುತಿದೆ ! ಇದೆ ! ಇದೆ ! ಇದೆ ! ಇದೆ ! ಬರುತಿದೆ—

ಸಡಿಲಿಸಿ ಮಡದಿಯರುಡಿಯನು ಮುಡಿಯನು,
ಬಡ ಮುದುಕರ ಕೊಡೆಗರಿ ಹರಿದಾಡಿಸಿ,
ಹುಡುಗರ ತಲೆ ತಲೆ ಟೊಪ್ಪಿಯ ಆಟವ
ದಡಬಡನಾಡಿಸಿ, ಮನೆ ಮನೆ ತೋಟವ
ಅಡಿಮೇಲಾಗಿಸಿ, ತೆಂಗನು ಲಾಗಿಸಿ,
ಅಡಕೆಯ ಬಾಗಿಸಿ, ಪನೆ ಇಬ್ಭಾಗಿಸಿ,
ಬುಡದೂಟಾಡಿಸಿ, ತಲೆ ತಾಟಾಡಿಸಿ,
ಗುಡಿಸಲ ಮಾಡನು ಹುಲುಹುಲು ಮಾಡಿಸಿ,
ಬಂತೈ ! ಬಂತೈ ! ಇದೆ ! ಇದೆ ! ಬಂತೈ—

ಗಿಡಗಿಡದಿಂ–ಚೆಲುಗೊಂಚಲು ಮಿಂಚಲು–
ಮಿಡಿಯನು ಹಣ್ಣನು, ಉದುರಿಸಿ ಕೆದರಿಸಿ,
ಎಡದಲಿ ಬಲದಲಿ ಕೆಲದಲಿ ನೆಲದಲಿ,
ಪಡುವಣ ಮೋಡವ ಬೆಟ್ಟಕ್ಕೆ ಗಟ್ಟಕೆ
ಹೊಡೆದಟ್ಟುತ, ಕೋಲ್ ಮಿಂಚನು ಮಿರುಗಿಸಿ,

ಗುಡುಗನು ಗುಡುಗಿಸಿ, ನೆಲವನು ನಡುಗಿಸಿ,
ಸಿಡಿಲನು ತಾಳೆಗೆ ಬಾಳೆಗೆ ಎರಗಿಸಿ,
ಜಡಿಮಳೆ ಸುರಿವೋಲ್, ಬಿರುಮಳೆ ಬರುವೋಲ್,
ಕುಡಿ ನೀರನು ಒಣಗಿದ ನೆಲಕೆರೆವೋಲ್
ಬಂತೈ ಬೀಸುತ! ಬೀಸುತ ಬಂತೈ!
ತೆಂಕಣ ಗಾಳಿಯು ಕೊಂಕಣ ಸೀಮೆಗೆ
ಬಂತೈ! ಬಂತೈ! ಬಂತೈ! ಬಂತೈ!

ದಾದಿ ರನ್ನೆ

—ರಾಘವ

ಕೆಂಪು ತಿರುಗಲು ಪಡುದೆಸೆಯು ಮೊಗ
ಹಕ್ಕಿಗಳು ಹಾರಿದುವು ಹಾಡುತ,
ಸಂಜೆಗೆಂಪಿನ ಸೊಬಗ ಸಾರುತ
ದಿಕ್ಕು ದಿಕ್ಕಿನಲಿ;

ಚೆಲ್ಲಿದಾರತಿಯಲ್ಲಿ ಹುದುಗಿದ
ಮುತ್ತುಗಳೊ ಎನೆ ಮಿನುಗೆ ತಾರೆಗ-
ಳತ್ತ ಬಾನೊಳು ಮೇಲೆ ಚಂದಿರ
ಮೂಡಿ ಬೆಳಗಿದನು.

ಇಂತು ಸಂಜೆಯು ಸೊಗಸ ಸೂಸಲು,
ಉದಯಸಿಂಹನು ತನ್ನ ಗೆಳೆಯನ
ಜೊತೆಯೊಳಿದ್ದನು ಆಟವಾಡುತ
ಮಾಳಿಗೆಯ ಮೇಲೆ.—

ಉದಯಸಿಂಹನು ರಾಜನಾದನು ;
ಮರದ ಕುದುರೆಯನೊಂದನೇರಿ,
ಕರೆದು ಗೆಳೆಯನ,–"ಕೇಳು, ಭಾಳ,
ನಾನು ರಾಜನು; ನೀನು ಮಂತ್ರಿ;
ಇಂದು ಚಂದಿರನನ್ನು ಗೆಲ್ಲುವ,
ಸೈನ್ಯವನು ಅಣಿಮಾಡು ಯುದ್ಧಕೆ"
ಎಂದು ಆಣತಿಯಿತ್ತನು.

ಭಾಳ ಮುಂಗಡೆ ಬಂದು, ನಮಿಸುತ,
"ಸೈನ್ಯವೇತಕೆ ? ಕೇಳಿ ರಾಜರೆ :
ನಿಮ್ಮ ಕುದುರೆಯ ನನಗೆ ಕೊಟ್ಟರೆ
ಏರಿ ಕುದುರೆಯ, ಹಾರಿ ಹಿಡಿವೆನು
ಚಂದಿರನ, ನೋಡಿ"

ಎಂದು ನುಡಿದನು. –ಇವರ ಆಟವ
ನೋಡುತಲ್ಲಿಯೆ ಪನ್ನೆಯಿದ್ದಳು :
ಸ್ವಲ್ಪ ಎತ್ತರ ತೆರನ ಹೆಂಗಸು :
ರಾಜಪುತ್ರರ ವೀರ ರಕ್ತದ
ಕೆಂಪು ಛಾಯೆಯು ಅವಳ ಮೊಗದಲಿ
ಹೆಚ್ಚಿ ಹೊಳೆಯಿತು ಸಂಜೆಗೆಂಪನು
ತಳೆದು ಹೊಗರೇರಿ.

ಬಾಲಕೇಳಿಯ ನೋಡಿ ಹಿಗ್ಗುತ
ಹರುಷಗಡಲೊಳು ಮುಳುಗಿ ಹೋದಳು;–
"ದೈವಕೃಪೆಯಿರೆ ಮುಂದೆಯೂ ಒಡ–
ಗೂಡಿ ಬಾಳಿರಿ ಸುಖದಲಿ.

ಉದಯಸಿಂಹನು ರಾಜಪದವಿಯ—
ಲಿರಲು ಎನ್ನಯ ಪುತ್ರನವನನು
ಸೇವಿಪುದ ನಾನೆಂದು ನೋಳ್ಪೆನೊ !"
ಎಂದು ಹಂಬಲಿಸಿದಳು ಮನದಲ್ಲಿ.

ಉದಯಸಿಂಹನನೊಮ್ಮೆ ನೋಡುತ—
"ಹಿಂದೆ ನಿನ್ನಯ ಮಾತೆ ಕರ್ಣಾ–
ವತಿಯು ನಿನ್ನನು ನನಗೆ ಒಪ್ಪಿಸಿ
'ನನ್ನ ಪನ್ನೆಯೆ, ದಾದಿ ರನ್ನೆಯೆ,
ನಿನ್ನ ಮಗನೊಡನೆನ್ನ ಮಗನನು
ಸಲಹು ಕರುಣದಲಿ.

ಬೇರೆ ದೈವವೆ ಪತಿಯನುಳಿದು?
ಆರು ಗತಿಯೆನಗಿನ್ನು ಮುಂದೆ?
ವೈರಿಗಳ ಹಂಗಿನಲಿ ಬಾಳ್ವೆನೆ?
ಸೇರುವೆನು ಸಗ್ಗದಲಿ ಪತಿಯನು'
ಎಂದು ದುಮುಕಿದಳಗ್ನಿಗೆ.

ನಿನ್ನ ಸಾಕಿದೆನಂದಿನಿಂದ,
ನಿನ್ನ ಹಿತವನೆ ಕೋರುತಿರುವೆನು;
ನಿನ್ನನುಳಿದೆನಗೆನ್ನ ಪುತ್ರನೆ?
ನೀನೆ ಹಿರಿ ಮಗನು.

ಜಗವ ಕಾವನೆ ನಿನ್ನ ಕಾವನು,
ಜಗದೊಡೆಯನನೆ ನಂಬಿಕೊಂಡಿಹೆ"
ಎಂದು ಮನದಲಿ ದೇವನನು ಕೈ–
ಮುಗಿದು ಬೇಡಿದಳು.

ಬಾಲಚಂದ್ರನ ಕಾಂತಿಯೊಡನೆಯೆ
ಬಾಲಕೇಳಿಯು ಹೆಚ್ಚಿ ಮೆರೆಯಿತು;
ಪನ್ನೆಗೊಮ್ಮೆಯೆ ಹರುಷವುಕ್ಕಿತು,
ಉಕ್ಕಿ ಹೊನಲಾಯ್ತು:
ಕ್ಷಣದಿ ಓಡುತ ತಬ್ಬಿಕೊಂಡಳು
ಜೊತೆಯ ಬಾಲರನೊಂದೆ ತಬ್ಬಿಗೆ,
ಕೊನೆಗೆ ಹರುಷಾರಣ್ಯದಲಿ ತಾ
ಹೊಲಬು ತಪ್ಪಿದಳು.

ಮುಗಿಲು ಮುಸುಕಿತು ಚಂದ್ರಬಿಂಬವ;
ಕ್ಷಣದಿ ಕಾವಳ ಕವಿಯಿತೆಲ್ಲೆಡೆ:
ತಾರೆಯುದುರಿತು, ನೆಲವೆ ಅದುರಿತು:
ಪನ್ನೆ ಎಚ್ಚತ್ತೆದ್ದು ಬೆಚ್ಚಿದಳು !

"ಪನ್ನೆ, ಎಲ್ಲಿಹೆ? ಪನ್ನೆ, ಪನ್ನೇ!
ಏಳು, ಜಾಗ್ರತೆ, ಜೋಕೆ, ತುಸು ಬಾ !"
ಎಂದು ಕಳವಳದಿಂದ ನುಡಿದನು
ರಾಜಸೇವಕನೊಬ್ಬನು.

"ಉದಯಸಿಂಹ, ಭಾಳನೊಡನಿರು"
ಎಂದು ಹೇಳುತ ತನ್ನ ತಮ್ಮನ
ಬಳಿಯನೈದುತ–"ಏಕೆ ಕಳವಳ?
ಹೇಳು, ಹದನೇನಿಂದು ಅಜಿತ?"
–ಪನ್ನೆ ಕೇಳಿದಳು.

"ಅಯ್ಯೊ ! ಹಾ, ಹಾ ! ಏನು ಹೇಳಲಿ ?
ಉದಯಸಿಂಹನನೆಂತು ಕಾವುದು ?
ಖೂಳನಾ ಬನಬೀರ ಬರುವನು-
ರಾಜಕುವರನ ಕೊಲೆಗೆ ಬರುವನು—
ಮುಂದೆ ಗತಿ ಏನು ?"
ಎಂದು ನುಡಿದನು ನುಡಿಯಲಾರದೆ,
ನಿಂತೆಡೆಯೆ ಕದಲದೆಯೆ ನಿಂತನು
ಮೌನಶೋಕದಲಿ.

ನುಡಿಯು ಕೇಳುತ ಬೆಚ್ಚಿದಳು, ಬಲು
ಬೆದರಿದಳು, ಭಯಭ್ರಾಂತಳಾದಳು ;
ತಿಳಿದು ತನ್ನೊಳು ತಾನು, ಮುಂದನು
ಚಿಂತಿಸುತ, ಮನದಂದು ನುಡಿದಳು
ಧಾತ್ರಿ ಧೃತಿವಂತೆ.


"ಅಜಿತ, ಕಾಲವ ಕಳೆಯಲಾಗದು.
ಬುಟ್ಟಿತುಂಬ ಹಣ್ಣು ಹಂಪಲ
ಕೊಂಡು ಜವದಿಂದೋಡಿಬಾರೈ"
ಎಂದು ಬೆಸಸಿದಳು.

ಬರಿದೆ ನುಡಿಯುತ ಕಾಲ ಕಳೆಯದೆ
ಅಜಿತ ಹೊರಟನು : ಇತ್ತ ಪನ್ನೆ
ಉದಯಸಿಂಹನ ಬಳಿಯ ಸಾರುತ,
"ಮುದ್ದು ಕುವರನೆ, ಬಾರ ಬಾ ಬಾ"
ಎಂದು ಎತ್ತಿದಳಪ್ಪುತ.

“ಬೆಳ್ಳಿ ಹೊಳೆಯಲಿ ಹೊನ್ನ ಮೀನು :
ನೀಲಿ ಬಾನೊಳು ತೊಳಗಿ ಬೆಳಗುವ,
ಪುಟ್ಟ ರೆಕ್ಕೆಯ ಬಡಿದು ಹಾರುವ,
ಹಾರಿ ಏರುವ ಮಕ್ಕಳು ;
ಕೆಂಪು ಹೂಗಳು ಪಚ್ಚೆಗಿಡದಲಿ ;
ಮಿಂಚುಹೊಳಪಿನ ಹಣ್ಣುಗೊಂಚಲು ;
ಹೂವ ಬಳಸಿಹ ಹೊನ್ನ ಚಿಟ್ಟೆ ;
ಹಣ್ಣ ಸುತ್ತಲು ಹಾರಿ ನಲಿಯುವ,
ನಲಿಯುತುಲಿಯುವ ಬಣ್ಣಹಕ್ಕಿ :
ಇವನು ನೋಡಿಹೆಯ ?

ಇವುಗಳಲ್ಲದೆ, ನವಿಲು ಕೋಗಿಲೆ
ಹಂಸೆ ಗಿಳಿ ಗೊರವಂಕ ಹೊರಸು
ಜಿಂಕೆ ಮೊಲ ಸಾರಂಗ ಮಂಗ
ತುಂಬಿರುವ ತೋಟವನು ನೋಡುವೆ,
ಕಕ್ಕ ಬರಲಾಮೇಲಿ ಹೋಗುವೆ”
ಎಂದು ಉದಯನ ಮನದೊಳಾಸೆಯ
ಬಿತ್ತಿ ಬೆಳಸಿದಳು.

ಉದಯ ಹಿಗ್ಗುತಲಿರಲು, ಅಜಿತನು
ಹಣ್ಣುಬುಟ್ಟಿಯ ಹೊತ್ತು ತಂದನು ;
ಪನ್ನೆಯನು ಕೈಸನ್ನೆ ಮಾಡುತ
ಬಳಿಗೆ ಬರೆ ಕರೆದ.





ರಾಜಕುವರನನೆತ್ತಿಕೊಂಡೇ
ಪನ್ನೆ ತಮ್ಮನ ಬಳಿಯು ಸೇರಲು,
"ಅಮ್ಮ ಹೋಗುವೆ ಎಲ್ಲಿ"ಗೆನ್ನುತ
ಭಾಳ ಬೆಂಬಿಡಿದ.

ರಾಜಕುವರನನಿಳಿಸಿ ಪನ್ನೆ
ತನ್ನ ಕುವರನನೆತ್ತಿಕೊಂಡಳು :
"ಭಾಳ, ನಿನ್ನನು ಬಿಟ್ಟು ಎಲ್ಲಿಗೆ
ನಾನು ಹೋಗುವೆ, ಕಾಣೆಯ ?

ಹಣ್ಣುಗಳ ಜೊತೆಯಲ್ಲಿ ಉದಯನು
ಗುಡಿಗೆ ಹೋಗುವನವನು ಮರಳಿ
ಬರುವವರೆಗೂ ನೀನೆ ರಾಜ :
ಅವನ ಕುದುರೆಯ ನೀನೆ ಏರುವೆ"
ಎಂದು ಕಿವಿಯಲ್ಲೊರೆದಳು.

"ಎಲ್ಲವೂ ಸುಳ್ಳೆಲ್ಲ ಸುಳ್ಳು ;
ಉದಯನೊಡನೆಯೆ ನಾನು ಹೋಗುವೆ ;
ಅವನ ಬಿಟ್ಟೊಂಟಿಯಲಿ ನಾಸರೆ-
ಗಳಿಗೆ ಇರಲಾರೆ"-
ಎಂದ ಮಾತನು ಪನ್ನೆ ಕೇಳುತ,
"ರಾಜಪುತ್ರನೆ ನೀನು ನಿಜದಲಿ,
ಇಂದಿನಿರುಳಲಿ ಅದನು ಮೆರೆಯುವೆ"
ಎಂದು ಪುತ್ರನ ನೋಡಿ, ತಣಿಯುತ
ಹರುಷಗೊಂಡಳು ಮನದಲಿ,

ಪನ್ನೆ ಬುಟ್ಟಿಯ ಹಣ್ಣ ಸುರಿದಳು :
ಭಾಳಗೆರಡನು ಕೊಡಲವನು "ಹೋ !"
ಎಂದು ಕುಣಿಯುತ, ದೂರಕೋಡುತ,
ಕಚ್ಚಿ ತಿನ್ನುತಲಿದ್ದನು.

ಪನ್ನೆ ಉದಯನ ಕರೆದು ಮುದ್ದಿಸಿ,
ಅವನುಡುಗೆತೊಡುಗೆಗಳ ಕಳಚಿ,
ಬಳಿಕ ಬುಟ್ಟಿಯಲವನ ಕೂರಿಸಿ
ತಲೆಯ ನೇವರಿಸಿ-

"ಬುಟ್ಟಿಪಲ್ಲಕ್ಕಿಯೊಳು ಕುಳಿತಿಹ
ಪುಟ್ಟ ರಾಜರ, ಕಾಣದಂತೆಯೆ,
ಚಂದ್ರಲೋಕದ ವನಕೆ ತಳುವದೆ
ಒಯ್ಯಬೇಕಜಿತಾ"

ಎಂದು ಬುಟ್ಟಿಯ ಮೇಲೆ ಮುಚ್ಚಲು,
ಉದಯನೊಳಗಡೆ ನಗುತಲಿದ್ದನು.
ಅಜಿತ ತ್ಯಾಗದ ಫಲದ ಭಾರವ
ಹೊತ್ತು ಹೊರಹೊರಟ.

ಇತ್ತ ಪನ್ನೆಯು ಮಗನ ಕರೆಯುತ-
"ಇಂದು ನೀನೇ ಉದಯ, ಬಾ ಬಾ !
ಇಂದು ನೀನೇ ರಾಜ, ಬಾ ಬಾ!
ರಾಜಪುತ್ರನ ಹಡೆದ ನನ್ನಯ
ಪುಣ್ಯವೇ ಪುಣ್ಯ !"

ಎಂದು ಉದಯುನ ಉಡುಗೆತೊಡುಗೆಯು
ತನ್ನ ಮಗನಿಗೆ ತೊಡಿಸಿ, ಮುದ್ದಿಸಿ,
'ಕಂದ, ಮಲಗುವ ಹೊತ್ತು ಆಯಿತು'
ಎಂದು ಮಗನೊಡನವಳು ಉದಯುನ
ಮಲಗುಕೋಣೆಗೆ ಹೋದಳು.

ರಾಜಕುವರನ ಮಲಗುವಾಸೊಳು
ತನ್ನ ಮಗನನು ಹೊದಿಸಿ ಮಲಗಿಸಿ,
ತನ್ನ ಮಗನಾ ಬರಿಯ ಹಾಸೊಳು
ಅಡಕಿದಳು ಬರಿ ಬಟ್ಟೆಯ;
ಅದರ ಮೇಗಡೆ ಅವನ ಹಚ್ಚಡ
ಹೊದಿಸಿ ತನ್ನಯ ಮಗನೆ ಮಲಗಿರು–
ವಂತೆ ತೋರಿದಳು.

ಇತ್ತ ಭಾಳಸು ಮಲಗಿಕೊಂಡಿರೆ
ಪನ್ನೆ ಸಾರುತಲವನ ಬಳಿಯನು,
ಪಿಡಿದವನ ಗಲ್ಲವನು, ಕುರುಳನು
ತಿದ್ದಿ, ಮುದ್ದಿಡುತ–
"ರಾಜಪುತ್ರನೆ ನೀನು, ಅಲ್ಲವೆ ?
ರಾಜಪುತ್ರನ ಪರಿಯ ತೋರುವೆ;
ವೀರರಕ್ತದ ಪೆರ್ಮೆ ಮೆರೆಯುವೆ"
ಎಂದು ಹಿಗ್ಗಿಯೆ ನುಡಿದಳು.

ಉರಿವ ದೀಪದ ಬತ್ತಿಯಿಳಿಸುತ,
ಹಾಡಿ ಜೋಗುಳವನ್ನು ಮಗನನು
ನಿದ್ದೆವೋಗಿಸಿ, ಮುಸುಕನೆಳೆದಳು
ಆವನ ಮೈತುಂಬ;
ಮತ್ತೆ ಕುವರನ ಕರವ ಪಿಡಿಯುತ,
"ಕಂದ, ಸೊಗ ನಿದ್ದೆಯನು ಪಡೆಯೈ;
ನಿನ್ನ ನಿದ್ದೆಯೆ ನಿನ್ನನೆಂದಿಗು
ರಾಜಪುತ್ರನ ಮಾಳ್ಪುದೆ"ನ್ನುತ
ಮನದಿ ತೃಪ್ತಿಯ ತಳೆದಳು.

ಹೊತ್ತು ಮೀರುತ ಬಂದಿತಾಗಃ
ಎತ್ತಲೆತ್ತಲು ಶಾಂತಿ ತುಂಬಿರೆ,
ಎತ್ತಲಿಂದಲೋ ಗೂಗೆ "ಗೂ ಗೂ"
ಎನುವ ದನಿ ಕೇಳೆ,

"ಹರಿ ಹರೀ ನಾರಾಯಣೆ"ನ್ನುತ
ಪನ್ನೆ ಕಿವಿಯನು ಮುಚ್ಚಿ ಕುಳಿತಳು—
ಎದೆಯು ತಟ್ಟನೆ ತುಡಿತುಡಿದುಕೊಳೆ
ತಡೆದಳಾ ತುಡಿತ.

ಏನು ಕಲ್ಮನ ಏನು ಕೆಚ್ಚದು!
ಹಡೆದು ಸಲಹಿದ ಮುದ್ದು ಕುವರನ
ಸಾವ ಬಾಯೊಳಗೋವಿ ನೂಕಲು
ಎಂತು ಕಾದಿಹಳು!

ತಮ್ಮ ಹರಣವ ಕೊಡುವರುಂಟು-
ಓವಿ ಸಾಕಿದ ಗಿಣಿಯು ಕೊಲ್ವರೆ ?

ತಮ್ಮ ಕಣ್ಣನೆ ಕಿತ್ತು ಕೊಡುವರೆ?
ಏನಿದಚ್ಚರಿಯು!

ಇರಲಿರಲು ಹೆಗ್ಗಾಳಿ ಬಿರ್ರನೆ
ಬೀಸಿ ನುಗ್ಗಿತು; ಕೆಡಿಸಿ ದೀಪವ,
ಭೋರುಭೋರೆಂದಳುತ ಶಾಂತಿಯ
ಸೀಳಿ ಬೀಸುತಿರೆ–

ಅವಳ ಕಲ್ಮನ ಕರಗಿಹೋಯಿತು:
ಆದೊಡೇಂ, ಕಂಬನಿಯ ಕರೆಯುಳು:
ಜವನ ಬರವ ನಿರೀಕ್ಷಿಸುತ ಆ
ಧೀರೆ ಕುಳಿತಿಹಳು.

ಎಲ್ಲೊ ಬಾಗಿಲು ತೆರೆದ ಕಿರಕಿರ;
ಹೆಜ್ಜೆ ಹಾಕಿದ ಹಗುರ ಸಪ್ಪುಳ:
ಯಾರು ಸರಿಹೊತ್ತಿನಲಿ ಪನ್ನೆಯ
ಮನೆಗೆ ಬರುವವರು?

ಯಾರು, ಮತ್ತಾರಲ್ಲದೆಯೆ ಜವ!
ಹಸುಳೆಗೊಲೆಗಳ್ಳುಕದೆಯೆ, ಹೇಸದೆ,
ಬಂದನಾ ಬನಬೀರನು.

ಬಂದವನೆ ಕತ್ತಿಯನು ಹಿರಿಯುತ,
"ಪನ್ನೆ, ಹೇಳ್, ಎಲ್ಲಿಹನು ಉದಯ
ಅವನ ತೋರಿಲ್ಲದೊಡೆ ಭಾಳನ
ಬಾಳ ಹತಿಗೊಡ್ಡುವೆನು; ಜಾಗ್ರತೆ!"
ಎಂದು ಬಗುಳಿದನು.

ಪನ್ನೆ ನಿಂತಳು; ಹಿಂದೆ ಸರಿದಳು;
ಒಂದೆ ಹಿಡಿಯಲಿ ಜೀವವಿಡಿಯುತ,
ಕಂದನನು ಕೈನೀಡಿ ತೋರುತ
ಮೊಗವ ತಿರುಹಿದಳು.


ನುಸುಳಿ ಬರುತಿಹ ಜೊನ್ನವೆಳಗೊಳು
ಹಸುಳೆಕೈಯಲಿ ಉದಯಸಿಂಹನ
ಮಿಸುನಿವಜ್ರದ ಕಿರಿಯ ಮುದ್ರಿಕೆ
ಮೆರೆವುದನು ಕಂಡು,

ಕುರಿಯ ಮರಿಯನು ಕಂಡ ತೋಳನು
ಹಾರಿ ಮರಿಯನು ಬಗಿವ ತೆರದಲಿ
ಒಂದೆ ನೆಗತದಲಿರಿದು ಕೊಂದನು
ಕಂದನನು ಬನಬೀರನು.

ತನ್ನ ಕೆಲಸವು ಚಣದಿ ತೀರಿತು:
ಇನ್ನು ಉಳಿದುದು ಏನು, ಖೂಳಗೆ?
ತನ್ನ ಕೆಲಸವ ತಾನೆ ಮೆಚ್ಚುತ
ಹಿಗ್ಗಿದನು ಕುಣಿದು.

ತನ್ನ ಕಂದನ ತೆತ್ತುದಾಯಿತು;
ಇನ್ನು ಉಳಿದುದು ಏನು, ಪನ್ನೆಗೆ?
ರೋದಿಸುವುದೇ!–ಆದರುಸಿರನು
ಹಿಡಿದು ಮೌನದಲಿದ್ದಳು.





ಹಂತಕನ ಎದುರಿನಲಿ ಅಳುವುದೆ?
ದೈನ್ಯವನು ತೋರುವುದೆ ನೀಚನ
ಮುಂದೆ, ಮಗನನೆ ತೆತ್ತು ರಾಜ್ಯದ
ಭಾಗ್ಯದಂಕುರ ಬೆಳೆಯಲು?

ಬಂದಳಲ ಬೆಂದೆದೆಯೊಳಡಗಿಸಿ
ಮುಂದಿನೊಳ್ಳಿತ ನೆನೆದು ಮನದೊಳು,
ಒಂದೆ ಮನದಲಿ ಧೀರ ಮೌನವ
ತಳೆದಳಾ ಧಾತ್ರಿ.

ಪಾಪಪಂಕದ ಲೇಪವೋ ಎನೆ
ರಕ್ತ ಮೆತ್ತಿದ ಕತ್ತಿಯೆತ್ತಿಯೆ
'ಹಾ ಹ! ಹೋ ಹೋ!' ಎಂದು ಕೆಲೆಯುತ
ಖೂಳ ತೊಲಗಿದನು.

ಎಲ್ಲ ಅರಿವೂ ಅಳಿಸಿ, ಕಡೆಯಲಿ
ತಾಯ್ತನದ ಅರಿವೊಂದೆ ಉಳಿಯಿತು:
ಕಟ್ಟೆ ಕೂಡಲೆ ಒಡೆದು ಹೋಯಿತು—
ತಡೆದ ದುಃಖದ ಜಲವು ಉಕ್ಕುತ
ಉರುಳುರುಳಿ ಬರುತಿರಲು ಪನ್ನೆಯು
ಒಡನೆ 'ಅಯ್ಯೋ' ಎಂದು ಚೀರಿದಳು.

ಮಡಿದ ಎಳಗರುವನ್ನು ನೋಡಿದ
ಅವು ಸುಮ್ಮನೆ ಅರಿಚುವಂದದಿ
"ಕಂದ, ಹಾ ಹಾ, ಕಂದ!" ಎನ್ನುತ
ಚೀರಿದಳು ತಾಯಿ.

"ಎನ್ನ ಬಾಳಿನ ಬೆಳಕು ನಂದಿತೆ,
ಎನ್ನ ಕಣ್ಣಿನ ಹಾಹೆ ಸಿಡಿಯಿತೆ,
ಎನ್ನ ನೆತ್ತರು ತಣ್ಣಗಾದುದೆ
ಮಣ್ಣುಗೂಡುತಲಿ!

ಇನ್ನು ಯಾರಿಗೆ ಬದುಕಿರಲಿ, ನಾ—
ನಿನ್ನು ಯಾರನು ಕಂದನೆನ್ನಲಿ?
ಚಿನ್ನ ಭಾಳನು ಹೋದನೇ, ಹಾ!"
ಎಂದು ಕಂದನನಪ್ಪಿಕೊಳ್ಳುತ
ಅವನೊಳೈಕ್ಯವ ಹೊಂದಿದಳೊ ಎನೆ
ಕೆಡೆದಳಾ ತಾಯಿ.

ಚುಕ್ಕಿಗಳು ಮಿಟುಕಿದುವು ಬಾನೊಳು :
ಬಾಲಚಂದಿರನೊಮ್ಮೆ ಕಿಟಕಿಯಿ–
ಣಿಕಿ ನೋಡುತ, ಹದನನರಿಯುತ,
ಮುಗಿಲ ಮರೆಯಲಿ ಮೌನವಾದನು:
ತಿರೆಯು ತಮಮಯವಾಯಿತು.

ಒಯ್ಯನೊಯ್ಯನೆ ತೀಡುತಲ್ಲಿಯೆ
ಸುಯ್ಯೆಲರು ಸುಳಿದಾಡುತಿದ್ದಿತು,
ತಾಯಿ ಮಕ್ಕಳು ಅಲ್ಲಿ ಮಲಗಿರೆ—
ಮಸಣ ಮೌನವು ನೆಲಸಿರೆ.

ಅರಸು ಕುವರಿ

—ಅನುಪಮಾ ನಿರಂಜನ

ಒಂದಾನೊಂದು ಕಾಲದಲ್ಲಿ ಒಂದೂರಿನಲ್ಲಿ ಒಬ್ಬ ರಾಜನಿದ್ದ. ಅವನಿಗೆ ಮೂರು ಜನ ಹೆಣ್ಣುಮಕ್ಕಳಿದ್ದರು. ಒಂದು ದಿನ ಮಕ್ಕಳನ್ನು ಹತ್ತಿರ ಕರೆದು ರಾಜ, "ನೀವು ನನ್ನನ್ನೆಷ್ಟು ಪ್ರೀತಿಸ್ತೀರ ?" ಎಂದು ಕೇಳಿದ. ದೊಡ್ಡವಳು, "ನನ್ನ ಜೀವನವನ್ನು ಪ್ರೀತಿಸುವಷ್ಟು !" ಎಂದಳು. ಎರಡನೆಯುವಳು,"ಈ ಪ್ರಪಂಚದ ಎಲ್ಲ ವಸ್ತುಗಳಿಗಿಂತ ಹೆಚ್ಚಾಗಿ ನಿನ್ನನ್ನು ಪ್ರೀತಿಸ್ತೀನಿ," ಎಂದು ಉತ್ತರಿಸಿದಳು. ಮೂರನೆಯ ಮಗಳು ಮೆಲ್ಲಗೆ ನುಡಿದಳು: "ಉಪ್ಪನ್ನು ಪ್ರೀತಿಸುವಷ್ಟು ನಿನ್ನನ್ನು ಪ್ರೀತಿಸ್ತೇನೆ ಅಪ್ಪ."

ಆ ಮಾತಿನಿಂದ ರಾಜನಿಗೆ ಕೋಪ ಬಂತು. ಅವನು, "ತುಚ್ಛವಾದ ಉಪ್ಪಿಗೆ ನನ್ನನ್ನು ಹೋಲಿಸ್ತೀಯಾ ? ಈಗಿಂದೀಗ ನನ್ನ ಮನೆ ಬಿಟ್ಟು ಹೊರಡು !" ಎಂದು ಅವಳನ್ನು ಹೊರಗೆ ನೂಕಿ ಬಾಗಿಲು ಹಾಕಿಕೊಂಡ.

ಹುಡುಗಿ ಅಳುತ್ತಾ ಕಾಡುಮೇಡು ಸುತ್ತಿದಳು. ಪರ್ವತ ದಾಟಿ ಜವುಗು ಪ್ರದೇಶವೊಂದಕ್ಕೆ ಬಂದಳು. ಅಲ್ಲಿ ಬೆಳೆದಿದ್ದ ಹುಲ್ಲಿನಿಂದ ಹೊದಿಕೆಯೊಂದನ್ನು ಮಾಡಿಕೊಂಡು ಅಲ್ಲಿನ ರಾಜನ ಅರಮನೆಯ ಅಡುಗೆ ಶಾಲೆಯಲ್ಲಿ ಪಾತ್ರೆ ತೊಳೆಯುವ ಕೆಲಸಕ್ಕೆ ಸೇರಿಕೊಂಡಳು. ಅವಳು ತನ್ನ ಹೆಸರನ್ನು ಯಾರಿಗೂ ಹೇಳಲಿಲ್ಲ ವಾದುದರಿಂದ 'ಹುಲ್ಲಿನ ಹುಡುಗಿ' ಎಂದೇ ಎಲ್ಲರೂ ಅವಳನ್ನು ಕರೆದರು.

ಒಂದು ದಿನ ರಾಜ ತನ್ನ ಅರಮನೆಯಲ್ಲಿ ನೃತ್ಯಕೂಟ ವೊಂದನ್ನು ಏರ್ಪಡಿಸಿದ. ಅದಕ್ಕಾಗಿ ಸುತ್ತಮುತ್ತಲ ರಾಜ್ಯಗಳ ರಾಜಕುಮಾರರೂ ರಾಜಕುಮಾರಿಯರೂ ಬಂದರು. ಅವರೆಲ್ಲಾ ನರ್ತಿಸುವುದನ್ನು ನೋಡಲೆಂದು ಅಡುಗೆಯವರೆಲ್ಲಾ ಹೊರಟರು. ಹುಲ್ಲಿನ ಹುಡುಗಿ ಅಳುತ್ತಾ ಮಣ್ಣುದಿಬ್ಬವೊಂದರ ಬಳಿ ಬಂದಳು. ಆಗ ಇದ್ದಕ್ಕಿದ್ದ ಹಾಗೆ ಬೆಳಕಾಗಿ ಕಿನ್ನರಿಯೊಬ್ಬಳು ಗೋಚರ ವಾದಳು. ಅವಳ ಕೈಯಲ್ಲಿ ಬೆಳ್ಳಿ ನಕ್ಷತ್ರಗಳಿದ್ದ ರೇಷ್ಮೆ ಸೀರೆ ಯೊಂದಿತ್ತು. ಆ ಸೀರೆಯನ್ನು ಹುಲ್ಲಿನ ಹುಡುಗಿಗೆ ಉಡಿಸಿ, "ನೃತ್ಯ ಮುಗಿಯುವ ಮುಂಚೆ ಬಂದುಬಿಡು" ಎಂದು ಕಿನ್ನರಿ ಆದೇಶವಿತ್ತಳು.

ಸಂತೋಷದಿಂದ ಹುಲ್ಲಿನ ಹುಡುಗಿ ಅರಮನೆ ಸೇರಿದಳು. ಅಲ್ಲಿನೆರೆದಿದ್ದವರಲ್ಲೆಲ್ಲಾ ಅವಳು ಅತ್ಯಂತ ಸುಂದರಿಯಾಗಿದ್ದಳು. ರಾಜಕುಮಾರ ಅವಳನ್ನು ಕಂಡೊಡನೆ ಮನಸೋತು, ಅವಳೊಡ ನೆಯೇ ನೃತ್ಯ ಮಾಡಲಾರಂಭಿಸಿದ. ಆದರೆ ಕೂಟ ಮುಗಿಯುವ

ಮುಂಜೆಯೇ ಹುಲ್ಲಿನ ಹುಡುಗಿ ಅವನ ಹಿಡಿತದಿಂದ ತಪ್ಪಿಸಿ ಕೊಂಡು ಹೊರಗೋಡಿದಳು. ಮಣ್ಣುದಿಬ್ಬದ ಹತ್ತಿರ ಬಟ್ಟೆ ಬದಲಾಯಿಸಿ ಮೊದಲಿನ ವೇಷದಲ್ಲಿ ಅಡುಗೆ ಮನೆ ಸೇರಿದಳು. ಸ್ವಲ್ಪಹೊತ್ತಿಗೆಲ್ಲಾ ಒಳಕ್ಕೆ ಬಂದ ಅಡುಗೆಯವರು ಹೇಳಿದರು: "ಎಷ್ಟು ಸುಂದರಿಯಾದ ರಾಜಕುಮಾರಿ ಬಂದಿದ್ದಳೂಂತ! ರಾಜಕುಮಾರ ಇಡೀ ಸಂಜೆ ಅವಳ ಜೊತೆಯೇ ಇದ್ದ. ನೀನು ಬಂದಿದ್ದರೆ ಅವಳನ್ನು ನೋಡಬಹುದಾಗಿತ್ತು!"

"ಹೌದಾ? ನಂಗೂ ಅವಳನ್ನ ನೋಡಬೇಕೆನಿಸುತ್ತೆ" ಎಂದಳು ಹುಲ್ಲಿನ ಹುಡುಗಿ.

"ನೋಡಬಹುದು. ಯಾಕೆ ಅಂದ್ರೆ ನಾಳೆ ಸಂಜೆಯೂ ನೃತ್ಯವಿದೆ."

ಮರುದಿನ ಬೇರೆಯವರೆಲ್ಲಾ ಹೊರಟ ಬಳಿಕ ಹುಲ್ಲಿನ ಹುಡುಗಿ ಮಣ್ಣುದಿಬ್ಬದ ಬಳಿ ಬಂದಳು. ಇಂದು ಕಿನ್ನರಿ, ಚಿನ್ನದ ನಕ್ಷತ್ರಗಳಿದ್ದ ರೇಷ್ಮೆ ಸೀರೆಯನ್ನು ಹಿಡಿದು ನಿಂತಿದ್ದಳು. ಅದನ್ನು ಉಟ್ಟು ಆ ದಿನವೂ ರಾಜಕುಮಾರನೊಂದಿಗೆ ನರ್ತಿಸಿದಳು.

ಮೂರನೆಯ ದಿನ ಅವಳು ಗರಿಗಳಿಂದ ನೆಯ್ದ ಸೀರೆ ಯುಟ್ಟು ಬಂದಾಗ ರಾಜಕುಮಾರ, ಅವಳು ಯಾವ ದೇಶದ ರಾಜಕುಮಾರಿ? ಎಂದು ತಿಳಿಯಲು ಪ್ರಯತ್ನಪಟ್ಟ. ಅವಳು

ಹೇಳದಿದ್ದಾಗ ರಾಜಕುಮಾರ ತನ್ನ ಕೈಯೊಳಗಿನ ಉಂಗುರವನ್ನು ಅವಳ ಬೆರಳಿಗೆ ತೊಡಿಸಿಬಿಟ್ಟ. ಆದರೆ ಈ ಸಾರಿಯೂ ಹುಲ್ಲಿನ ಹುಡುಗಿ ನೃತ್ಯ ಮುಗಿಯುವ ಮುಂಚೆ ತಪ್ಪಿಸಿಕೊಂಡುಬಿಟ್ಟಳು.

ಮಾರನೆಯ ದಿನ ನೃತ್ಯಕೂಟವಿರಲಿಲ್ಲವಾಗಿ ಯಾರೂ ಬರಲಿಲ್ಲ. ರಾಜಕುಮಾರ ತನ್ನ ಪ್ರೀತಿಪಾತ್ರಳಿಗಾಗಿ ಎಲ್ಲ ಕಡೆಗಳಲ್ಲೂ ಹುಡುಕಿಸಿ ನಿರಾಶನಾಗಿ ಕಾಹಿಲೆ ಬಿದ್ದ. ಆಗ ಅಡುಗೆಯವನು ರಾಜಕುಮಾರನಿಗಾಗಿ ಗಂಜಿ ಮಾಡುತ್ತಿದ್ದಾಗ, ಹುಲ್ಲಿನ ಹುಡುಗಿ ತಾನೇ ಅದನ್ನು ತಯಾರಿಸುತ್ತೇನೆಂದು ಹಟ ಹಿಡಿದಳು. ಗಂಜಿಯನ್ನು ಬೆಳ್ಳಿಯ ಬಟ್ಟಲೊಂದರಲ್ಲಿ ಹಾಕಿ ಅದರೊಳಗೆ ರಾಜಕುಮಾರ ಕೊಟ್ಟಿದ್ದ ಉಂಗುರವನ್ನು ಇಳಿಯಬಿಟ್ಟಳು.

ಎಂದಿನಂತೆ ಅಡುಗೆಯವ ಗಂಜಿಯನ್ನು ಒಯ್ದಾಗ ರಾಜಕುಮಾರ ಅದನ್ನು ಕುಡಿದು ಮುಗಿಸಿದ. ಆಗ ಕೆಳಗಿದ್ದ ಉಂಗುರವನ್ನು ಕಂಡು ಸಂತೋಷದಿಂದ ಜಿಗಿದು, "ಗಂಜಿ ಯಾರು ಮಾಡಿದ್ದು ?" ಎಂದು ಕೇಳಿದ. "ನಾನೇ" ಎಂದ ಅಡಿಗೆಯವ. "ನೀನಲ್ಲ. ಅದನ್ನು ಯಾರು ಮಾಡಿದ್ದು ನಿಜ ಹೇಳು ?" ಎಂದಾಗ ಅಡುಗೆಯವನು ಹೆದರಿ ನಡುಗುತ್ತಾ, "ಅದನ್ನು ಮಾಡಿದ್ದು ಹುಲ್ಲಿನ ಹುಡುಗಿ. ಅವಳು ನಮ್ಮಲ್ಲಿ ಮುಸುರೆ ಪಾತ್ರೆ ತೊಳೆಯುವವಳು" ಎಂದ. "ಹಾಗಾದರೆ ಅವಳನ್ನು ಕರಿ" ಎಂದು ಆಜ್ಞಾಪಿಸಿದ ರಾಜಕುಮಾರ.

ಹುಲ್ಲಿನ ಹುಡುಗಿ ಬಂದಾಗ "ನಿನಗೆ ಆ ಉಂಗುರ ಎಲ್ಲಿ ಸಿಕ್ತು ?" ಎಂದು ಕೇಳಿದ.

"ಯಾರು ಕೊಟ್ಟರೋ ಅವರಿಂದ!" ಎಂದಳು ಹುಡುಗಿ.

"ನೀನ್ಯಾರು ನಿಜ ಹೇಳು", ಎಂದು ರಾಜಕುಮಾರ ಕೇಳಿದಾಗ ಹುಡುಗಿ ತನ್ನ ಹುಲ್ಲಿನ ಹೊದಿಕೆಯನ್ನು ಕಿತ್ತೆಸೆದಳು. ಒಳಗೆ ಗರಿಗಳಿಂದ ನೆಯ್ದ ಸೀರೆಯಿತ್ತು. ರಾಜಕುಮಾರ ಸಂತೋಷದಿಂದ ಅವಳ ಕೈಗಳನ್ನು ಹಿಡಿದುಕೊಂಡ.

ಅವರಿಬ್ಬರ ಮದುವೆಗಾಗಿ ಸುತ್ತಲ ರಾಜರಿಗೆ ಆಮಂತ್ರಣ ಹೋಯಿತು. ಆಗ ಹುಡುಗಿಯ ತಂದೆಯೂ ಅಲ್ಲಿಗೆ ಬಂದ. "ಅತಿಥಿಗಳಿಗೆ ತಯಾರಿಸುವ ಅಡುಗೆಗೆ ಉಪ್ಪು ಹಾಕಬೇಡ", ಎಂದು ಅವಳು ಅಡುಗೆಯವನಿಗೆ ನಿರ್ದೇಶನ ಕೊಟ್ಟಳು. ಬಂದವರೆಲ್ಲಾ ಊಟಕ್ಕೆ ಕುಳಿತಾಗ ಉಪ್ಪಿಲ್ಲದ ಸಪ್ಪೆ ಊಟವನ್ನು ಉಣ್ಣಲಾರದೆ ಆಕೆಯ ತಂದೆ ದುಃಖದಿಂದ ಕುಳಿತ. "ಯಾಕೆ ಸಪ್ಪಗಿದ್ದೀರಿ" ಎಂದು ರಾಜಕುಮಾರ ಕೇಳಿದ.

ತಂದೆ ಅಂದ: "ನನ್ನ ಮಗಳೊಬ್ಬಳಿದ್ದಳು. ನಿನ್ನ ತಂದೆಯನ್ನು ಎಷ್ಟು ಪ್ರೀತಿಸ್ತೀಯಾ ಎಂದು ಕೇಳಿದ್ದಕ್ಕೆ 'ಉಪ್ಪಿನಷ್ಟು' ಅಂದಿದ್ದಳು. ನಾನು ಅವಳನ್ನು ಮನೆ ಬಿಟ್ಟು ಓಡಿಸಿದೆ. ಈಗ ಅನ್ನಿಸುತ್ತೆ, ಉಪ್ಪೇ ಜೀವನಕ್ಕೆ ಆಧಾರ. ಅವಳೇ ನನ್ನನ್ನು ಎಲ್ಲರಿಗಿಂತ ಹೆಚ್ಚು ಪ್ರೀತಿಸ್ತಿದ್ದಳು ಅಂತ. ಪಾಪ ಅವಳ ಗತಿ ಏನಾಯ್ತೋ ಏನೋ! ಬಹುಶಃ ಸತ್ತೇಹೋಗಿರಬಹುದು".

ಆತ ಹಾಗೆಂದೊಡನೆ ಹುಲ್ಲಿನ ಹುಡುಗಿ ಮುಂದೆ ಓಡಿ

ಬಂದು, "ಇಲ್ಲಪ್ಪ, ನಾನಿಲ್ಲೀ ಇದ್ದೀನಿ" ಎಂದಳು. ತಂದೆ ಸಂತೋಷದಿಂದ ಮಗಳ ಮೈದಡವಿದ.

ರಾಜಕುಮಾರನಿಗೂ ರಾಜಕುಮಾರಿಗೂ ವೈಭವದಿಂದ ಮದುವೆ ನಡೆದು, ಅಲ್ಲಿಂದ ಮುಂದೆ ಎಲ್ಲರೂ ಸುಖವಾಗಿದ್ದರು.

ಪಾತಾಳದಲ್ಲಿ ಪಾಪಚ್ಚಿ

—ನಾ. ಕಸ್ತೂರಿ

ಮೊಲದ ಬಿಲ

ಪಾಪ ! ಪಾಪಚ್ಚಿ ಅಕ್ಕನ ಪಕ್ಕ ಹುಲ್ಲಿನ ಮೇಲೆ ಎಷ್ಟು ಹೊತ್ತು ಸುಮ್ಮನೆ ಒರಗಿದ್ದಾಳು ! ಒಂದೆರಡು ಸಲ, ಬಹಳ ಬೇಸರವಾದಾಗ, ಅಕ್ಕನ ಕೈಯಲ್ಲಿದ್ದ ಪುಸ್ತಕದ ಮೇಲೆ ಕತ್ತೆತ್ತಿ ಕಣ್ಣೋಡಿಸಿದಳು. ಆದರೆ, ಅದರಲ್ಲಿ ಚಿತ್ರಗಳೇ ಇರಲಿಲ್ಲ. “ಥೂ ! ಚಿತ್ರಗಳಿಲ್ಲದೆ ಪುಸ್ತಕವನ್ನೇಕೆ ಅಚ್ಚು ಹಾಕುತ್ತಾರೆಯೊ?” ಎಂದು ಗೊಣಗಿಕೊಂಡಳು. ‘ಹೂವಿಲ್ಲದ ಗಿಡ’ ಎಂದುಕೊಂಡಳು.

ಆ ದಿನ ಬಿಸಿಲು ಬಲವಾಗಿತ್ತು. ಪಾಪಚ್ಚಿಗೆ ಕೊಂಚ ಕೊಂಚವಾಗಿ ನಿದ್ದೆ ಹತ್ತುತ್ತಾ ಬಂದಿತು..ಪಕ್ಕದ ಮನೆ ಮರ ಹತ್ತಿ ಸೀಬೆಕಾಯಿ ಕಿತ್ತುಕೊಡು ಎಂದು ಶಾಮುವನ್ನು ಕೇಳೋಣವೆನಿಸಿತು......“ಬೇಡ. ಈಗ ಯಾರು ಅದಕ್ಕಾಗಿ ಮನೆಯೊಳಕ್ಕೆ ಹೋಗುವವರು ? ಶಾಮು ಪಕ್ಕದ ಮನೆಗೆ

ಹೋಗುತ್ತಾನೆಯೋ ಇಲ್ಲವೋ? ಬೆಳಗ್ಗೆ ಎಲ್ಲರ ಎದುರಿಗೂ, "ಥೂ" ಎಂದು ಅವನ ಸಂಗ ಬಿಟ್ಟ ಮೇಲೆ, ಈಗ ಹೇಗೆ ನಾಚಿಕೆ ಬಿಟ್ಟು ಅವನನ್ನು ಮಾತನಾಡಿಸುವುದು?" ಎಂದು ಯೋಚಿಸುತ್ತಾ ಅಲ್ಲಿಯೇ ಮಲಗಿಕೊಂಡಳು.

...ಆಗ... ಕೆಂಪುಕಣ್ಣಿನ, ಮೋಟುಬಾಲದ, ಉದ್ದ ಕಿವಿಗಳ ಬಿಳಿಯ ಮೊಲವೊಂದು ಅವಳ ಹತ್ತಿರವೇ ಓಡಿತು. ಹುಂ! ಅದರ ಓಟದ ರಭಸದಿಂದೆದ್ದ ಗಾಳಿ ಪಾಪಚ್ಚಿಗೆ ಸೋಕಿತು. ಮೊಲವು, "ಅಯ್ಯೋ ದೇವರೇ! ಹೊತ್ತಾಗಿಹೋಯಿತಲ್ಲಾ!" ಎಂದುಕೊಂಡೇ ಓಡುತ್ತಿತ್ತು. ಆ ಮಾತು ಪಾಪಚ್ಚಿಗೆ ಚೆನ್ನಾಗಿ ಕೇಳಿಸಿತು. ಒಂದೆರಡು ಮಾರು ದೂರ ಹೋದಮೇಲೆ ಅದು ತನ್ನ ಅಂಗಿಯ ಒಳಜೇಬಿನಿಂದ ಒಂದು ಸರಪಣಿ ಗಡಿಯಾರವನ್ನು ಹೊರಗೆಳೆದು ಅದನ್ನು ನೋಡುತ್ತಾ ಮತ್ತೆ ಓಡಿತು.

ಪಾಪಚ್ಚಿಯೂ ಥಟಕ್ಕನೆದ್ದು ಅದರ ಹಿಂದೆ ಓಡಿದಳು. ಬಿಳಿಯ ಮೊಲ! ಗಡಿಯಾರ! ಕನ್ನಡದಲ್ಲಿ ಕೂಗಾಟ! ಓಟ!– ಏನನ್ನು ನೋಡುವುದಕ್ಕಾಗಿ ಅದು ಓಡುತ್ತಿದೆ? ಹುಲಿಯನ್ನೆ? ಹುಲಿವೇಷವನ್ನೆ? ನೋಡೇಬಿಡೋಣವೆಂದು ಅವಳು ಅದನ್ನು ಭರಭರನೆ ಹಿಂಬಾಲಿಸಿದಳು. ಹಾಗೆಯೇ ಓಡಿ ಓಡಿ ಮೈದಾನದ ಅಂಚಿನವರೆಗೂ ಓಡಿದಳು.

ಅಲ್ಲಿ ಒಂದು ಬಿಲ; ಆಳವಾದ ಬಿಲ; ತಳವೇ ಕಾಣದ ಬಿಲ! ಸಾಕಷ್ಟು ದೊಡ್ಡದು. ಅದರೊಳಕ್ಕೆ ಆ ಮೊಲ





ಘುಮುಕುವ ಹೊತ್ತಿಗೆ ಸರಿಯಾಗಿ ಅವಳೂ ಅಲ್ಲಿಗೆ ಬಂದು ಸೇರಿದಳು. ಪಾಪಚ್ಚಿ ಕೊಂಚ ದುಡುಕು ಸ್ವಭಾವದವಳು. ಏನು, ಎತ್ತ, ಎಂಬ ವಿಚಾರವಿಲ್ಲ. ಹಿಂದುಮುಂದು ನೋಡದೆ ಆವಳೂ ಅವರೊಳಕ್ಕೆ ಘುಮುಕಿದಳು.

ಆ ಬಿಲವೋ, – ಅದೆಷ್ಟು ಆಳ! ಹೇಳಿದರೆ ನೀವು ನಂಬು ವುದಿಲ್ಲ. ಅರ್ಧಗಂಟೆಯು ಹೊತ್ತು ಕೆಳಕ್ಕೆ ಬೀಳುತ್ತಿದ್ದರೂ ತಳ ತಾಕಲಿಲ್ಲ. ಏಕೆ? ಪಾಪಚ್ಚಿ ಬೀಳುತ್ತಿದ್ದುದೇ ಅಷ್ಟು ನಿಧಾನವೋ? ಹಾಗೂ ಇರಬಹುದು ಅಲ್ಲವೆ? ಹೌದು, ಹಾಗೆಯೇ ಇರಬೇಕು. ಏಕೆಂದರೆ ಬೀಳುತ್ತಿದ್ದಾಗಲೇ ಅವಳಿಗೆ ತನ್ನ ಸುತ್ತಮುತ್ತ ನೋಡಲು ಅವಕಾಶ ಸಿಕ್ಕಿತು. ಮುಂದೆ ಯಾವ ಯಾವ ವಿಚಿತ್ರ ಘಟನೆಗಳು ಜರುಗಬಹುದು ಎಂದು ಯೋಚಿಸುತ್ತಲೇ ಕಣ್ಣರಳಿಸುತ್ತಲೇ ಬಿದ್ದಳು. ಆದರೆ, ತಾನು ಯಾವುದರ ಮೇಲೆ ಬೀಳಬಹುದೆಂದು ತಗ್ಗಿ ಬಗ್ಗಿ ಕಂಡು ಕೊಳ್ಳೋಣವೆಂದರೆ, ಅದು ಮಾತ್ರ ಸಾಧ್ಯವಾಗಲಿಲ್ಲ. ಕೆಳಗೆ ಕರಿಯ ಕತ್ತಲೆ; ಏನೂ ಕಾಣಿಸಲಿಲ್ಲ; ಯಾವುದರ ಮೇಲಾ ದರೂ ಆಗಲಿ, ಬಿದ್ದರೆ ತಾನಾಗಿಯೇ ತಿಳಿಯುತ್ತದೆ. ಅಲ್ಲವೆ?

ಆ ಬಿಲದ ಸುತ್ತಮುತ್ತ, – ಅಬ್ಬಬ್ಬ! ಎಷ್ಟೊಂದು ಬೀರುಗಳು! ಕನ್ನಡಿಗಳು! ಡಬ್ಬಿಗಳು! ಪಟಗಳು! ಅಡಿಗೆಯ ಪಾತ್ರೆಗಳೆಷ್ಟು! ಆಟದ ಸಾಮಾನುಗಳೋ ರಾಶಿ ರಾಶಿ! ಶೀಸೆಗಳು, ಸಾಲಾಗಿ ಒಂದರಮೇಲೊಂದು ಲೆಕ್ಕವಿಲ್ಲದಷ್ಟು! ಬೀಳುವಾಗಲೇ ಕೈನೀಡಿ ಒಂದು ತೆರೆದ ಬೀರುವಿನಿಂದ ಪಾಪಚ್ಚಿ ಒಂದು ಡಬ್ಬವನ್ನೆತ್ತಿದಳು. ಅದರ ಮೇಲೆ, "ಅಪ್ಪಟ ಹಾಲುಬೋವ"

ಎಂಬ ಒಂದು ಚೀಟಿ ಬರೆದಿತ್ತು. ಮುಚ್ಚಳ ತೆಗೆದು ನೋಡಿದಾಗ, ಅವಳ ಪುಣ್ಯಕ್ಕೆ ಸರಿಯಾಗಿ, ಅದರಲ್ಲಿ ಒಂದು ಚೂರೂ ಇರಲಿಲ್ಲ. ಹಾಲುಬೋವ ಇಲ್ಲದಿದ್ದರೆ ಹೋಗಲಿ ! 'ಅಪ್ಪಟ' ವಾದರೂ ಬೇಡವೆ, ಒಂದು ಚೂರು ? 'ಅಪ್ಪಟ' ಎಂದರೆ ಏನು ಎಂದು ಪಾಪಚ್ಚಿಗೆ ತಿಳಿಯದು.

ಬಂದ ಕೋಪದಲ್ಲಿ ಖಾಲಿ ಡಬ್ಬವನ್ನು ಕೆಳಕ್ಕೆಸೆದು ಬಿಡೋಣ ಎನ್ನಿಸಿತು. "ಬೇಡ. ಯಾರ ತಲೆಬುರುಡೆಯ ಮೇಲಾದರೂ ಒಡೆದರೆ ಗ್ರಹಚಾರ" ಎಂದು ಆಲೋಚಿಸಿ, "ಬೇಡ! ದಾರಿಯಲ್ಲಿ ಯಾವುದಾದರೂ ಇನ್ನೊಂದು ಬೀರು ತೆರೆದಿದ್ದರೆ !"ಎಂದು ಸರಕ್ಕನೆ ತಾನೇ ಹೇಳಿಕೊಂಡಳು. ಹಾಗೆಯೇ ಮಾಡಿದಳು; ಯಾರದೋ ಒರುಡೆ ಉಳಿಯಿತು.

"ಚಿಂತೆ ಇಲ್ಲ. ಹೀಗೊಂದು ಸಾರಿ ಉದ್ದಕ್ಕೂ ಬಿದ್ದ ಮೇಲೆ, ಎಲ್ಲಿಂದ ಎಲ್ಲಿಗೆ ಬಿದ್ದರೂ, ನನಗೆ ಹೆದರಿಕೆಯೇ ಇರುವುದಿಲ್ಲ. ನಾನು ಅಳುವುದೂ ಇಲ್ಲ. ಧಡಾರನೆ ಬಿದ್ದು, ಮಹಡಿ ಮೆಟ್ಟಿಲುಗಳನ್ನೆಲ್ಲಾ ಒಂದೇ ಸಲಕ್ಕೆ ಇಳಿದುಬಿಡುತ್ತೇನೆ. ಅಣ್ಣ, ಅಮ್ಮ ಎಲ್ಲರೂ ಬಂದು ನೋಡಿ! 'ಏನು ಈ ಹುಡುಗಿಗೆ ಎಷ್ಟು ಧೈರ್ಯ!' ಅನ್ನುತ್ತಾರೆ. "ಶಾಮೂ, ನೀನೂ ಅವಳ ಹಾಗೆ ಬೀಳು ನೋಡೋಣ!" ಎಂದು ಅವನನ್ನು ಅಣಕಿಸುತ್ತಾರೆ. ಇನ್ನು ಮುಂದೆ ಮನೆಯ ಮೇಲಿಂದ ಬಿದ್ದರೂ, ನಾನು ಅಲ್ಲಾಡದೆ ಸದ್ದುಮಾಡದೆ ಸುಮ್ಮನಾಗಿ ಬಿಡುತ್ತೇನೆ...ಹೀಗೆ ಜಂಬ ಕೊಚ್ಚಿಕೊಳ್ಳುತ್ತಾ ಪಾಪಚ್ಚಿ ಬೀಳುತ್ತಿದ್ದಳು. "ಇದೇನು ಹಾಳು. ಎಷ್ಟು ಹೊತ್ತು ಬೀಳುತ್ತಿರುವುದು? ಮುಗಿಯುವುದೇ ಇಲ್ಲವೋ?

ಈಗ ಸುಮಾರು ಎಷ್ಟು ಆಳ ಬಿದ್ದಿರಬಹುದು ? ಭೂಗೋಳದ ಮಧ್ಯದ ತನಕ ನಾನು ಬಂದಿರಬೇಕು. ಹಾಗಾದರೆ, ಎಷ್ಟು ಮೈಲಿ ?...ನಾಲ್ಕು ಸಾವಿರ ಮೈಲಿ !...ಅಲ್ಲವೇ ? ಹೂ... ಹೌದು". (ಶಾಮು ಭೂವಿವರಣೆಯನ್ನು ಉರುಹೊಡೆಯುತ್ತಿರುವಾಗ ಪಾಪಚ್ಚಿಯೂ ಅವನೆದುರಿಗೆ ಕುಳಿತು ಚೂರುಪಾರು ತಿಳಿದುಕೊಂಡಿದ್ದಾಳೆ. ಅವಳ ತಂದೆ ಮನೆಗೆ ಬಂದ ಮೇಲೆ, ಅದನ್ನೆಲ್ಲಾ ನೆನಪಿಟ್ಟು ಹೇಳಿದರೆ, ಅವರು ಪಾಪಚ್ಚಿಯನ್ನು ಬಹಳವಾಗಿ ಮುದ್ದಿಸುವರು. ಇಲ್ಲಿ, ಈ ಬಿಲದೊಳಗೆ ಹೊಗಳುವವರು ಯಾರೂ ಇಲ್ಲದಿದ್ದರೂ ಪಾಪಚ್ಚಿ ತನಗೆ ತಾನೇ ಮೆಚ್ಚುತ್ತಿದ್ದಳು.) "...ನಾಲ್ಕು ಸಾವಿರ ಮೈಲಿ ದೂರ !...ಅಲ್ಲ, ಆಳ ! ಅದಿರಲಿ, ಇಲ್ಲಿಯ ಸಮಾನಾಂತರ ವೃತ್ತ, ಅಕ್ಷಾಂಶ ರೇಖಾಂಶ ವೃತ್ತಗಳು ಏನಿರಬಹುದು ?... (ಪಾಪಚ್ಚಿಗೆ ಈ ಪದಗಳ ಅರ್ಥವೇ ತಿಳಿಯದು, ಆದರೂ ಜಂಬ !)

ಪಾಪಚ್ಚಿ ಮಾತನಾಡುತ್ತಲೇ, ಕೆಳಕ್ಕೆ ಬೀಳುತ್ತಿದ್ದಳು. "ಹೀಗೆಯೇ ನಾನು ಭೂಗೋಳದ ಆಚೆ ಬಿದ್ದರೆ ಏನು ಗತಿ ? ಅಲ್ಲಿಯ ಜನರು ತಲೆಕೆಳಗಾಗಿ ನೇತಾಡುತ್ತಾ ನಡೆಯುವರಲ್ಲವೆ ? ನೋಡುವುದಕ್ಕೆ ಸೊಗಸಾಗಿರುತ್ತದೆ. ಅದು ಯಾವ ದೇಶ ? ಅಸ್ಟ್ರೇರಿಕಾ ಅಲ್ಲವೇ ? (ಹೆಸರು ಏಕೋ ಸರಿಯಲ್ಲವೆಂದು ಪಾಪಚ್ಚಿಗೆ ಅನುಮಾನವಾಯಿತು. ಆದರೂ. ಕೇಳಿ ನಗಲು ಶಾಮು ಇರಲಿಲ್ಲವಾದ್ದರಿಂದ ಸಮಾಧಾನ.) ಇರಲಿ ! ಅಲ್ಲಿಗೆ ಹೋದ ಮೇಲೆ ಊರ ಹೆಸರೇನೆಂದು ಯಾರನ್ನಾದರೂ ಕೇಳಿ ತಿಳಿದುಕೊಂಡರಾಯಿತು. ಕಾಣದ ಊರಿಗೆ ನಾಲಗೆಯೇ ದಾರಿ. 'ಅಮ್ಮಾ ! ಇದು ಯಾವ ಊರು ? ಅಸ್ಟ್ರೇರಿಕಾವೋ, ನ್ಯೂನೀ

ಲಾಡೋ ?" ಎಂದರಾಯಿತು. (ಎದುರಿಗೆ ಯಾರೋ ಆ ದೇಶದವರು ನಿಂತಿರುವ ಹಾಗೂ ಅವರನ್ನು ಕೈಮುಗಿದು ಕೇಳುವ ಹಾಗೂ ಪಾಪಚ್ಚಿ ಬೀಳುತ್ತಿರುವಾಗಲೇ ಅಭ್ಯಾಸ ಮಾಡಿಕೊಂಡಳು.) ಆಮೇಲೆ, "ಇಲ್ಲ, ಇಲ್ಲ; ಹಾಗೆ ಪಾಪಿ ಪರದೇಶಿಯ ಹಾಗೆ ಬೀದಿಯಲ್ಲಿ ಹೋಗುವವರನ್ನು ಕೇಳುತ್ತಾ ಹೋದರೆ, ಏನೂ ತಿಳಿಯದ ಮಂಕು ಅಂದಾರು ... ಕೂಡದು...ಕೇಳಲೇ ಕೂಡದು...ಎಲ್ಲಿಯಾದರೂ ಹಲಗೆ ತುಂಡಿನ ಮೇಲೋ, ಗೋಡೆಮೂಲೆಯಲ್ಲೋ ಬರೆದಿರುವುದಿಲ್ಲವೆ ? ಓದಿಕೊಂಡರಾಯಿತು" ಎಂದು ಹೇಳಿಕೊಂಡಳು.

ಕೆಳಕ್ಕೆ...ಕೆಳಕ್ಕೆ...ಇನ್ನೂ ಬೀಳುವುದು ನಿಂತಿಲ್ಲ ! ತಳ ಸಿಕ್ಕಲಿಲ್ಲ...ಪಾಪಚ್ಚಿ ಏನು ಮಾಡಿಯಾಳು ? ಅವಳಿಗೆ ತುಂಬಾ ಬೇಜಾರಾಯಿತು, ಆಕಳಿಕೆ ಬಂತು. ಎಲ್ಲಿ ನಿದ್ದೆ ಬಂದು ಬಿಡುವುದೋ ಎಂಬ ಭಯ. ಆದ್ದರಿಂದ ಸರಸರನೆ ಮಾತನಾಡುವುದಕ್ಕೆ ಪ್ರಾರಂಭಮಾಡಿದಳು. "ಇವತ್ತು ರಾತ್ರಿಯೆಲ್ಲಾ ಪಿಲ್ಲಿ ನನ್ನನ್ನು ಹುಡುಕುತ್ತಾಳೆ. ಅವಳ ತಟ್ಟೆಗೆ ಹಾಲು ಹಾಕುವುದನ್ನು ಅಮ್ಮ ಮರೆತುಬಿಟ್ಟರೆ ಏನು ಮಾಡುವುದು ? ಶಾಮು ನೆನಪು ಕೊಡುತ್ತಾನೆಯೋ, ಇಲ್ಲವೋ ?... ಪಿಲ್ಲಿ, ನೀನು ನನ್ನ ಜತೆಯಲ್ಲಿರಬೇಕಾಗಿತ್ತು ಕಣೆ. ಆದರೆ, ನಿನಗೆ ತಿನ್ನುವುದಕ್ಕೆ ಇಲ್ಲಿ ಏನು ಸಿಕ್ಕುತ್ತೆ ? ಇಲ್ಲಿ ಬಾವಲಿಗಳೇ ಇಲಿಗಳು. ಸಾಲದೇನು ? ಬಾವಲಿಯೂ ಇಲಿಯ ಜಾತಿ ಕಣೆ ! ಆದರೆ, ಬೆಕ್ಕು ಬಾವಲಿಯನ್ನು ತಿನ್ನುತ್ತದೆಯೋ ? ಬಾವಲಿ...,ಬೆಕ್ಕನ್ನು..ತಿನ್ನುತ್ತದೆಯೋ ? ತಿನ್ನು...ಬಾ ವ ಲಿ ಯ ನ್ನು...ಬೆಕ್ಕುತ್ತದೆಯೋ?

ಎಂದು ಹೇಳುತ್ತಾ ಹೇಳುತ್ತಾ, ತೂಕಡಿಸುತ್ತಾ, ಆಕಳಿಸುತ್ತಾ ಬೀಳುತ್ತಿದ್ದಳು. ಹಾಗೆಯೇ, ನಿದ್ದೆಯಲ್ಲಿ ಬಿತ್ತು ಒಂದು ಕನಸು. ಕನಸಿನಲ್ಲಿ – ಪಿಲ್ಲಿಯು ಕೈಹಿಡಿದು ನಡೆಸಿಕೊಂಡು ಪಾಪಚ್ಚಿ ಸ್ಕೂಲಿಗೆ ಹೋಗುತ್ತಾ ಇದ್ದಳು. ನಡುವೆ ದಾರಿಯಲ್ಲಿ ಪಿಲ್ಲಿಯನ್ನು ಬೈದು ನಿಲ್ಲಿಸಿ, "ನಿಜ ಹೇಳು, ಬಾವಲಿಯನ್ನು ತಿನ್ನುತ್ತೀಯೋ, ಇಲ್ಲವೋ" ಎಂದು ಗದರಿಸುತ್ತಿದ್ದಳು. ಆಗ,.. 'ಧೊಪ್ !' ಏನು ?...ತರಗೆಲೆಯ ಒಂದು ಗುಡ್ಡದ ಮೇಲೆ ಬಿದ್ದಳು.... ಪಾಪಚ್ಚಿ ನಿದ್ದೆಯಿಂದೆದ್ದಳು, ...ತಳ ಸಿಕ್ಕಿತು...ಆದರೆ...

ಗಾಜಿನ ಬೋಜು

ಪಾಪಚ್ಚಿಗೆ ಕೊಂಚವೂ ನೋವಾಗಲಿಲ್ಲ. ಎದ್ದು ಕುಳಿತು ಬಲಗೈ ಮುಷ್ಟಿಯಿಂದ ಕಣ್ಣು ತಿಕ್ಕಿಕೊಂಡು ನಾಲ್ಕು ಕಡೆಯೂ ನೋಡಿದಳು. ತಲೆಯ ಮೇಲೆ ಕತ್ತಲೆ ಕಪ್ಪು; ಏನೂ ಕಾಣಿಸ ಲಿಲ್ಲ. ಮುಂದುಗಡೆ ಉದ್ದವಾದ ಓಣಿ. ಅದರ ಆಚೆ ಕೊನೆಯಲ್ಲಿ ಆ ಬಿಳಿಯ ಮೊಲ ಬಿರಬಿರನೆ ನಡೆದು ಹೋಗುತ್ತಿತ್ತು. ಉಸಿ ರಾಡುವಷ್ಟು ಹೊತ್ತು ಕೂಡ ನಿಲ್ಲದೆ, ಪಾಪಚ್ಚಿ ಅದರ ಹಿಂದೆ ವೇಗವಾಗಿ ಓಡಿದ್ದು ಒಳ್ಳೆಯದೇ ಆಯಿತು. ಏಕೆಂದರೆ ಆ ಓಣಿ ಫಕ್ಕನೆ ಬಲಕ್ಕೆ ತಿರುಗಿತು. "ಅಯ್ಯೋ! ನನ್ನ ವಿಾಸೆ ಹಾಳಾಗಿ ಹೋಯಿತು! ಎಷ್ಟು ಹೊತ್ತಾಗಿ ಹೋಯಿತು! ಏನು ಗತಿ!" ಎಂದು ಗಟ್ಟಿಯಾಗಿ ಗೊಣಗುಟ್ಟುತ್ತಾ ಮೊಲ ಬಲಕ್ಕೆ ತಿರುಗುವ ಹೊತ್ತಿಗೆ ಸರಿಯಾಗಿ, ಪಾಪಚ್ಚಿಯೂ ಅದರ ಹತ್ತಿರ ಬಂದು ಸೇರಿದಳು.

ಮೊಲದ ಹಿಂದೆಯೇ ಅವಳೂ ಬಲಕ್ಕೆ ತಿರುಗಿದಳು. ಅದರ ಬೆನ್ನ ಮೇಲೆಯೇ ದೃಷ್ಟಿಯನ್ನು ಯಾವಾಗಲೂ ಇರಿಸಿ ಅದು ಅತ್ತಿತ್ತ ತಿರುಗಿ ತಪ್ಪಿಸಿಕೊಂಡು ಹೋಗದ ಹಾಗೆ ನೋಡಿ ಕೊಳ್ಳಬೇಕೆಂದು ತೀರ್ಮಾನಿಸಿದಳು...ಆದರೆ ಇದ್ದಕ್ಕಿದ್ದ ಹಾಗೆ, ಅದು ಮಂಗಮಾಯ! ಅದರ ಸುಳಿವೇ ಸಿಕ್ಕಲಿಲ್ಲ! ಅಷ್ಟು ಬೇಗನೆ ಅದು ತಪ್ಪಿಸಿಕೊಂಡದ್ದು ಹೇಗೆಂದು ಗೊತ್ತಾಗಲೂ ಇಲ್ಲ! ಓಣಿಯೂ ಕೊನೆ! ಅಲ್ಲಿ ಅಗಲವಾದ ಹೆಚ್ಚು ಎತ್ತರ ವಿಲ್ಲದ ಒಂದು ದೊಡ್ಡ ಕೊಠಡಿ; ಸಣ್ಣ ಸಣ್ಣ ದೀಪಗಳು ಅಲ್ಲಲ್ಲಿ ಮಿಣುಕುತ್ತಿದ್ದವು. ಆದ್ದರಿಂದ, ಕೊಠಡಿಯಲ್ಲಿ ತಕ್ಕಮಟ್ಟಿಗೆ ಬೆಳಕಿತ್ತೆನ್ನಬಹುದು.

ಸುತ್ತಲೂ ಬಾಗಿಲುಗಳು ತುಂಬ ಇದ್ದುವು. ಆದರೆ, ಪಾಪಚ್ಚಿಗೆ ಮಾತ್ರ ಹೊರಗೆ ಹೊರಡಲು ಆಗಲಿಲ್ಲ, ಎಲ್ಲಕ್ಕೂ ಭದ್ರವಾಗಿ ಬೀಗ ಹಾಕಿತ್ತು. ಪಾಪ! ಪಾಪಚ್ಚಿ ಬೋನಿಗೆ ಬಿದ್ದ ಜಿಂಕೆಯ ಮರಿಯಂತೆ ಬೆದರಿದಳು. ಒಂದು ಕಡೆಯಿಂದ ಎಲ್ಲಾ ಬೀಗಗಳನ್ನೂ ಹಿಡಿದೆಳೆದು ತೆಗೆಯಲು ಪ್ರಯತ್ನಿಸಿದಳು. ಹಾಗೆಯೇ ಇನ್ನೊಂದು ಸಲ ಎಲ್ಲವನ್ನೂ ಪರೀಕ್ಷಿಸಿದಳು. ಕಡೆಗೆ, ಮನಸ್ಸು ಸೋತು, ಬೇಸತ್ತು, ನಿರಾಶಳಾಗಿ ಕೊಠಡಿಯ ನಡುವೆ ಬಂದು ನಿಂತು ನಿಟ್ಟುಸಿರುಬಿಟ್ಟಳು. "ದೇವರೇ! ನಾನು ಇಲ್ಲಿಂದ ಹೇಗೆ ತಪ್ಪಿಸಿಕೊಳ್ಳಲಿ ? ಮೊಲ ಎಲ್ಲಿಗೆ ಹೋಯಿತು ? ಕಾಣೆನಲ್ಲಾ !" ಎಂದು ವ್ಯಸನಪಟ್ಟಳು.

ಆಗ ಅವಳ ಹತ್ತಿರವೇ ಇದ್ದ ಒಂದು ಗಾಜಿನ ದುಂಡು ಮೇಜಿನ ಮೇಲೆ ಅವಳ ದೃಷ್ಟಿ ಬಿತ್ತು. ಅದರ ಮೇಲೊಂದು ಚಿನ್ನದ ಬೀಗದ ಕೈ ಥಳಥಳನೆ ಹೊಳೆಯುತ್ತಿತ್ತು. ಅದು ಅಲ್ಲಿನ





ಬೀಗಗಳಲ್ಲಿ ಯಾವುದಾದರೂ ಒಂದಕ್ಕೆ ಸರಿಹೋಗಬಹುದೆಂದು ಪಾಪಚ್ಚಿಗೆ ತೋರಿತು. ಆದರೆ ಅವಳ ಅದೃಷ್ಟಕ್ಕೆ ಸರಿಯಾಗಿ ಬೀಗಗಳೇ ಕೊಂಚ ದೊಡ್ಡವೋ, ಇಲ್ಲದೆ ಹೋದರೆ ಬೀಗದ ಕೈಯೇ ಕೊಂಚ ಚಿಕ್ಕದೋ, ಏಕೋ, ಏನೋ, ಒಂದು ಬಾಗಿಲನ್ನೂ ತೆರೆಯಲು ಸಾಧ್ಯವಾಗಲಿಲ್ಲ. ಇನ್ನೊಮ್ಮೆ ಎಲ್ಲ ಬೀಗಗಳನ್ನೂ ಪರೀಕ್ಷಿಸೋಣವೆಂದು ಅವಳು ಕೊಠಡಿಯ ಸುತ್ತ ಬಳಸಿ ಬಂದಳು. ಆಗ, ಅದುವರೆಗೂ ತನ್ನ ಕಣ್ಣಿಗೆ ಬೀಳದ ಬಿಳಿಯ ರೇಷ್ಮೆಯ ತೆರೆಯೊಂದನ್ನು ಕಂಡು ಆಶ್ಚರ್ಯ ದಿಂದ ನೋಡಿದಳು. ಅದರ ಹಿಂದೆ ಸುಮಾರು ಒಂದು ಒಂದೂವರೆ ಗೇಣು ಎತ್ತರದ ಸಣ್ಣದಾದ ಒಂದು ಬಾಗಿಲು ಕಾಣಿಸಿತು. ಅದಕ್ಕೆ ಹಾಕಿದ್ದುದು ಒಂದು ಚಿನ್ನದ ಬೀಗ! ಸರಸರನೆ ತನ್ನ ಕೈಯಲ್ಲಿದ್ದ ಬೀಗದ ಕೈಯಿಂದ ಅದನ್ನು ತೆರೆದಳು. ಪಾಪಚ್ಚಿಗೆ ಪರಮಾನಂದವಾಯಿತು.

ಆ ಬಾಗಿಲ ಹತ್ತಿರ ಮಂಡಿಯೂರಿ ಕುಳಿತು ತಲೆ ಬಗ್ಗಿಸಿ ಪಿಳಪಿಳನೆ ಹೊರಗೆ ನೋಡಿದಳು. ಅಲ್ಲಿ ಬಹಳ ವಿಚಿತ್ರವಾದ ಒಂದು ಮನೋಹರ ದೃಶ್ಯ ಕಾಣಿಸಿತು : ಎಂತಹ ಸುಂದರ ವಾದ ಹೂದೋಟ! ಲಾಲ್‌ಬಾಗಿಗಿಂತ ಸಾವಿರಪಾಲು ಸೊಗಸು! ಕಾಮನಬಿಲ್ಲಿನಂತೆ ಬಣ್ಣಗಳನ್ನು ಬೀರಿ ಒಂದರಮೇಲೊಂದು ಹಾಯುವ ನೀರಿನ ಬುಗ್ಗೆಗಳು! ಹೊಳೆಹೊಳೆವ ಹೂವುಗಳು! ಪಚ್ಚ ಹಸುರು ಹುಲ್ಲು! ಅಮೃತಶಿಲೆಯಿಂದ ಮಾಡಿದ ಪುತ್ಥಳಿಗಳ ಸಾಲು! ಹಾಡುತ್ತಾ ಕುಣಿದು ಹಾರುವ ಹಕ್ಕಿಗಳು! ಹಣ್ಣುಗಳು ಉದುರಿದ್ದರಿಂದ ಕೆಂಪಾಗಿ ಕಾಣುತ್ತಿದ್ದ ಕಾಲುದಾರಿಗಳು! ಅಲ್ಲಲ್ಲಿ ಕೆಲವರು ಆಳುಗಳಲ್ಲದೆ ಇನ್ನು ಯಾರೂ ಆ ಉದ್ಯಾನದಲ್ಲಿ ಸುಳಿದಾಡುತ್ತಿರಲಿಲ್ಲ.

ಆ ಹಾಳು ಬಾಗಿಲು ಇನ್ನೂ ಕೊಂಚ ಎತ್ತರವಾಗಿರಬಾರದಾಗಿತ್ತೆ? ಪಾಪಚ್ಚಿಯ ಅವಸ್ಥೆ, 'ಕೈಗೆ ಬಂದ ತುತ್ತು ಬಾಯಿಗಿಲ್ಲ' ಎನ್ನುವ ಹಾಗಾಯಿತು. ಅವಳ ತಲೆ ಕೂಡ ಆ ಬಾಗಿಲಿನಲ್ಲಿ ಹಿಡಿಸದು. "ಒಂದು ವೇಳೆ ನನ್ನ ತಲೆಯನ್ನು ಹೇಗಾದರೂ ತೂರಿಸಿದರೂ, ತೋಳುಗಳಿಲ್ಲದೆ, ಕೈಕಾಲುಗಳಿಲ್ಲದೆ ಅದು ಮಾತ್ರ, ಪಾಪ ಒಂಟಿಯಾಗಿ ಅಲ್ಲಿಗೆ ಹೋಗಿ ಏನು ಮಾಡೀತು? ತಸ್ವೀರು ತೆಗೆಯುವ ಕ್ಯಾಮರಾದ ಕಾಲುಗಳ ಹಾಗೆ ನನ್ನ ದೇಹವನ್ನೂ ಬೇಕು ಬೇಕಾದಾಗ ಚಿಕ್ಕದು ದೊಡ್ಡದು ಮಾಡಿಕೊಳ್ಳಲು ಸಾಧ್ಯವಾಗುವುದಾದರೆ ಎಷ್ಟು ಅನುಕೂಲವಾಗಿರುತ್ತೆ?" ಎಂದು ಮುಂತಾಗಿ ಪಾಪಚ್ಚಿ ಯೋಚಿಸಿದಳು. ತನ್ನನ್ನು ತಾನೇ ಶಪಿಸಿದಳು. ಅಂಥ ವಿಚಿತ್ರವೂ ಏಕೆ ನಡೆಯಬಾರದು ಎಂದು ಯೋಚಿಸಿದಳು.

ಬಾಗಿಲ ಬಳಿ ಮಲಗಿಕೊಂಡು ಉದ್ಯಾನವನ್ನು ನೋಡುತ್ತಾ ಸುಮ್ಮನೆ ನಾಲಗೆ ಚಪ್ಪರಿಸುತ್ತಿದ್ದರೆ ಫಲವೇನು? ಯಾವುದಾದರೊಂದು ಉಪಾಯದಿಂದ ಆ ತೋಟಕ್ಕೆ ನುಗ್ಗಲೇಬೇಕೆಂದು ಅವಳು ನಿರ್ಧರಿಸಿದಳು. ಮನಸ್ಸಿಲ್ಲದ ಮನಸ್ಸಿನಿಂದ ಎದ್ದು ಗಾಜಿನ ಮೇಜಿನ ಹತ್ತಿರಕ್ಕೆ ಬಂದಳು. ಅಲ್ಲಿ 'ಹಿರಿಯ ಮಕ್ಕಳನ್ನು ಕಿರಿದು ಮಾಡುವ ವಿಧಾನ' ಎಂಬ ಒಂದು ಪುಸ್ತಕವನ್ನೋ, ಇಲ್ಲದಿದ್ದರೆ, ದೊಡ್ಡ ಬಾಗಿಲುಗಳನ್ನು ತೆರೆಯಲು ದೊಡ್ಡ ಬೀಗದ ಕೈಯನ್ನೋ ಅಷ್ಟು ಹೊತ್ತಿಗೆ ಎಲ್ಲಿಂದಾದರೂ ಯಾರಾದರೂ ತಂದು ಹಾಕಿರಬಹುದೆಂಬ ಭರವಸೆ, ಆಸೆ, ಚಪಲ!

ಆದರೆ..."ಇದೇನಿದು? ಮೊದಲು ಇಲ್ಲಿ ಇರಲೇ ಇಲ್ಲ... ಆಶ್ಚರ್ಯ! ನಾನು ಯೋಚನೆ ಮಾಡಿದ ಹಾಗೆಯೇ ಆಗಿದೆ..."

ಮೇಜಿನ ಮೇಲೆ ಒಂದು ಸಣ್ಣ ಶೀಸೆ. ಒಂದು ಪಾವು ನೀರು ಹಿಡಿಯುಬಹುದು. ಅದರ ಕತ್ತಿಗೊಂದು ಪಟ್ಟಿ. ಅದರಲ್ಲಿ "ಕುಡಿಯಿರಿ" ಎಂದು ದಪ್ಪ ದಪ್ಪವಾದ ಅಕ್ಷರಗಳಲ್ಲಿ ಅಚ್ಚು ಹಾಕಿತ್ತು. ಆದರೆ ಅದನ್ನು ಓದಿದ ತಕ್ಷಣವೇ ದಡ್ಡ ಹುಡುಗಿಯ ಹಾಗೆ, ಪಾಪಚ್ಚಿ ತೆಗೆದುಕೊಂಡು ಕುಡಿದಳೆಂದು ತಿಳಿಯಬೇಡಿ. ತಕ್ಷಣವೇ ಪಾಪಚ್ಚಿ ತೆಗೆದುಕೊಂಡು ಕುಡಿದೇ ಬಿಟ್ಟಳು, ಅಂತೀ ರೇನು? ಇಲ್ಲ. ಪಾಪಚ್ಚಿ ಅಷ್ಟು ಪೆಚ್ಚು ಹುಡುಗಿಯೇನೂ ಅಲ್ಲ. ಶಾಮುವಾಗಿದ್ದರೆ ಗಬಕ್ ಎಂತ ಕುಡಿದರೂ ಕುಡಿಯುತ್ತಿದ್ದನೋ ಏನೋ? ಆದರೆ, ಪಾಪಚ್ಚಿಗೆ "ಯಾವ ಔಷಧಿ ಶೀಸೆಯನ್ನು ಕಂಡರೂ ಮೊದಲು 'ವಿಷ' ಎಂದು ಒಂದು ಕೆಂಪು ಚೀಟಿ ಅಂಟಿ ಸಿದೆಯೋ ಇಲ್ಲವೋ ಎಂದು ನೋಡಬೇಕು. ಅನಂತರ ಕುಡಿಯ ಬೇಕೋ, ಬಿಡಬೇಕೋ ಯೋಚನೆ ಮಾಡೋದು" ಎಂಬುದು ತಿಳಿದಿತ್ತು. ಏಕೆಂದರೆ, ಅವಳು ಕೇಳಿದ್ದ ಅನೇಕ ಕಥೆಗಳಲ್ಲಿ ಅರಿ ಯದ ಮಕ್ಕಳು ಸಣ್ಣ ವಿಷಯಗಳನ್ನು ಸಮಯದಲ್ಲಿ ಮರೆತದ್ದ ರಿಂದ ಅನೇಕ ಅನಾಹುತಗಳಿಗೆ ಸಿಕ್ಕಿಕೊಂಡಿದ್ದರು: ದೊಡ್ಡ ವರು ಕೊಟ್ಟ ಎಚ್ಚರಿಕೆಗೆ ಅವರು ಕಿವಿಗೊಟ್ಟಿರಲಿಲ್ಲ. ಪಾಪಚ್ಚಿ ಅವೆಲ್ಲವನ್ನೂ ಯಾವಾಗಲೂ ನೆನಪಿನಲ್ಲಿಟ್ಟಿದ್ದಳು. ಉದಾಹರಣೆ ಗಾಗಿ: ಕಾದ ಕಬ್ಬಿಣವನ್ನು ಕೈಯಿಂದ ಹಿಡಿದರೆ ಚುರ್ ಎನ್ನುತ್ತದೆ; ಚಾಕುವಿನಿಂದ ಬೆರಳನ್ನು ಕುಯ್ದರೆ ನೋವಾಗು ತ್ತದೆ, ಕೆಂಪಗಾಗುತ್ತದೆ; ಕಾಲಿನ ಮೇಲೆ ಭಾರವಾದ ಸಾಮಾನು ಬಿದ್ದರೆ ಕಣ್ಣಲ್ಲಿ ನೀರು ಬರುತ್ತದೆ; 'ವಿಷ' ಎಂಬ ಚೀಟಿಯನ್ನು ಅಂಟಿಸಿರುವ ಶೀಸೆಯೊಳಗಿನ ವಸ್ತುವನ್ನು ಕುಡಿದರೆ ಆಸ್ಪತ್ರೆಗೆ ಹೋಗಬೇಕಾಗುತ್ತದೆ...ಇತ್ಯಾದಿ.

ಆದರೆ, ಆ ಶೀಸೆಯಲ್ಲಿ ಅಂಥಾದ್ದು ಏನೂ ಬರೆದಿರಲಿಲ್ಲ. "ಕುಡಿಯಿರಿ" ಅಷ್ಟೆ. ನಾಲ್ಕೇ ಅಕ್ಷರ. ಮುದ್ದಾಗಿ ಗುಂಡು ಗುಂಡಗೆ ಅಚ್ಚಾಗಿತ್ತು. ಪಾಪಚ್ಚಿ ದುಡುಕಲಿಲ್ಲ; ಕುಡಿಯು ವುದಕ್ಕೆ ಮೊದಲು ಒಂದು ತೊಟ್ಟನ್ನು ನಾಲಗೆಯ ತುದಿಗೆ ತೊಟ್ಟಿಕ್ಕಿಸಿಕೊಂಡು ರುಚಿ ನೋಡಿದಳು. ಬಹಳ ಚೆನ್ನಾಗಿತ್ತು; ಬೇಲದ ಹಣ್ಣಿನ ಪಾನಕ, ಸೊಗದೆ ಬೇರಿನ ಷರಬತ್ತು, ಮಾವಿನ ಹಣ್ಣಿನ ರಸಾಯನ,—ಇವು ಮೂರರ ರುಚಿಯೂ ವಾಸನೆಯೂ ಅದರಲ್ಲಿ ಬೆರೆತಿತ್ತು. ಇನ್ನೇನು? ಕೊಂಚವೂ ಅನುಮಾನಿಸದೆ ಪಾಪಚ್ಚಿ ಎಲ್ಲವನ್ನೂ ಒಂದೇ ಗುಟುಕಿನಲ್ಲಿ ಕುಡಿದೇಬಿಟ್ಟಳು.

"ಹಾ! ಇದೇನು! ನಾನು ಪುಟಾಣಿ ಹುಡುಗಿಯಾಗು ತ್ತಿದ್ದೇನೆ", ಎಂದು ಪಾಪಚ್ಚಿ ಬೆಚ್ಚಿದಳು. ಹೌದು. ಅವಳು ಹೇಳಿದ್ದು ನಿಜ. ಬಹಳ ಬೇಗನೆ ಅವಳು ಒಂದು ಗೇಣು ಎತ್ತರದ ಮಗುವಾಗಿಬಿಟ್ಟಿದ್ದಳು. ಆಗ, ಅವಳ ಚಿಕ್ಕ ಮುಖ ಸಂತೋಷ ದಿಂದ ಅರಳಿತು. ಆ ಸಣ್ಣ ಬಾಗಿಲಿನಿಂದ ಹೊರಗೆ ಹೋಗಿ ಉದ್ಯಾನವನ್ನು ಕಣ್ಣಾರೆ ನೋಡಿ ಮನಸಾರೆ ಮೆಚ್ಚಬಹುದೆಂದು ಅವಳು ಹಿಗ್ಗಿದಳು. ಅವಳಿಗೆ ಕೊಂಚ ಹೆದರಿಕೆಯೂ ಆಯಿತು ಎನ್ನಿ. "ಹೀಗೆಯೇ ಚಿಕ್ಕದಾಗುತ್ತಾ ಆಗುತ್ತಾ ಉರಿದು ಆರುವ ಮೋಂಬತ್ತಿಯ ಹಾಗೆ, ಏನೂ ಉಳಿಯದೆ ನಾನು ಕರಗಿಬಿಟ್ಟರೆ ಏನು ಗತಿ? ಆಗ ನಾನು ಹೇಗಿರುತ್ತೇನೆ?" ಎಂದು ಯೋಚಿಸು ತ್ತಿದ್ದಳು. ಉರಿದು ಮುಗಿದು ಏನೂ ಉಳಿಯದ ಮೋಂಬತ್ತಿ ಹೇಗಿರುತ್ತದೆ–ಎಂದು ಮನಸ್ಸಿನಲ್ಲಿಯೇ ಚಿತ್ರಿಸಲು ಯತ್ನಿಸಿದಳು. ಅದನ್ನು ಯಾರೂ ನೋಡಿಲ್ಲವಾದ್ದರಿಂದ ಅವಳಿಗೂ ಅದು ಬಗೆ ಹರಿಯಲಿಲ್ಲ. ದೇವರ ದಯೆಯಿಂದ ಅವಳಿಗದು ತಿಳಿಯ

ಬೇಕಾಗಿಯೂ ಇರಲಿಲ್ಲ. ಏಕೆಂದರೆ, ಔಷಧಿಯ ಪ್ರಭಾವ ಬೇಗ ಕಡಮೆಯಾಗುತ್ತಾ ಬಂತು. ನೆಲಮಟ್ಟ ಮುಟ್ಟುವುದರೊಳಗೆ ಚಿಕ್ಕಚಿಕ್ಕದಾಗುವುದು ನಿಂತುಹೋಯಿತು.

ಪಾಪಚ್ಚಿ ತೋಟದ ಬಾಗಿಲ ಕಡೆ ಸರಸರ ಸರಿದಳು. ಆದರೆ, ಮೊದಲು ಮೇಜಿನ ಕಡೆ ಹಿಂದಿರುಗಿದಾಗ ಅವಳು ಆ ಬಾಗಿಲ ಬೀಗವನ್ನು ಹಾಕಿಬಿಟ್ಟಿದ್ದಳು. ಬೀಗದ ಕೈಯನ್ನು ಯಥಾಸ್ಥಿತಿ ಗಾಜಿನ ಮೇಲೆ ಇರಿಸಿದ್ದಳು! ಈಗ ಅದನ್ನು ತೆಗೆಯುವುದು ಹೇಗೆ? ಕೈಗೆ ಎಟುಕದ ಆ ಮೇಜಿನಿಂದ ಬೀಗದ ಕೈಯನ್ನು ಕೆಳಕ್ಕಿಳಿಸುವುದು ಹೇಗೆ? ಮೇಜಿನ ಕಾಲನ್ನು ಹಿಡಿದು ಹತ್ತಲು ಶ್ರಮಿಸಿ ಅವಳು ಜಾರಿ ಬಿದ್ದಳು. ಪಾಪ, ಪಾಪಚ್ಚಿ ಆಸೆ ಪಟ್ಟದೆಲ್ಲವೂ ಹಾಳಾಯಿತು. ಇನ್ನೇನು ಮಾಡುವುದು? ಅವಳಿಗೆ ತಿಳಿದದ್ದು ಒಂದೇ ದಾರಿ...ಅಳುತ್ತಾ ಕುಳಿತಳು...

"ಸಾಕು. ನಿಲ್ಲಿಸು. ಬಾಯಿಮುಚ್ಚು. ಅತ್ತರೆ, ಇಲ್ಲಿ ಯಾರೂ ನಿನ್ನನ್ನು ಬಂದು ಎತ್ತಿಕೊಳ್ಳುವುದಿಲ್ಲ." ಇದು ಪಾಪಚ್ಚಿ ತನಗೆ ತಾನೇ ಹೇಳಿಕೊಂಡ ಮಾತು. ತನಗೆ ತಾನೆ ಬೈದು, ಹೊಡೆದು, ಬುದ್ಧಿವಾದ ಹೇಳಿಕೊಂಡು, ಸಮಾಧಾನ ತಂದುಕೊಳ್ಳುವುದು ಅವಳ ಪದ್ಧತಿ. ಹಿಂದೆ ಒಂದು ಸಲ ಶಾಮುವಿನ ಪುಸ್ತಕದ ಒಂದು ಹಾಳೆಯನ್ನು ಹರಿದಿದ್ದಕ್ಕಾಗಿ ತನಗೆ ತಾನೆ ಕಿವಿ ಕಿವುಚಿಕೊಂಡು ಅದು ಹುಣ್ಣಾಗಿ ಐದಾರು ದಿನ ಆಸ್ಪತ್ರೆಗೆ ಹೋಗಬೇಕಾಗಿ ಬಂದಿತ್ತು. ಇನ್ನೊಂದು ಸಾರಿ ತಾನೂ ಪಾಪಚ್ಚಿಯೂ (ಶಾಮು ಸ್ಕೂಲಿಗೆ ಹೋದ ಮೇಲೆ ಮನೆಯಲ್ಲಿ ಅವಳೊಂದಿಗೆ ಆಟವಾಡಲು ಬೇರೆ ಯಾರೂ ಇರುತ್ತಿರಲಿಲ್ಲ.

ಆದ್ದರಿಂದ, ಅವಳು ತನ್ನನ್ನೇ ಇಬ್ಬರು ಎಂದು ಭಾವಿಸಿಕೊಳ್ಳು ವಳು.) ಇಬ್ಬರೂ ಒಂದು ದಿನ ಕಣ್ಣಾಮುಚ್ಚಾಲೆ ಆಟವಾಡು ವಾಗ ಗೆಳತಿಯ ಹತ್ತಿರ ಯಾವುದೋ ಒಂದು ಸುಳ್ಳು ಹೇಳಿದ್ದ ಕ್ಕಾಗಿ ತನ್ನನ್ನೇ ತಾನು ಬಹಳವಾಗಿ ಹೊಡೆದುಕೊಂಡುಬಿಟ್ಟಿದ್ದಳು. ಹೀಗೆಯೇ, ಯಾರೂ ಹತ್ತಿರವಲ್ಲಿ ಇಲ್ಲದಿದ್ದರೆ ತಾನು ಇಬ್ಬರೆಂದು ಭಾವಿಸಿಕೊಂಡು ಮಾತನಾಡುವುದು, ಆಟ ಆಡು ವುದು ಅವಳಿಗೆ ಅಭ್ಯಾಸ. "ಆದರೆ ಈಗ ನನ್ನನ್ನು ಇಬ್ಬರೆಂದು ಇಟ್ಟುಕೊಳ್ಳುವುದಕ್ಕಾಗುವುದೇ ಇಲ್ಲ. ಹೀಚೆಂದರೆ ಹೀಚು. ಒಬ್ಬಳಿಗೆ ಕೂಡ ಸಾಲದು ಈ ನನ್ನ ತಲೆ, ಕೈಕಾಲು" ಎಂದು ಅಂದುಕೊಂಡಳು.

ಪಾಪಚ್ಚಿ ಮೇಜಿನ ಕೆಳಗೆ ನೆಲದ ಮೇಲೆ ಕುಳಿತು ಕೊರಗು ತ್ತಿದ್ದಳು. ಚಿನ್ನದ ಬೀಗದ ಕೈಯ ಹೊಳಪು ಎಲ್ಲೋ ಆಕಾಶದಲ್ಲಿ ಕಾಣಿಸುತ್ತಿತ್ತು. ಕೊಂಚ ಹೊತ್ತಿನ ಮೇಲೆ ಅಳು ನಿಲ್ಲಿಸಿ ಅವಳು ಸುತ್ತಮುತ್ತ ಇನ್ನೊಂದು ಸಾರಿ ನೋಡಿದಳು. ಗೋಡೆಯನ್ನೇ ಆಸರೆಯಾಗಿ ಹಿಡಿದು, ಅದರ ಅಂಚಿನಲ್ಲಿ ನಡೆದು ಬಂದಳು. ಇನ್ನು ಬೇರೆ ಯಾವುದಾದರೂ ಬಾಗಿಲುಗಳಾಗಲಿ, ತೆರೆಗಳಾಗಲಿ ಇವೆಯೋ ಎಂದು ಪರೀಕ್ಷಿಸಿದಳು. ಯಾವುದೂ ಇರಲಿಲ್ಲ.

ಆಗ, ಅಲ್ಲಿ, ಅವಳು ಅಳುತ್ತಿದ್ದ ಜಾಗದಲ್ಲಿಯೇ ಒಂದು ಸಣ್ಣ ಗಾಜಿನ ಪೆಟ್ಟಿಗೆ! ಶಾಮುವಿನ "ಜಾಮೆಟ್ರಿ"ಪೆಟ್ಟಿಗೆಯಷ್ಟೆ ಚಿಕ್ಕದು. ಪಾಪಚ್ಚಿ ಅದನ್ನು ತೆರೆದು ನೋಡಿದಳು. ಅದರಲ್ಲಿ ಒಂದು ಜಿಲೇಬಿ. "ತಿನ್ನಿರಿ" ಎಂಬ ಮೂರು ಕನ್ನಡ ಅಕ್ಷರ ಗಳನ್ನು ಒಂದಕ್ಕೊಂದು ಸೇರಿಸಿ ಹೆಣೆದ ಹಾಗೆ ಇತ್ತು ಅದರ

ಆಕಾರ. "ಏನಾದರೂ ಆಗಲಿ ! ಇದನ್ನು ತಿಂದುಬಿಡುತ್ತೇನೆ. ಎತ್ತರವಾಗಿ ಬೆಳೆದರೆ ಬೀಗದ ಕೈಯನ್ನು ತೆಗೆದುಕೊಳ್ಳಬಹುದು. ಇನ್ನೂ ಎತ್ತರ ಕಡಿಮೆಯಾದರೆ, ಹುಳದ ಹಾಗೆ ಬಾಗಿಲ ಸಂದಿನಿಂದಲೇ ಹರಿದು ತೋಟಕ್ಕೆ ತೂರಬಹುದು. ಅಂತೂ. ಜಿಲೇಬಿ ಚೆನ್ನಾಗಿರುತ್ತೆ. ಸಿಕ್ಕಿದ್ದನ್ನು ಬಿಡಬಾರದು. ತಿನ್ನಿರಿ ಎಂದು ಬೇರೆ ಬೇಡಿಕೊಳ್ಳುತ್ತಾ ಇದೆ. ಆದದ್ದಾಗಲಿ !" ಎಂದು ಪಾಪಚ್ಚಿ ನಿರ್ಧಾರ ಮಾಡಿದಳು.

ತನ್ನ ಎತ್ತರ ಹೆಚ್ಚುತ್ತದೋ, ಕಡಿಮೆಯಾಗುವುದೋ ಎಂಬುದನ್ನು ಗೊತ್ತು ಮಾಡಲು ಮೊದಲು ತನ್ನ ಅಂಗೈಯನ್ನು ತಲೆಯ ಮೇಲಿಟ್ಟುಕೊಂಡಳು. ಅನಂತರ, ಒಂದು ಜಿಲೇಬಿ ಚೂರನ್ನು ಮುರಿದು ಬಾಯಿಗೆ ಹಾಕಿಕೊಂಡಳು. ಏನೂ ಆಗಲಿಲ್ಲ! ಹಾ ! ಇದ್ದ ಹಾಗೆಯೇ ! ಏರಲಿಲ್ಲ, ಇಳಿಯಲಿಲ್ಲ. ಹಿಗ್ಗಿಲ್ಲ, ತಗ್ಗಿಲ್ಲ ! ಪಾಪಚ್ಚಿಗೆ ಕಣ್ಣಲ್ಲಿ ನೀರು ಬಂತು. ನಿಜವಾಗಿ ನೋಡಿದರೆ ಅವಳ ವ್ಯಥೆಗೆ ಕಾರಣವೂ ಇರಲಿಲ್ಲ, ಅಲ್ಲವೆ ? ಸಾಧಾರಣವಾಗಿ ನಾವು ಜಿಲೇಬಿ ತಿಂದಕೂಡಲೇ ನಮ್ಮ ಎತ್ತರ ಎಳ್ಳಷ್ಟೂ ಹೆಚ್ಚುವುದಿಲ್ಲ. ಆದರೂ, ಅಲ್ಲಿ, ಆ ಪಾತಾಳದಲ್ಲಿ, ತಿಂದದ್ದೆಲ್ಲಕ್ಕೂ ತಿಂದ ತಕ್ಷಣ ಒಂದು ಅದ್ಭುತವಾಗಲೇಬೇಕೆಂದು ಅವಳು ಎದುರು ನೋಡುತ್ತಿದ್ದಳು ! ಅದು ತಪ್ಪು. ಏನೂ ಆಗಲಿಲ್ಲ, ಸರಿ, ಇನ್ನೇನು ಮಾಡುವುದು? ಜಿಲೇಬಿಯ ರುಚಿ ಚೆನ್ನಾಗಿತ್ತು. ಆದ್ದರಿಂದ, ಅವಳು ಅದನ್ನು ಸಂಪೂರ್ಣ, "ತಿ"ಯನ್ನೂ "ನ್ನಿ" ಯನ್ನೂ "ರಿ"ಯನ್ನೂ ತಿಂದುಮುಗಿಸಿದಳು.

ವರಪ್ಪುಯರ

—ಹೊಯಿಸಳ

ಪುಟ್ಟಣ್ಣ ಇದೊಂದು ಕಥೆ. ಕನ್ನಡ ಭಾಷೆಗೆ ಪುಟ್ಟಕ್ಕ ಎನಿಸಿರುವ ಭಾಷೆಯೊಂದಿದೆ. ಅದು ಜೇನುತುಪ್ಪದ ಹಾಗೆ ರುಚಿಯಾಗಿದೆ. ಅದು—ತಮಿಳು ಭಾಷೆ. ಅದರಿಂದ ಒಂದು ಕಥೆಯನ್ನು ಆರಿಸಿದ್ದೇನೆ. ತಮಿಳು ಯಾರಾದರೂ ಆಡುತ್ತ ಇದ್ದರೆ ಆಲೈಸಿ ಕೇಳಿನೋಡು. ಅದರಲ್ಲಿ ಕನ್ನಡ ಮಾತು ಬಹಳ ಇರುವುವೋ! ಇದ್ದರೆ ನಿನ್ನಲ್ಲಿರುವ ಪುಟ್ಟ ಪುಸ್ತಕದಲ್ಲಿ ಬರೆದಿಟ್ಟುಕೊ.

ವರಪ್ಪು–ಬದುವೇರಲಿ–ಎಂಬುದೇ ಈ ಕಥೆಯ ಹೆಸರು.

ಆವ್ವೆಯಾರು ಎಂಬುವರು ಹಾಡು ಬರೆಯುವುದರಲ್ಲಿ ಬಹಳ ಹೆಸರುವಾಸಿ. ಅವ್ವೆಯಾರು ಹೆಂಗಸು. ಗಂಡಸರಿಗೆ ಕವಿ ಎಂದು ಹೆಸರಾದರೆ, ಹೆಂಗಸರಿಗೆ ಏನೆನ್ನುವರು ?—ಯಾರ

ನ್ನಾದರೂ ಕೇಳಿ ತಿಳಿದುಕೊ. ಅವ್ವೆಯಾರ ಹೆಸರು ಎಲ್ಲೆಲ್ಲಿಯೂ ಹರಡಿತು. ಒಂದು ದಿನ ಆ ಊರಿನ ರಾಜನು ಅವ್ವೆಯಾರನ್ನು ಅರಮನೆಗೆ ಕರೆಯಕಳಿಸಿದನು. ಮೇಣದ ಒಳಗೆ ಕುಳಿತು ಕೊಂಡು ಅವ್ವೆಯಾರು ಅರಮನೆಗೆ ಹೋದರು.

ಅರಮನೆಯಲ್ಲಿ ಶ್ರೀಮಂತರು ಬಹಳ ಜನ ಬಂದಿದ್ದರು. ಅವರೆಲ್ಲ ಥಳಥಳಿಸುವ ಬಟ್ಟೆಗಳನ್ನೂ ಒಡವೆಗಳನ್ನೂ ಹಾಕಿ ಕೊಂಡು ಬಂದಿದ್ದರು. ಅವ್ವೆಯಾರು ಸಾದಾ ನೀಲಿ ಸೀರೆ ಉಟ್ಟು ಬಂದಿದ್ದರು. ಅವ್ವೆಯಾರಿಗೆ ಯಾರಿಗೂ ಇಲ್ಲದ ಮರ್ಯಾದೆ ಆಯಿತು. ರಾಣಿಯುವರು ಮಗುವನ್ನು ತಂದು ಅವ್ವೆ ಯಾರ ಮುಂದೆ ಹಿಡಿದರು. ಮರೆತೇಬಿಟ್ಟೆ! ಏನನ್ಯಾಯ! ನಿನಗೆ ಹೇಳಲೇ ಇಲ್ಲ! ಸಿಟ್ಟಾಗಬೇಡ ಪುಟ್ಟಣ್ಣ! ಆ ದಿನ ಅರ ಸನ ಪುಟ್ಟಾಣಿ ಕೂಸನ್ನು ತೊಟ್ಟಿಲಿಗೆ ಇಡುವ ಸಂಭ್ರಮ–ನಾಮ ಕರಣ! ಆಗ ಆ ಮಗುವನ್ನು ನೋಡಿ ಅವ್ವೆಯಾರು, 'ವರಪ್ಪು ಯುರ್', 'ವರಪ್ಪುಯುರ್', 'ವರಪ್ಪುಯುರ್'–ಹೀಗೆ ಮೂರು ಬಾರಿ ಹೇಳಿ ಆರತಿ ತಟ್ಟೆಯಲ್ಲಿ ಬೆರಳು ಅದ್ದಿದರು. ಮಗುವಿಗೆ ತಿಲಕ ಇಟ್ಟರು. ಇನ್ನೊಂದು ಸಾರಿ ಬೆರಳು ಅದ್ದಿದರು. ಕುಂಕುಮದ ನೀರಿನಲ್ಲಿ ಅರಮನೆಯ ಗೋಡೆಯ ಮೇಲೆ 'ವರಪ್ಪು ಯುರ' ಎಂದು ಬರೆದರು. ಮೇಣದಲ್ಲಿ ಕುಳಿತು ಹೊರಟೇ ಬಿಟ್ಟರು.

'ವರಪ್ಪುಯುರ'–ರಾಣಿಯು ರಾಜನ ಮುಖವನ್ನು ನೋಡಿ ದಳು. 'ವರಪ್ಪುಯುರ!' ಎಂಥಾ ಆಶೀರ್ವಾದ ಎಂದು ಮಂತ್ರಿಯು ಬೇಸರಮಾಡಿಕೊಂಡನು. 'ವರಪ್ಪುಯುರ!'—

ಪಂಡಿತರೆಲ್ಲ ಪುಸ್ತಕಗಳನ್ನು ತಿರುವಿಹಾಕಿದರು. ಅಯ್ಯೋ ಹೆಣ್ಣೇ, ಏನು ಕೆಲಸಮಾಡಿದೆಯೇ ? ಬೇರೆ ಏನೂ ಮಾತಿರಲಿಲ್ಲವೆ ? ಇದೆಂಥ ಆಶೀರ್ವಾದ ? 'ವರಪ್ಪುಯರ' ಎಂದರೆ 'ಬದು ಬೆಳೆಯಲಿ !' ಎಂದರ್ಥ ಮಾಡಿದರು. ಆದರೆ ರಾಜನ ಕೂಸಿಗೂ ಬದು ಬೆಳೆಯುವುದಕ್ಕೂ ನಂಟೇನು ಅಂಚೇನು ? ಯಾರು ಬಲ್ಲರು ? ಊರಲ್ಲೆಲ್ಲಾ ಇದೇ ಮಾತು. 'ಸರಿ ! ನಾಳೆ ಅವ್ವೆಯಾರ ತಲೆಯನ್ನು ತೆಗೆಸಿಬಿಡುತ್ತಾನೆ ರಾಜ !' ಹೀಗೆಂದು ಎಲ್ಲರೂ ಭಯ ಬಿದ್ದರು.

ಮಾರನೆಯ ದಿನ ಸೂರ್ಯನೋ ಬಲು ರೇಗಿ ಕೆಂಪಾಗಿದ್ದನು. ಹಕ್ಕಿಗಳೆಲ್ಲ ಕಾದಾಡಿ ಗದ್ದಲ ಮಾಡುತ್ತಿದ್ದವು. ಕೋಳಿಗಳಿಗಂತೂ ನಿದ್ದೆಯೇ ಇರಲಿಲ್ಲ ರಾತ್ರಿಯೆಲ್ಲ ! ಎಲ್ಲೆಲ್ಲೂ 'ವರಪ್ಪುಯರ ! ವರಪ್ಪುಯರ !'.

ಅರಮನೆಯಿಂದ ಮೇನೆ ಬಂತು. ಅವ್ವೆಯಾರು ಆಸ್ಥಾನಕ್ಕೆ ಹೋದರು. ಅರಸು ಮೌನ ! ಮಂತ್ರಿ ನಿಶ್ಶಬ್ದ ! ಸೇನಾಪತಿ ಎದ್ದು ಕತ್ತಿ ಹಿರಿದನು. ಥಳಥಳ ಬೆಳಕಾಯಿತು. ಸಭೆಯೆಲ್ಲ ಝಲ್ಲೆಂದಿತು.–'ಅವ್ವೆಯಾರ್ ! ಅರಸರ ಮುಖವನ್ನು ನೋಡಿದಿರಾ !'

'ನೋಡಿದೆ ! ನನ್ನ ಹರಕೆಯ ಫಲ !'
'ಏನದು ? ಹರಕೆ !'
'ವರಪ್ಪುಯರ !'

'ಹಾಗೆಂದರೇನು ?' ಎಂದು ಸೇನಾಪತಿ ಕತ್ತಿಯನ್ನು ಝಳಪಿಸಿದನು. 'ಅದರರ್ಥ ?' ಎಂದು ಮಂತ್ರಿ ಎದ್ದು ಕೂಗಿ

ದನು. 'ಅದೇ ನಾವು ಕೇಳುವುದು !' ಎಂದೆದ್ದರು ಪಂಡಿತರು, ಎಲ್ಲರೂ ಒಟ್ಟಾಗಿ.

'ಹಾಗೆಂದರೆ ಏನೆಂದು ಹೇಳುತ್ತೇನೆ'. ಮಂತ್ರಿಯೆ ಲಾಲಿಸಬೇಕು. ಸೇನಾಪತಿಯೇ, ಕತ್ತಿಯನ್ನು ಒರೆಯಲ್ಲಿಡು. ಮಂತ್ರಿಯೇ ಮಂಡಿಸು. ಪಂಡಿತರೇ, ಲಾಲಿಸಿರಿ. ಹೀಗೆಂದು ಎಲ್ಲರನ್ನೂ ಸಮಾಧಾನಪಡಿಸಿ ಅಪ್ಪೆಯ್ಯಾರು ಹರಕೆಯನ್ನು ಪೂರ್ತಿಮಾಡಿದರು.

"ವರಪ್ಪುಯರ ನೀರುಯರುಂ
ನೀರುಯರ ನೆಲ್ಲುಯರುಂ
ನೆಲ್ಲುಯರ ಕುಡಿಉಯರುಂ
ಕುಡಿಉಯರ ಕೋಲುಯರುಂ
ಕೋಲುಯರ ಕೋನುಯರುಂ"

[ಇದರಲ್ಲಿ ಬಹಳ ಕನ್ನಡ ಪದಗಳಿವೆ. ಅಲ್ಲವೆ ನೋಡು. ವರಪ್ಪು (ಬದು, ಗದ್ದೆಯ ಬದು); ಉಯರು (ಏಳು, ಹೆಚ್ಚು); ಕುಡಿ (ಜನ, ಪ್ರಜೆ); ಕೋಲು (ರಾಜನ ಕೋಲು, ರಾಜದಂಡ); ಕೋ (ಕೋನು–ರಾಜನು)—ಅರ್ಥವಾಯಿತೇನು ? ಇದನ್ನು ಗಟ್ಟಿ ಮಾಡಿಕೊಂಡು ನಿನ್ನವರಿಗೆ ಹೇಳು, ಹೇಳಿಕೊಡು.]

ಬದುವೇರೆ ನೀರೇರ್‍ಗುಂ
ನೀರೇರೆ ನೆಲ್ಲೇರ್‍ಗುಂ
ನೆಲ್ಲೇರೆ ಕುಳವೇರ್‍ಗುಂ
ಕುಳವೇರೆ ಕೋಲ್ಲೇರ್‍ಗುಂ
ಕೋಲೇರೆ ಅರಸೇರ್‍ಗುಂ

ಬತ್ತದ ಗದ್ದೆಗಳ ನಡುವೆ ಇರುವ ದಿಂಡಿಗೆ ಬದು ಅಥವಾ ವರಪ್ಪು ಎಂದು ಹೆಸರು. ಈ ವರಪ್ಪು ಏರಲು ನೀರು ಏರಿ ನೆಲ್ಲು ಹೆಚ್ಚಾಗಿ ಬೆಳೆಯುತ್ತದೆ. ಹೆಚ್ಚಾಗಿ ನೆಲ್ಲು ಬೆಳೆದರೆ ಕುಳ ಎಂದರೆ ರೈತನು ಹಣವಂತನಾಗುತ್ತಾನೆ. ಹಣವಂತರಾದ ಕುಳ ಗಳು ರಾಜನ ಶಕ್ತಿಯನ್ನು ಹೆಚ್ಚಿಸುತ್ತಾರೆ. ಆದ್ದರಿಂದ ಗದ್ದೆಯ ಬದುವೇರಲಿ ಎಂದು ಅವ್ವೆಯಾರು ಹರಸಿದ್ದರು. ಹೊಲದಿಂದ ಪ್ರಜೆ! ಪ್ರಜೆಯಿಂದ ರಾಜ! ಇದಕ್ಕಿಂತ ಇನ್ನೆಂಥ ಹರಕೆ ಬೇಕಾಗಿದ್ದೀತು–ರಾಜನ ಮಗುವಿಗೆ !—ಹರಕೆ ?

ರಾಜ ಎದ್ದು ನಿಂತನು. ಕೊರಳಿನಿಂದ ಹಾರವನ್ನು ತೆಗೆದನು. ಸಿಂಹಾಸನವನ್ನು ಇಳಿದುಬಂದನು. ಅವ್ವೆಯಾರಿಗೆ ಅಡ್ಡ ಬಿದ್ದನು. ಹಾರವನ್ನು ಕೈಲಿಟ್ಟನು. ಮಂತ್ರಿ, ಸೇನಾಪತಿ, ಕವಿಗಳು, ಪಂಡಿತರು ಎಲ್ಲರೂ 'ವರಪ್ಪುಯುರ' ಎಂದು ಕೂಗಿ ದರು. ಅಂದಿನಿಂದ ಅವ್ವೆಯಾರಿಗೆ ಎಲ್ಲೆಲ್ಲೂ ನಮಸ್ಕಾರಗಳ ಸುರಿಮಳೆ. ಮರೆಯಬೇಡ–'ವರಪ್ಪುಯುರ !'

ಕನ್ನಡದ ಕತೆ

—ಎಂ. ವಿ. ಸೀತಾರಾಮಯ್ಯ

ಶಿವರಾಮಯ್ಯ ಬೆಂಗಳೂರು ನಗರದ ಒಂದು ಹೆಸರಾದ ಶಾಲೆಯಲ್ಲಿ ಕನ್ನಡ ಕಲಿಸುವ ಉಪಾಧ್ಯಾಯರು. ಅವರ ಮನೆ ಮಾತು ತೆಲುಗು. ಆದರೂ, ತಾವು ಅಚ್ಚಕನ್ನಡಿಗ ಎಂದು ಹೇಳಿಕೊಳ್ಳುವುದರಲ್ಲಿ ಅವರಿಗೆ ಹೆಮ್ಮೆ. ಮನೆಮಾತು ಯಾವುದೇ ಆಗಿದ್ದರೂ ಕನ್ನಡ ನಾಡಿನಲ್ಲಿ ಬಾಳುತ್ತಿರುವವರೆಲ್ಲ ಕನ್ನಡಿಗರು. ಮನೆಮಾತು ಕನ್ನಡ ಆಗಿರುವವರ ವಿಚಾರ ಹೇಳಬೇಕಾದದ್ದೇ ಇಲ್ಲ. ಕನ್ನಡಿಗರು ಕನ್ನಡವನ್ನು ಮೊದಲು ಪ್ರೀತಿಸಬೇಕು ; ಕನ್ನಡದ ಪ್ರೀತಿ ಇಲ್ಲದಿದ್ದರೆ ಕನ್ನಡ ಸಾಹಿತ್ಯ ಓದಿ ತಿಳಿದುಕೊಳ್ಳಬೇಕು ಎನ್ನುವ ಆಸೆ ಹುಟ್ಟುವುದಿಲ್ಲ. ಕನ್ನಡ ಸಾಹಿತ್ಯವನ್ನು ಚೆನ್ನಾಗಿ ಅರಿತುಕೊಳ್ಳದಿದ್ದರೆ, ಕನ್ನಡ ನಾಡಿನ ಮೇಲೆ ಅಕ್ಕರೆ ಉಂಟಾಗುವುದಿಲ್ಲ. ಕನ್ನಡ ನುಡಿ ನಾಡು ನಮ್ಮವು, ನಾವು ಕನ್ನಡಿಗರು ಎಂಬ ಅಭಿಮಾನ ಬೆಳೆಯದೆ

ಹೋದರೆ ನಾವು ಭಾರತದ ಜನ–ಭಾರತೀಯರು ಎಂಬ ದೇಶಭಕ್ತಿ ಬೆಳೆಯಲು ಸಾಧ್ಯವೇ ಇಲ್ಲ. ಮನೆಯ ಜನವನ್ನೇ ಪ್ರೀತಿಸದವನು ಕೇರಿಯ ಜನವನ್ನು ಪ್ರೀತಿಸಿಯಾನೆ ?

ಭಾರತ ದೇಶ ಎನ್ನುವ ಭಾರಿ ರಥವನ್ನು ಏಳೆಂಟು ಜೋಡಿ ಕುದುರೆಗಳು ಎಳೆಯುತ್ತಿವೆ. ಕನ್ನಡ ಮಾತನಾಡುವ ಜನ ಇರುವ ಕನ್ನಡ ನಾಡು ಒಂದು ಸೊಗಸಾದ ಕುದುರೆ. ತಮಿಳರ ನಾಡು ಇನ್ನೊಂದು ಕುದುರೆ; ಹೀಗೆಯೇ ತೆಲುಗು ಸೀಮೆ. ಮಹಾರಾಷ್ಟ್ರ, ಬಂಗಾಳ, ಪಂಜಾಬು, ಮೊದಲಾದ ಬೇರೆ ಬೇರೆ ನಾಡುಗಳ ಕೂಟವೇ ಭಾರತ. ಭಾರತ ಅಜ್ಜಿ ಇದ್ದಹಾಗೆ, ಕನ್ನಡ ಅವಳ ಮಗಳು, ಕನ್ನಡಿಗರಾದ ನಾವೆಲ್ಲ ಕನ್ನಡ ತಾಯಿಯ ಮಕ್ಕಳು. ಹೀಗಿರುವುದರಿಂದಲೇ—

ಜಯ ಹೇ ! ಕರ್ನಾಟಕ ಮಾತೆ
ಭಾರತ ಜನನಿಯ ತನುಜಾತೆ

ಎಂದು ಕವಿ ಹಾಡಿರುವುದು. ಈ ವಿಚಾರವೆಲ್ಲವನ್ನೂ ಚೆನ್ನಾಗಿ ಅರಗಿಸಿಕೊಂಡಿದ್ದ ಶಿವರಾಮಯ್ಯನವರು ತಾವು ಪಾಠ ಹೇಳುತ್ತಿದ್ದ ಶಾಲೆಯ ಮಕ್ಕಳಿಗೂ ಅದನ್ನು ಅರೆದು ಹುಯ್ಯಬೇಕು ಎಂದು ಬಯಸಿದರು. ಹಿಂದಿನ ವರ್ಷಗಳಂತೆ ಆ ವರ್ಷವೂ ನವೆಂಬರ್ ಒಂದನೆಯ ತಾರೀಖಿನ ದಿನ ಕನ್ನಡ ರಾಜ್ಯೋತ್ಸವ ನಡೆಯುವ ಏರ್ಪಾಡಾಯಿತು. ಶಾಲೆಯ ಮಕ್ಕಳಿಗೆ ಕನ್ನಡ ನಾಡು ನುಡಿಗಳ ವಿಚಾರವಾಗಿ ನಾಲ್ಕು ಮಾತು ಹೇಳಬೇಕೆಂದು ಮುಖ್ಯ ಉಪಾಧ್ಯಾಯರು ಶಿವರಾಮಯ್ಯನವರನ್ನು ಕೇಳಿಕೊಂಡಿದ್ದರು. ಆ ಕೆಲಸ ಮಾಡಲು ಅವರು

ಸಂತೋಷದಿಂದ ಒಪ್ಪಿಕೊಂಡರು. "ಬಹಳ ಹಿಂದಿನ ಕಾಲದಿಂದಲೂ ಕನ್ನಡ ನಾಡು ಒಂದಾಗಿಯೇ ಇತ್ತು. ಒಂದಾಗಿದ್ದ ನಾಡು ಇಂಗ್ಲಿಷರ ಆಳ್ವಿಕೆಯ ಕಾಲದಲ್ಲಿ ಹತ್ತಿಪ್ಪತ್ತು ತುಂಡುಗಳಾಗಿ ಮದರಾಸು, ಬೊಂಬಾಯಿ, ಹೈದರಾಬಾದು ಪ್ರಾಂತಗಳಲ್ಲಿ ಹಂಚಿಹೋಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ, ೧೯೫೬ರಲ್ಲಿ ಕನ್ನಡ ನಾಡು ಮತ್ತೆ ಒಂದಾಯಿತು. ಹಾಗೆ ನೋಡಿದರೆ, ರಾಷ್ಟ್ರಕೂಟರ ಕಾಲದಲ್ಲಿ ಮಾತ್ರ ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತು. ಆಮೇಲೆ, ವಿಸ್ತಾರವಾದ ಕನ್ನಡ ನಾಡು ಬೇರೆ ಬೇರೆ ಆಳುವ ಅರಸರ ಆಳುವಿಕೆಗೆ ಒಳಪಟ್ಟಿತ್ತು. ಹೀಗಿದ್ದರೂ, ಕನ್ನಡ ನಾಡು ಒಂದು ಎಂಬ ಭಾವನೆಯನ್ನು ಕಾಪಾಡಿಕೊಂಡು ಬಂದವರು ಕನ್ನಡ ಕವಿಗಳು. ಕನ್ನಡ ಕವಿಗಳು ಯಾವ ರಾಜ್ಯದಲ್ಲಿ ಯಾರಾದರೂ ಇದ್ದುಕೊಂಡಿರಲಿ, ಕನ್ನಡದಲ್ಲಿ ಕಾವ್ಯ ಬರೆದರು. ಈ ಕಾವ್ಯಗಳನ್ನು ಕೇಳುತ್ತ, ಓದುತ್ತ, ಕನ್ನಡ ಜನ ತಮ್ಮ ಕನ್ನಡತನವನ್ನು ಉಳಿಸಿಕೊಂಡು ಬಂದರು. ಯಾವ ದೇಶದಲ್ಲಿ ಬಹಳ ಕಾಲದಿಂದ ಸಾಹಿತ್ಯ ಬೆಳೆದು ರಾಶಿಯಾಗಿರುತ್ತದೆಯೋ ಆ ಸಾಹಿತ್ಯವನ್ನು, ಆ ಸಾಹಿತ್ಯದ ಭಾಷೆಯನ್ನು, ಆ ಭಾಷೆಯನ್ನು ಆಡುವ ಜನವನ್ನು ಬೇರೆ ಯಾವ ಭಾಷೆಯೂ, ಯಾವ ಸಾಹಿತ್ಯವೂ, ಯಾವ ಆಳುವ ಜನವೂ ನಾಶಮಾಡಲಾರವು. ಬಹಳ ಕಾಲದವರೆಗೆ ಕನ್ನಡದೊಂದಿಗೆ ಸಂಸ್ಕೃತದ ಸಂಬಂಧ ಇತ್ತು. ಆಮೇಲೆ ಇಂಗ್ಲೀಷಿನ ಸಂಬಂಧ ಉಂಟಾಯಿತು. ಈಗ ಹಿಂದಿಯ ಸಂಬಂಧ ಬೆಳೆಯತೊಡಗಿದೆ. ಈ ಎಲ್ಲ ಭಾಷೆಗಳ ಸಾಹಿತ್ಯಗಳಿಂದ ನಮ್ಮ ಕನ್ನಡ ಸಾಹಿತ್ಯ ಪ್ರಯೋಜನ ಹೊಂದಿದೆ. ಆದರೆ ಎಂದೂ ಹೊರಗಿನ ಭಾಷೆ ಸಾಹಿತ್ಯಗಳ ಮೇಲುತನಕ್ಕೆ

ಒಳಗಾಗಿ ಕುಗ್ಗಿ ಹೋಗಿಲ್ಲ. ಅವುಗಳ ಸಾರವನ್ನು ಹೀರಿಕೊಂಡು ಸೊಂಪಾಗಿ ಬೆಳೆದಿದೆ. ಮೊದಲಿನಿಂದ ಇವೊತ್ತಿನವರೆಗೆ ಕನ್ನಡ ಭಾಷೆ, ಸಾಹಿತ್ಯಗಳು ಬೆಳೆದು ಬಂದಿರುವ ಕತೆಯನ್ನು ನೀವೆಲ್ಲಾ ತಿಳಿದುಕೊಳ್ಳಬೇಕು" ಎಂದು ಹೇಳಿದರು.

ರಾಜ್ಯೋತ್ಸವದ ದಿನ ಕಾವ್ಯವಾಚನ, ಹಾಡು, ನಾಟಕ, ಮುಂತಾದ ಮನರಂಜನೆಯ ಕಾರ್ಯಕ್ರಮಗಳೂ ಇದ್ದುವು. ಶಾಲೆಯ ಮಕ್ಕಳಿಗೆ ಶಿವರಾಮಯ್ಯನವರ ಭಾಷಣಕ್ಕಿಂತ ಆ ಕಾರ್ಯಕ್ರಮಗಳಲ್ಲಿ ಆಸಕ್ತಿ ಹೆಚ್ಚಾಗಿತ್ತು. ಇದು ಸಹಜವಾದ ಒಲವು. ಶಿವರಾಮಯ್ಯನವರಿಗೆ ಈ ಗುಟ್ಟು ಗೊತ್ತಿತ್ತು. ಆದ್ದರಿಂದ ಮಕ್ಕಳಿಗೆ ಬೇಸರವಾಗಬಾರದು ಎಂದು ಅವರು ತಮ್ಮ ಮಾತನ್ನು ಬೇಗನೆ ಮುಗಿಸಿಬಿಟ್ಟರು.

ಆದರೆ ಅವರ ತರಗತಿಯ ಕೆಲವು ಮಕ್ಕಳಿಗೆ ಬೇಸರವೇನೂ ಆಗಿರಲಿಲ್ಲ. ಕನ್ನಡ ಭಾಷೆ, ಸಾಹಿತ್ಯಗಳ ವಿಚಾರವಾಗಿ ಇನ್ನೂ ಹೆಚ್ಚಾಗಿ ತಿಳಿದುಕೊಳ್ಳಬೇಕೆಂದು ಅವರಲ್ಲಿ ಕುತೂಹಲ ಚಿಗುರಿತ್ತು. ಮಾರನೆಯ ದಿನ ಶಿವರಾಮಯ್ಯನವರು ತರಗತಿಗೆ ಹೋದಾಗ ಪ್ರಶ್ನೆಗಳ ಸುರಿಮಳೆಯೇ ಆಯಿತು.

ಸುರೇಶ ಎದ್ದುನಿಂತು ಹೇಳಿದ :

"ಇವತ್ತು ವೇಳಾಪಟ್ಟಿಯ ಪಾಠ ಬೇಡ. ಸರ್, ನಿನ್ನೆ ನಿಮ್ಮ ಭಾಷಣವನ್ನು ಕೇಳಿದ ಮೇಲೆ ಕನ್ನಡ ಭಾಷೆ, ಸಾಹಿತ್ಯ ಇವುಗಳ ವಿಚಾರವಾಗಿ ಹೆಚ್ಚು ವಿಷಯ ತಿಳಿದುಕೊಳ್ಳಬೇಕು ಅಂತ ಆಸೆಯಾಗಿದೆ. ತಿಳಿಸಿಕೊಡಿ, ಸರ್".

ಶಿವರಾಮಯ್ಯ : ಆಗಲಿ. ಸಂತೋಷವಾಗಿ ತಿಳಿಸಿಕೊಡು ತ್ತೇನೆ. ನೀವು ಪ್ರಶ್ನೆ ಕೇಳಿ, ನಾನು ಉತ್ತರ ಹೇಳುತ್ತೇನೆ.

ರಮೇಶ : ಸರ್, ನಾವು...ಪ್ರಶ್ನೆ...

ಶಿವರಾಮಯ್ಯ : ನೋಡಿ. ಮಾತು ಮಾತಿಗೂ ಸರ್, ಸಾರ್, ಸಾರು, ಹುಳಿ ಎನ್ನಬೇಡಿ. ಪಂಡಿತರೇ ಅನ್ನಿ, ಗುರು ಗಳೇ ಅನ್ನಿ. ಹೊರಗಿನ ಭಾಷೆಯಾದ ಇಂಗ್ಲಿಷು ಮಾತು ಗಳನ್ನು ಕನ್ನಡದಲ್ಲಿ ಬೇಕಾಬಿಟ್ಟಿ ಬೆರಸಬಾರದು, ತಿಳಿಯಿತೆ ?

ರಮೇಶ : ತಿಳಿಯಿತು ಸಾರ್, ಅಲ್ಲ, ಮರೆತುಬಿಟ್ಟೆ, ಆಗಲಿ ಗುರುಗಳೆ.

ಸುರೇಶ : ಗುರು ಎನ್ನುವ ಮಾತು, 'ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುದೇವ ಮಹೇಶ್ವರಃ' ಎಂದು ನಾವು ನಿತ್ಯ ಹೇಳುವ ಶ್ಲೋಕದಲ್ಲಿ ಬಂದಿದೆ. ಆದ್ದರಿಂದ 'ಗುರು' ಸಂಸ್ಕೃತ ಮಾತು. ಕನ್ನಡದಲ್ಲಿ ಸಂಸ್ಕೃತ ಬೆರಸುತ್ತೇವೆ. ಇಂಗ್ಲಿಷು ಯಾಕೆ ಬೆರಸಬಾರದು ?

ಶಿವರಾಮಯ್ಯ : ನಿನ್ನದು ಒಳ್ಳೆಯ ಪ್ರಶ್ನೆ, ಅದಕ್ಕೆ ಉತ್ತರ ಹೇಳುತ್ತೇನೆ, ಸ್ವಲ್ಪ ತಾಳು, ರಮೇಶ ಏನೋ ಪ್ರಶ್ನೆ ಕೇಳಬೇಕು ಅಂತ ಇದ್ದ. ಅವನ ಪ್ರಶ್ನೆಗೆ ಉತ್ತರ ಹೇಳಿ, ನಿನ್ನ ಪ್ರಶ್ನೆಗೆ ಉತ್ತರ ಹೇಳುತ್ತೇನೆ. ನಿನ್ನ ಪ್ರಶ್ನೆ ಏನು ರಮೇಶ್ ?

ರಮೇಶ್ : ಏನೂ ಇಲ್ಲ ಗುರುಗಳೆ. ಸುರೇಶನ ಪ್ರಶ್ನೆಗೆ ಉತ್ತರ ಹೇಳಿ ಗುರುಗಳೆ.

ಶಿವರಾಮಯ್ಯ : ಕನ್ನಡದಲ್ಲಿ ಇಂಗ್ಲೀಷು ಯಾಕೆ ಬೆರಸ ಬಾರದು ಅಂತ ಸುರೇಶ ಕೇಳಿದಾನೆ. ಬೆರಸಬಹುದು ಅಂತಲೇ ನನಗೆ ಅನ್ನಿಸುತ್ತದೆ. ಇಂಗ್ಲೀಷು ಮಾತ್ರ ಅಲ್ಲ, ಸಂಸ್ಕೃತ ವನ್ನೂ ಕೂಡ ತೀರ ಅಗತ್ಯ ಬಂದಾಗ ಮಾತ್ರ ಬಳಸಬೇಕು. ಇಲ್ಲಿ, ನಾವು ಒಂದು ಸಂಗತಿಯನ್ನು ನೆನಪಿನಲ್ಲಿ ಇಟ್ಟುಕೊಳ್ಳ ಬೇಕು. ಕನ್ನಡ ಸಂಸ್ಕೃತಗಳ ಬಾಂಧವ್ಯ, ಅಂದರೆ ನೆಂಟಸ್ತನ, ಕಡೆಯ ಪಕ್ಷ ೧,೫೦೦ ವರ್ಷಗಳಷ್ಟಾದರೂ ಹಳೆಯದು. ಹಲ್ಮಿಡಿ ಎಂಬ ಸ್ಥಳದಲ್ಲಿ ಒಂದು ಹಳೆಯ ಶಾಸನ ಸಿಕ್ಕಿದೆ. ಶಾಸನ ಎಂದರೆ ಕಲ್ಲಿನ ಹಲಗೆಯ ಮೇಲೆ ಕೆತ್ತಿದ ಬರಹ. ಇಂಥ ಶಾಸನಗಳು ಕನ್ನಡ ನಾಡಿನಲ್ಲಿ ಸಾವಿರಾರು ಇವೆ. ಇವುಗಳಲ್ಲಿ ರಾಜರ ವಂಶಗಳ ವಿಚಾರ, ಆ ರಾಜರು ಭೂಮಿದಾನ ಕೊಟ್ಟ ವಿಚಾರ ಮುಂತಾದ ಕನ್ನಡ ನಾಡಿನ ಚರಿತ್ರೆ, ಕನ್ನಡ ಜನ ಬದುಕಿ ಬಾಳಿದ ರೀತಿ, ನೀತಿ, ಇವುಗಳನ್ನೆಲ್ಲ ಬರೆದಿರುತ್ತದೆ. ಈ ಶಾಸನಗಳ ಬರವಣಿಗೆಯನ್ನು ಶಾಸನ ಸಾಹಿತ್ಯ ಎನ್ನುತ್ತೇವೆ.

ಸುರೇಶ : ಹಲ್ಮಿಡಿಯ ಶಾಸನ ಎಂದಿರಲ್ಲ. ಅದರ ವಿಚಾರ ಕೊಂಚ ಹೇಳಿ, ಗುರುಗಳೆ.

ಶಿವರಾಮಯ್ಯ : ಕನ್ನಡ ನಾಡಿನಲ್ಲಿ ಕನ್ನಡ ಅಕ್ಷರಗಳಲ್ಲಿ ಬರೆದಿರುವ ಶಾಸನಗಳಲ್ಲಿ ಇದು ಅತ್ಯಂತ ಹಳೆಯದು. ಇದರ ಕಾಲ ಸುಮಾರು ಕ್ರಿ.ಶ. ೪೫೦. ಬಹಳ ಹಿಂದೆ ಕನ್ನಡ ನಾಡನ್ನು ಆಳಿದ ಕದಂಬವಂಶದ ರಾಜರ ಕಾಲದ ಶಾಸನ ಇದು. ಆ ಕಾಲದಲ್ಲಿ ಸಂಸ್ಕೃತವನ್ನು ಹೆಚ್ಚಾಗಿ ಬಳಸುತ್ತಿದ್ದರು. ಆದ್ದ ರಿಂದ ಈ ಶಾಸನಗಳಲ್ಲಿ ಕನ್ನಡದ ಜೊತೆಗೆ ಸಂಸ್ಕೃತ ಪದಗಳೂ ಹೆಚ್ಚಾಗಿ ಬಳಕೆಯಾಗಿವೆ. ಬಳಸಿರುವ ಕನ್ನಡ ಹಳಗನ್ನಡ

ಕ್ಕಿಂತಲೂ ಹಳಗನ್ನಡ. ಇದನ್ನು ಪೂರ್ವದ ಹಳಗನ್ನಡ ಎನ್ನಬಹುದು. ಹಿಂದಿನ ಕಾಲದ ಸಾಹಿತ್ಯ ಹಳಗನ್ನಡ ನಡುಗನ್ನಡಗಳಲ್ಲಿ ಇವೆ. ಈಗ ನಾವು ಮಾತಾಡುವುದು, ಬರೆಯುವುದು. ಹೊಸಗನ್ನಡ. ಇವು ಬೇರೆ ಬೇರೆ ಕನ್ನಡ ಭಾಷೆಗಳು ಎಂದು ತಿಳಿದುಕೊಳ್ಳಬೇಡಿ. ಕನ್ನಡ ಅತ್ಯಂತ ಪೂರ್ವದಲ್ಲಿ ಮೂಲ ದ್ರಾವಿಡ ಭಾಷೆ ಆಗಿತ್ತು. ಈ ಮೂಲ ದ್ರಾವಿಡ ಭಾಷೆಯನ್ನು ಆರ್ಯರು ಇಂಡಿಯಾ ದೇಶಕ್ಕೆ ಬರುವುದಕ್ಕೂ ಮೊದಲು ದೇಶದಲ್ಲೆಲ್ಲಾ ನೆಲಸಿದ್ದ ದ್ರಾವಿಡ ಜನ ಆಡುತ್ತಿದ್ದರು. ಈ ಭಾಷೆ, ಒಂದೇ ಮರ ಕವಲುಗಳಾಗಿ ಒಡೆಯುವಂತೆ, ಬೇರೆ ಬೇರೆ ಭಾಷೆಗಳಾಗಿ ಒಡೆದವು. ಈ ಭಾಷೆಗಳು ಚೆನ್ನಾಗಿ ಬೆಳೆದಿರುವುದು ದಕ್ಷಿಣ ಇಂಡಿಯ ದೇಶದಲ್ಲಿ ಮಾತ್ರ, ಇವು ಐದು. ಯಾವುವೆಂದರೆ : ತಮಿಳು, ಕನ್ನಡ, ತೆಲುಗು, ಮಳೆಯಾಳ ಮತ್ತು ತುಳು.

ವಾಣಿ : ಹಾಗಾದರೆ ಈ ದ್ರಾವಿಡ ಭಾಷೆಗಳಿಗೂ ಸಂಸ್ಕೃತಕ್ಕೂ ಸಂಬಂಧ ಇಲ್ಲವೆ, ಗುರುಗಳೆ ?

ಶಿವರಾಮಯ್ಯ : ಯಾವ ಸಂಬಂಧವೂ ಇಲ್ಲ.

ವಾಣಿ : ಕನ್ನಡ ಸಂಸ್ಕೃತದಿಂದ ಹುಟ್ಟಿದ್ದು ಎಂದು ಹೇಳುತ್ತಾರಲ್ಲ ?

ಶಿವರಾಮಯ್ಯ : ಅದು ತಪ್ಪು ತಿಳಿವಳಿಕೆ. ಉತ್ತರ ಭಾರತದ ಹಿಂದಿ, ಗುಜರಾತಿ, ಬಂಗಾಳಿ ಮುಂತಾದವು ಸಂಸ್ಕೃದಿಂದ ಹುಟ್ಟಿದವು. ಇವೆಲ್ಲ ೯–೧೦ನೆಯ ಶತಮಾನದಿಂದ

ಈಚೆಗೆ ಬೆಳೆದವು. ಈ ಭಾಷೆಗಳಿಗೂ ಹಿಂದೆ ಪ್ರಾಕೃತ ಮತ್ತು ಪಾಳಿ ಎಂಬ ಭಾಷೆಗಳು ಜನ ಮಾತಾಡುವ ಭಾಷೆಗಳಾಗಿದ್ದವು; ಜೈನ ಧರ್ಮದ, ಬೌದ್ಧ ಧರ್ಮದ ಗ್ರಂಥಗಳು ಆ ಭಾಷೆಗಳಲ್ಲಿವೆ. ಕರ್ನಾಟಕದಲ್ಲಿ ಜೈನ ಧರ್ಮ ಹೆಚ್ಚಾಗಿ ಹರಡಿದಾಗ, ಪ್ರಾಕೃತ ಭಾಷೆಯ ಮಾತುಗಳು ಕನ್ನಡಕ್ಕೆ ಬಂದುವು. ಅವುಗಳ ಮಾದರಿಯಲ್ಲಿಯೇ ಕನ್ನಡ ಕವಿಗಳೂ ಬುದ್ಧಿವಂತ ಜನರೂ ಸಂಸ್ಕೃತ ಮಾತುಗಳನ್ನು ಕನ್ನಡಕ್ಕೆ ತಿರುಗಿಸಿಕೊಂಡರು. ಸಂಸ್ಕೃತದ ವೃಷಭ ಕನ್ನಡದಲ್ಲಿ ಬಸವ ಆಯಿತು. ಹೀಗೆಯೇ ಶರ್ಕರಾ – ಸಕ್ಕರೆ, ಕ್ರಕಚ – ಗರಗಸ, ವಸತಿ – ಬಸದಿ, ಭೂತಿ–ಬೂದಿ, ಘಟಿಕಾ-ಗಳಿಗೆ, ವೀಥೀ-ಬೀದಿ, ವಾಪಿ-ಬಾವಿ ಮುಂತಾಗಿ ಲೆಕ್ಕ ಮಾಡಲು ಆಗದಷ್ಟು ಸಂಸ್ಕೃತ ಮಾತುಗಳು ಕನ್ನಡಕ್ಕೆ ರೂಪ ಮರಸಿಕೊಂಡು ಬಂದವು. ಇಂಥ ಶಬ್ದಗಳನ್ನು ವ್ಯಾಕರಣದಲ್ಲಿ ತದ್ಭವ ಎನ್ನುತ್ತಾರೆ. ಸಂಸ್ಕೃತ ಮಾತುಗಳನ್ನು ಹಾಗೆಹಾಗೆಯೇ ತೆಗೆದುಕೊಂಡಿರುವದೂ ಉಂಟು. ಉದಾಹರಣೆಗೆ: ಕಮಲ, ಗಂಗೆ, ಆಕಾಶ· ವರ್ಷ, ಮಾಸ, ದಿನ, ದಿವಸ, ಶಿವ, ವಿಷ್ಣು, ಪಾರ್ವತಿ, ಲಕ್ಷ್ಮಿ, ಪದ್ಮ ಮುಂತಾದವು. ಇವನ್ನು ಸಮಸಂಸ್ಕೃತ ಅಥವಾ ತತ್ಸಮ ಎನ್ನುತ್ತಾರೆ. ಹೀಗೆ ಸಂಸ್ಕೃತದಿಂದ ಸಾವಿರಾರು ಪದಗಳು ಕನ್ನಡಕ್ಕೆ ಬಂದವು. ದಿನ ಕಳೆದಂತೆ, ಸಂಸ್ಕೃತ ಪದಗಳು ಅಚ್ಚಗನ್ನಡ ನುಡಿಗಳಿಗೆ ಬದಲಾಗಿ ಅವುಗಳ ಎಡೆಯಲ್ಲಿ ಬಳಕೆಗೆ ಬರತೊಡಗಿದವು.

ವಾಣಿ: ಅದು ಹೇಗಾಯಿತು ? ದಯವಿಟ್ಟು ತಿಳಿಸಿ, ಗುರುಗಳೆ.

ಶಿವರಾಮಯ್ಯ: ಇಲ್ಲಿ ನೋಡಿ, ನಮ್ಮ ಸೊಗಸಾದ

ಕನ್ನಡದ ಬಾನು ಹೋಗಿ ಆಕಾಶ ಬಂತು. ಮೀನು ಮತ್ತು ಆರಿಲ್ ಎಂಬ ನುಡಿಗಳು ಮರೆಯಾಗಿ ನಕ್ಷತ್ರ ಹುಟ್ಟಿತು. ಬೆಳ್ಳಿ ಎಂಥ ಚೆಂದವಾದ ಮಾತು. ಶುಕ್ರ (ನಕ್ಷತ್ರ) ಆಯಿತು. ಕನ್ನಡದ ನೇಸರು ಮುಳುಗಿ ಸೂರ್ಯ, ರವಿ, ಭಾಸ್ಕರ. ಆದಿತ್ಯ ಹುಟ್ಟಿದರು. ಕಡಲು ಸಮುದ್ರವಾಯಿತು. ಹೀಗೆಯೇ ಕನ್ನಡ ಮಾತುಗಳು ಕಳೆದು ಹೋಗುತ್ತಾ ಇರುವುದನ್ನು ಕಂಡುಕೊಂಡ ಕನ್ನಡ ಕವಿಗಳು ಕನ್ನಡಜನಕ್ಕೆ ಬಗೆಬಗೆಯಲ್ಲಿ ಎಚ್ಚರಿಕೆ ನೀಡುತ್ತ ಬಂದರು. ಕನ್ನಡದ ಮೊದಲ ಗ್ರಂಥ ಎಂದು ಹೆಸರಾದ ಕವಿರಾಜಮಾರ್ಗದ ಕವಿ, ಕನ್ನಡವನ್ನೂ ಸಂಸ್ಕೃತವನ್ನೂ ಕೆಟ್ಟಕೆಟ್ಟದಾಗಿ ಬೆರಸಬೇಡಿ ಎಂದ. ಹಾಗೆ ಬೆರಸಿದರೆ ಕುದಿಯುವ ಹಾಲಿಗೆ ಮಜ್ಜಿಗೆಯ ಹನಿ ಬೆರಸಿದ ಹಾಗೆ ಆಗುತ್ತದೆ ಎಂದ. ಕುದಿಯುವ ಹಾಲು ಸ್ವಲ್ಪ ಆರಿದ ಮೇಲೆ ಮಜ್ಜಿಗೆ ಹನಿ ಸೇರಿಸಿದರೆ ಮೊಸರಾಗುತ್ತದೆ. ಕುದಿಯುವಾಗಲೇ ಹಾಕಿದರೆ ಹಾಲು ಒಡೆದುಹೋಗುತ್ತದೆ. ಇನ್ನೊಬ್ಬ ಕವಿ, ಕನ್ನಡ, ಸಂಸ್ಕೃತಗಳ ಹದಗೆಟ್ಟ ಬೆರಕೆ ಮುತ್ತು ಮೆಣಸುಗಳನ್ನು ಪೋಣಿಸಿ ಸರ ಮಾಡಿದ ಹಾಗಾಗುತ್ತದೆ ಎಂದು ನಗೆಯಾಡಿದ್ದಾನೆ.

ರಹೀಮ : ಕನ್ನಡದಲ್ಲಿ ಉರ್ದು ಮಾತುಗಳೂ ಬೆರೆತಿವೆ ಅಲ್ಲವೆ ಗುರುಗಳೆ ?

ಶಿವರಾಮಯ್ಯ : ಹೌದು. ಹೈದರ್-ಟಿಪ್ಪೂಸುಲ್ತಾನರ ಕಾಲದಲ್ಲಿ ಕನ್ನಡಕ್ಕೆ ಹಲವು ಉರ್ದು ಮಾತುಗಳೂ ಸೇರಿಕೊಂಡವು. ಹಾಗೆಯೇ ಪಾರ್ಸಿ, ಪೋರ್ತುಗೀಸು ಭಾಷೆಗಳಿಂದಲೂ ಕೆಲಕೆಲವು ಮಾತುಗಳು ಬಂದಿವೆ. ನಮ್ಮಲ್ಲಿ ಇಲ್ಲದೆ ಇರುವ ಪದಾರ್ಥಗಳು ಮತ್ತು ವಿಚಾರಗಳಿಗೆ ಬೇರೆಯ

ಭಾಷೆಗಳ ಶಬ್ದಗಳನ್ನು ತೆಗೆದುಕೊಳ್ಳುವುದರಿಂದ ಭಾಷೆ ಬೆಳೆಯುತ್ತದೆ. ನಮ್ಮಲ್ಲೇ ಮಾತುಗಳು ಇರುವಾಗ ಹೆರರ ನುಡಿಗಳನ್ನು ತೆಗೆದುಕೊಳ್ಳಬಾರದು. ಅಯ್ಯಾ, ಅಪ್ಪಾ, ಸ್ವಾಮೀ ಎನ್ನೋಣ. ಸರ್ ಯಾಕೆ ? ಕೋಣೆಯನ್ನು ಬಿಟ್ಟು ರೂಮು ಹಿಡಿಯುತ್ತೇವೆ. ಮಕ್ಕಳು ಅಮ್ಮ, ಅಪ್ಪ, ಅತ್ತೆ, ಮಾವ ಎಂದು ಹೇಳಬೇಕಾದ ಕಡೆ ಮಮ್ಮಿ, ಡ್ಯಾಡಿ, ಆಂಟಿ, ಅಂಕಲ್ ಎಂದು ನಾವೇ ಹೇಳಿಕೊಡುತ್ತ ಇದ್ದೇವೆ. ಹೀಗೆ ಮಾಡುವುದು ಮಕ್ಕಳಿಗೆ ವಿಷ ಬೆರೆಸಿ ಹಾಲು ಕುಡಿಸಿದ ಹಾಗೆ. ಮಹಲಿಂಗ ರಂಗ ಕವಿ–“ಸುಲಿದ ಬಾಳೆಯಹಣ್ಣಿನಂತೆ ಲಲಿತವಾಗಿರುವ ಕನ್ನಡ ನುಡಿಯಲ್ಲಿ ತನ್ನ ವಿಚಾರವನ್ನು ತಾನು ತಿಳಿದುಕೊಂಡು ಮೋಕ್ಷ ಪಡೆಯುವುದಕ್ಕೆ ಆಗುವುದಿಲ್ಲವೆ ? ಸಂಸ್ಕೃತ ಯಾಕೆ; ಅದರ ಹೆಚ್ಚುಗಾರಿಕೆ ಏನು?” ಎಂದು ಸವಾಲು ಹಾಕಿದ್ದಾನೆ. ತತ್ವ ವಿಚಾರವನ್ನು ಕನ್ನಡದಲ್ಲೇ ಹೇಳಿದ್ದಾನೆ. ಈ ಮಾತನ್ನು ಇಂಗ್ಲೀಷು, ಹಿಂದಿ ಮುಂತಾದ ಈಗಿನ ಪರಭಾಷೆಗಳಿಗೂ ನಾವು ಅನ್ವಯಿಸಿಕೊಳ್ಳಬೇಕು.

ಸುರೇಶ : ಈ ಮಹಲಿಂಗರಂಗ ಬರೆದಿರುವ ಪುಸ್ತಕ ಅನುಭವಾಮೃತ ಅಲ್ಲವೆ, ಗುರುಗಳೆ ?

ಶಿವರಾಮಯ್ಯ : ಹೌದು, ಸರಿಯಾಗಿ ಹೇಳಿದೆ. ಕನ್ನಡ ಭಾಷೆಯ ವಿಚಾರವಾಗಿ ಸ್ವಲ್ಪ ಹೇಳಿದ್ದೇನೆ. ಇನ್ನೊಂದು ದಿನ ಕನ್ನಡ ಸಾಹಿತ್ಯದ ವಿಚಾರ ತಿಳಿಸಿಕೊಡುತ್ತೇನೆ. ಎಂದು ಅಂದಿನ ಪಾಠವನ್ನು ಮುಗಿಸಿದರು.

ಮರುದಿನವೂ ಕನ್ನಡದ ಪಾಠ ಇತ್ತು. ಶಿವರಾಮಯ್ಯ ನವರು ಬೇಕೆಂದೇ ಪಾಠದ ಪುಸ್ತಕವನ್ನು ಕೈಗೆತ್ತಿಕೊಂಡು, ನಸು ನಗೆ ನಗುತ್ತಾ ವಿದ್ಯಾರ್ಥಿಗಳ ಕಡೆ ಕಣ್ಣಾಡಿಸಿದರು.

ಹಿಂದಿನ ದಿನ ಮೌನವಾಗಿದ್ದ ಹುಡುಗಿ ಒಬ್ಬಳು ಎದ್ದು ನಿಂತಳು.

ಶಿವರಾಮಯ್ಯ : (ನಗುತ್ತ) ಏನು, ಮೌನಗೌರಿ, ಎದ್ದು ನಿಂತೆ ?

ಮಂಗಳಗೌರಿ : ನನ್ನ ಹೆಸರು ಮೌನಗೌರಿ ಅಲ್ಲ ಗುರು ಗಳೆ, ಮಂಗಳಗೌರಿ.

ಶಿವರಾಮಯ್ಯ : ಗೊತ್ತಮ್ಮ, ನಿನ್ನೆ ಇತರರ ಹಾಗೆ ನೀನೂ ಸುಮ್ಮನೆ ಕುಳಿತು ನನ್ನ ಮಾತು ಕೇಳುತ್ತಿದ್ದೆಯಲ್ಲಾ ಅದಕ್ಕೆ ಹಾಗೆ ಕರೆದೆ.

ಮಂಗಳಗೌರಿ : ನೀವು ಹೇಳಿದ ಕನ್ನಡ ಭಾಷೆಯ ವಿಚಾರ ಅಷ್ಟು ಸೊಗಸಾಗಿತ್ತು. ಅದಕ್ಕೇ ನಾವೆಲ್ಲಾ ಸುಮ್ಮನೆ ಆಲಿಸುತ್ತ ಕುಳಿತಿದ್ದೆವು. ನೀವು ಇನ್ನೊಂದು ದಿನ ಕನ್ನಡ ಸಾಹಿತ್ಯದ ವಿಚಾರ ತಿಳಿಸುತ್ತೇನೆ ಎಂದಿದ್ದಿರಿ. ಇವತ್ತೇ ತಿಳಿಸಿಕೊಡಿ ಸಾರ್.

ಶಿವರಾಮಯ್ಯ : ಆಗಲಿ ಮೇಡಮ್, ಕೂತುಕೊಳ್ಳಿ. ಇವತ್ತು ನೀವು ಯಾರೂ ಪ್ರಶ್ನೆ ಕೇಳಕೂಡದು. ನಾನು ಕೇಳಿದರೆ ನೀವು ಉತ್ತರ ಕೊಡಬೇಕು. ಅಯ್ಯಾ, ಕೃಷ್ಣಪ್ಪ, ಕನ್ನಡದ ಆದಿ ಗ್ರಂಥ ಯಾವುದು ಹೇಳಯ್ಯ ?

ಕೃಷ್ಣಪ್ಪ : ನಿನ್ನೆ ತಾನೆ ಹೇಳಿದಿರಲ್ಲಾ ಪಂಡಿತರೇ, ಕವಿರಾಜಮಾರ್ಗ ಅಂತ.

ಶಿವರಾಮಯ್ಯ : ಸರಿ. ಈ ಕವಿರಾಜಮಾರ್ಗ ಒಂದು ಲಕ್ಷಣ ಗ್ರಂಥ. ಅಂದರೆ ಕಾವ್ಯ ಹೇಗಿರಬೇಕು, ಅದರಲ್ಲಿ ಎಷ್ಟು ಬಗೆಗಳಿವೆ, ಅದರಲ್ಲಿ ಉಪಯೋಗಿಸುವ ಅಲಂಕಾರಗಳು ಯಾವುವು, ಕಾವ್ಯ ಓದುವುದರಿಂದ ಆಗುವ ಪ್ರಯೋಜನ ಏನು ? ಇವೇ ಮುಂತಾದ ವಿಷಯಗಳನ್ನು ತಿಳಿಸುವ ಗ್ರಂಥವೇ ಲಕ್ಷಣ ಗ್ರಂಥ. ಈ ಕವಿರಾಜಮಾರ್ಗವನ್ನು ಬರೆದವರು ಯಾರು ಗೊತ್ತೆ ?

ಸುರೇಶ : ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗ. ಇವನು ೮೧೪ ರಿಂದ ೮೭೭ರ ವರೆಗೆ ಆಳಿದ. ಕವಿರಾಜಮಾರ್ಗ ೮೫೦ರಲ್ಲಿ ರಚಿತವಾಯಿತಂತೆ. ನಮ್ಮ ಬೆಂಗಳೂರಿನ ನೃಪತುಂಗ ರಸ್ತೆ ಇವನ ನೆನಪನ್ನು ಶಾಶ್ವತ ಮಾಡಿದೆ.

ಶಿವರಾಮಯ್ಯ : ನೀನು ಹೇಳಿದ್ದೆಲ್ಲ ಸರಿ. ಆದರೆ, ಕವಿರಾಜಮಾರ್ಗವನ್ನು ಬರೆದವನು ನೃಪತುಂಗ ಅಲ್ಲ, ಅವನ ಆಸ್ಥಾನ ಕವಿ ಶ್ರೀವಿಜಯ ಎಂದು ಈಗ ವಿದ್ವಾಂಸರು ನಿಶ್ಚಯ ಮಾಡಿದ್ದಾರೆ. ಈ ಗ್ರಂಥದಲ್ಲಿ ಕನ್ನಡ ನಾಡಿನ ವಿಸ್ತಾರವನ್ನು ಹೀಗೆ ಹೇಳಿದೆ—

ಕಾವೇರಿಯಿಂದಮಾ ಗೋ
ದಾವರಿವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯ ವಿಲೀನ ವಿಶದ ವಿಷಯ ವಿಶೇಷಂ ॥

ಇಷ್ಟೇ ಅಲ್ಲ, ನಮ್ಮ ಕನ್ನಡದ ಜನ, "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂದು ಕವಿ ಅವರನ್ನು ಕೊಂಡಾಡಿದ್ದಾನೆ. ಎಂದರೆ ಕನ್ನಡಿಗರು ಹುಟ್ಟು ಜಾಣರು, ಓದಬೇಕು ಅಂತ ಓದದೆಯೇ ಕವಿತೆ ಕಟ್ಟುವ ಶಕ್ತಿ ಪಡೆದಿದ್ದರು ಅಂತ ಆ ಮಾತಿಗೆ ಅರ್ಥ ಮಾಡಬಹುದು. ಇಂಥ ಓದುಬರಹ ಬಾರದ ಜನ ಹೊಲದಲ್ಲಿ ಕೆಲಸ ಮಾಡು ವಾಗ, ಬಂಡಿ ಹೊಡೆಯುವಾಗ, ಮನೆಯಲ್ಲಿ ಬತ್ತ ಕುಟ್ಟುವಾಗ, ರಾಗಿ ಬೀಸುವಾಗ, ಮಕ್ಕಳನ್ನು ತೊಟ್ಟಿಲಲ್ಲಿ ತೂಗುವಾಗ, ತಮ್ಮ ನಲಿವು, ನೋವು, ನಂಬಿಕೆ, ನಡವಳಿಕೆ, ನೀತಿ ಇವೆಲ್ಲವನ್ನೂ ಕುರಿತು ಹಾಡು ಕಟ್ಟಿಕೊಂಡು ಬಂದರು. ಈ ಹಾಡುಗಳು, ನಾಡಪದಗಳು, ಬಾಯಿಂದ ಬಾಯಿಗೆ ಹರಿದು ಬಂದವು. ಹೊಸ ನೀರು ಬಂದಾಗ ಅದು ಹಳೆಯ ನೀರನ್ನು ಕೊಚ್ಚಿಕೊಂಡು ಹೋಗುವ ಹಾಗೆ. ಎಷ್ಟೋ ಹಳೆಯ ಹಾಡುಗಳು ಈಗ ಜನಕ್ಕೆ ಮರೆತುಹೋಗಿವೆ. ಈಚಿನವು ಹಳ್ಳಿಗಾಡಿನಲ್ಲಿ ಇನ್ನೂ ನೆನಪಿ ನಲ್ಲಿ ಉಳಿದಿವೆ. ಇವನ್ನೆಲ್ಲಾ ಒಟ್ಟಿನಲ್ಲಿ ಜನಪದ ಸಾಹಿತ್ಯ ಎನ್ನುತ್ತೇವೆ. ಇದು ಹಾಳಾಗಬಾರದು ಅಂತ ಇದನ್ನು ಕಲೆ ಹಾಕಿ ಅಚ್ಚು ಹಾಕಿಸುವ ಕೆಲಸ ಈಗ ೩೦–೪೦ ವರ್ಷಗಳಿಂದ ನಡೆಯುತ್ತಿದೆ. ಮಾನವಮಿಯ ಪದ, ಗೋವಿನ ಕಥೆ, ಲಾವಣಿ ಗಳು- ಹೀಗೆ ಬೇಕಾದಷ್ಟು ಇವೆ. ನಮ್ಮ ಕನ್ನಡ ಶಾರದೆ ಇದಾ ಳಲ್ಲ ವಾಣಿ, ಅವಳಿಗೆ ಗೊತ್ತಿರಬೇಕು ಕೆಲವು. ಎಲ್ಲಮ್ಮಾ ಒಂದಾದರೂ ಹೇಳಮ್ಮ...ಸಂಕೋಚ ಬೇಡ, ಹೇಳಮ್ಮಾ,

ವಾಣಿ : ನಮ್ಮಮ್ಮ ಹೇಳುತ್ತಾ ಇದ್ದ ಹಾಡುಗಳಲ್ಲಿ ಎಲ್ಲೋ ಒಂದೆರಡು ನೆನಪಿದೆ ಗುರುಗಳೆ. ಒಂದನ್ನ ಹೇಳ್ತೀನಿ—

ಯಾಕಳುವೆ ಎಲೆ ರಂಗ ಬೇಕಾದ್ದು ನಿನಗಿದೆ
ನಾಕೆಮ್ಮೆ ಕರೆದ ನೊರೆಹಾಲು
ನೊರೆಹಾಲು ಸಕ್ಕರೆ
ನೀಕೇಳಿದಾಗ ಕೊಡುವೆನು

ಶಿವರಾಮಯ್ಯ : ಕೇಳಿದಿರಾ ಎಷ್ಟು ಚೆನ್ನಾಗಿದೆ. ಇಂಥ ಪದಗಳು ಹಾಳಾಗದಂತೆ ನೀವು ಕಲೆ ಹಾಕಿ ಜೋಪಾನ ಮಾಡಬೇಕು.

ಸುರೇಶ : ಇದು ಜನಪದ ಸಾಹಿತ್ಯದ ಮಾತಾಯಿತು. ಉಳಿದ ಸಾಹಿತ್ಯ, ಬಹಳ ಹಳೆಯ ಕಾಲದ ಗದ್ಯ ಪದ್ಯ ಗ್ರಂಥಗಳು. ಇವು ಹೇಗೆ ಉಳಿದುಬಂದಿವೆ ಗುರುಗಳೆ ?

ಶಿವರಾಮಯ್ಯ : ಕವಿಗಳು ಓಲೆಯ ಗರಿಗಳ ಮೇಲೆ ತಮ್ಮ ಕಾವ್ಯಗಳನ್ನು ಕಂಟ ಎಂಬ ಕಬ್ಬಿಣದ ಸಲಾಕಿಯಿಂದ ಕೊರೆದು, ಕಪ್ಪಿಡುತ್ತಿದ್ದರು. ಹಿಂದಿನ ಕಾಲದಲ್ಲಿ ಕಾಗದ, ಅಚ್ಚಿನ ಯಂತ್ರ ಇವು ಇರಲಿಲ್ಲ. ಇಂಥ ಓಲೆಯ ಗರಿಯ ಕಟ್ಟುಗಳು ವಿದ್ಯೆ ಕಲಿಯುವ ಮನೆಗಳಲ್ಲಿ, ಅರಮನೆಗಳಲ್ಲಿ, ಧರ್ಮಗುರುಗಳ ಮಠಗಳಲ್ಲಿ ಅಡಗಿಕೊಂಡಿದ್ದುವು. ಕಾಗದ ಬಳಕೆಗೆ ಬಂದಿದ್ದರೂ, ೧೯ನೆಯ ಶತಮಾನದವರೆಗೂ ಗ್ರಂಥಗಳನ್ನು ಓಲೆಯ ಗರಿಯ ಮೇಲೇ ಬರೆಯುತ್ತಿದ್ದರು. ಈ ಗ್ರಂಥಗಳಲ್ಲಿ ಪದ್ಯ ಕಾವ್ಯ, ಗದ್ಯ ಕಾವ್ಯ, ವ್ಯಾಕರಣ, ಛಂದಸ್ಸು, ಜ್ಯೋತಿಷ್ಯ, ಗಣಿತ, ಆಯುರ್ವೇದ, ಗಜಶಾಸ್ತ್ರ, ಅಶ್ವಶಾಸ್ತ್ರ, ಪಾಕಶಾಸ್ತ್ರ ಮುಂತಾದ ಶಾಸ್ತ್ರಗಳು—ಇವೆಲ್ಲಾ ಇವೆ. ಈ ಗ್ರಂಥ ರಾಶಿಯನ್ನು ಒಟ್ಟಾಗಿ ಪ್ರಾಚೀನ, ಎಂದರೆ ಹಳೆಯ ಕಾಲದ ಸಾಹಿತ್ಯ ಎನ್ನುತ್ತೇವೆ. ಅನೇಕ ಓಲೆಯ ಗರಿಯ

ಗ್ರಂಥಗಳು ಅಚ್ಚಾಗಿವೆ. ಅಚ್ಚಾಗಬೇಕಾದವು ಬೇಕಾದಷ್ಟಿವೆ. ಇವನ್ನು ಕಾಪಾಡಬೇಕು. ಈ ಪ್ರಾಚೀನ ಕನ್ನಡ ಸಾಹಿತ್ಯದ ವಿಚಾರವಾಗಿ ಸ್ವಲ್ಪ ತಿಳಿಸುತ್ತೇನೆ.

ಕನ್ನಡದಲ್ಲಿ ಕಾವ್ಯಗಳನ್ನು ಮೊದಲು ಬರೆದವರು ಜೈನರು. ಕವಿರಾಜಮಾರ್ಗವನ್ನು ಬರೆದ ಶ್ರೀವಿಜಯ ಜೈನ. ಅನಂತರ ಪಂಪನೆಂಬುವನು ವ್ಯಾಸರು ಬರೆದ ಸಂಸ್ಕೃತ ಮಹಾಭಾರತದ ಕಥೆಯನ್ನು ಕನ್ನಡದಲ್ಲಿ 'ವಿಕ್ರಮಾರ್ಜುನ ವಿಜಯ' ಎಂಬ ಹೆಸರಿನಲ್ಲಿ ಬರೆದನು. ಚಾಲುಕ್ಯ ವಂಶದ ಅರಿಕೇಸರಿ ಎಂಬ ದೊರೆಯ ಆಸರೆಯಲ್ಲಿ ಇದ್ದ ಪಂಪ. ಅದಕ್ಕಾಗಿ ತಾನು ಬರೆದ ಭಾರತದಲ್ಲಿ ಅರ್ಜುನನನ್ನು ಹೊಗಳುವ ನೆಪದಲ್ಲಿ ಉದ್ದಕ್ಕೂ ಅರಿಕೇಸರಿಯನ್ನು ಹೊಗಳಿಕೊಂಡು ಬಂದಿದ್ದಾನೆ. ಇದು 'ಪಂಪಭಾರತ' ಎಂದು ಹೆಸರಾಗಿದೆ. ಪಂಪ ನನ್ನು ಸರಿಗಟ್ಟುವ ಕವಿ ಬೇರೆ ಯಾರೂ ಅಲ್ಲ ಎಂದು ಅನೇಕ ಈಚಿನ ಕವಿಗಳು ಅವನನ್ನು ಹೊಗಳಿದ್ದಾರೆ. ಭಾರತ ಅಲ್ಲದೆ, ೨೪ ಜೈನ ತೀರ್ಥಂಕರರಲ್ಲಿ ಮೊದಲನೆಯವನಾದ ವೃಷಭದೇವ ನನ್ನು ಕುರಿತು ಒಂದು ಪುರಾಣವನ್ನು ೯೪೧ರಲ್ಲಿ ಬರೆದು ಮುಗಿಸಿದರು.

ರಮೇಶ : ಕನ್ನಡ ಸಾಹಿತ್ಯ ಪರಿಷತ್ತು ಇರುವ ಬೀದಿಗೆ ಪಂಪ ಮಹಾಕವಿ ರಸ್ತೆ ಎಂದು ಹೆಸರಿಟ್ಟಿದ್ದಾರೆ.

ಶಿವರಾಮಯ್ಯ : ಹೌದು. ಎರಡು ಕಾವ್ಯಗಳೂ ಮಹಾ ಕಾವ್ಯಗಳು. ಚಂಪೂ ಎಂದರೆ ಗದ್ಯ ಪದ್ಯ ಮಿಶ್ರವಾಗಿರುವ ಕಾವ್ಯ. ಇವನ ಮೇಲು ಪಂಕ್ತಿಯನ್ನು ಹಿಡಿದು ಪೊನ್ನ ಎಂಬ ಕವಿ ಶಾಂತಿ

ನಾಥ ತೀರ್ಥಂಕರನ ಮೇಲೆ ಪುರಾಣ ಬರೆದಿದ್ದಾನೆ. ತೀರ್ಥಂಕರು ಎಂದರೆ ಮೋಕ್ಷ ಮಾರ್ಗ ತೋರಿಸಿಕೊಡುವ ಮಹಾಪುರುಷರು. ರನ್ನಕವಿ 'ಅಜಿತನಾಥ ಪುರಾಣ'ವನ್ನೂ, ಭೀಮ-ದುರ್ಯೋಧನರ 'ಗದಾಯುದ್ಧ'ವನ್ನು ವರ್ಣಿಸುವ 'ಸಾಹಸ ಭೀಮ ವಿಜಯ' ವನ್ನೂ ಬರೆದಿದ್ದಾನೆ. ಈ ಮೂವರೂ ಕನ್ನಡದ 'ರತ್ನತ್ರಯ' ಎಂದು ಹೆಸರಾಗಿದ್ದಾರೆ. ಇವರಲ್ಲದೆ, ನಾಗಚಂದ್ರ, ಜನ್ನ, ಮಧುರ, ನೇಮಿಚಂದ್ರ, ಅಚಣ್ಣ ಎಂಬ ಜೈನ ಕವಿಗಳು ಜೈನ ಪುರಾಣಗಳನ್ನು ಬರೆದಿದ್ದಾರೆ.

ಈ ಜೈನ ಕವಿಗಳಾದ ಮೇಲೆ ೧೨ನೆಯ ಶತಮಾನದಲ್ಲಿ ಶಿವನ ಭಕ್ತರಾದ ಶಿವಶರಣರು ವಚನಗಳನ್ನು ಹೇಳಿದರು. ಅವರನ್ನು ವಚನಕಾರರು ಎಂದು ಕರೆಯುತ್ತೇವೆ. ಈ ವಚನ ಕಾರರಲ್ಲಿ ಅತ್ಯಂತ ಮುಖ್ಯರಾದವರು — ಅಲ್ಲಮಪ್ರಭು, ಬಸವೇಶ್ವರ, ಚೆನ್ನಬಸವಣ್ಣ, ಸಿದ್ಧರಾಮ ಮುಂತಾದವರು. ಈ ವಚನಗಳು ಗದ್ಯವಾದರೂ ಹಾಡಲು ತಕ್ಕುವಾಗಿವೆ. ಪ್ರತಿ ಯೊಂದು ವಚನದ ಕೊನೆಯಲ್ಲೂ ವಚನಕಾರನ ಇಷ್ಟದೇವರ ಹೆಸರು ತರುತ್ತದೆ, ಉದಾಹರಣೆಗೆ ಬಸವಣ್ಣನವರ ಈ ವಚನವನ್ನು ಕೇಳಿ :

> ಕಲ್ಲನಾಗರ ಕಂಡರೆ ಹಾಲನೆರೆ ಎಂಬರು
> ದಿಟದ ನಾಗರ ಕಂಡರೆ ಕೊಲ್ಲು ಎಂಬರಯ್ಯಾ
> ಉಂಬ ಜಂಗಮ ಬಂದರೆ ನಡೆಯೆಂಬರು
> ಉಣ್ಣದ ಲಿಂಗಕ್ಕೆ ಬೋನವ ಹಿಡಿವರಯ್ಯಾ
> ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದರೆ
> ಕಲ್ಲುತಾಗಿದ ಮಿಟ್ಟೆಯಂತೆ ಅಪ್ಪರಯ್ಯಾ.

ವಚನಕಾರರಲ್ಲದೆ, ಶಿವಭಕ್ತರಾದ ಕವಿಗಳೂ ಇದ್ದಾರೆ. ಇವರಲ್ಲಿ, 'ಗಿರಿಜಾ ಕಲ್ಯಾಣ' ಮತ್ತು ಶಿವಭಕ್ತರ ಕಥೆಗಳನ್ನು 'ರಗಳೆ' ಎಂಬ ಧಾಟಿಯಲ್ಲಿ ಬರೆದ ಹರಿಹರ, 'ಹರಿಶ್ಚಂದ್ರ ಕಾವ್ಯ' ವನ್ನು ಬರೆದ ರಾಘವಾಂಕ ಮುಖ್ಯರು. ೧೫ನೆಯ ಶತಮಾನದ ಸರ್ವಜ್ಞನ ವಚನಗಳ ವಿಚಾರ ನಿಮಗೆ ಗೊತ್ತೇ ಇದೆ. ವಚನಗಳು ಶಿವಭಕ್ತಿಯ ಜೊತೆಗೆ ನೀತಿಯನ್ನೂ ಬೋಧಿಸುತ್ತವೆ. ಶಿವಶರಣರು ಜಾತಿ ಭೇದಗಳನ್ನು ವಿರೋಧಿಸಿದರು. ದುಡಿಮೆಯ ಹಿರಿಮೆಯನ್ನು ಸಾರಿದರು.

ಶಿವಭಕ್ತರಾದ ಮೇಲೆ ವಿಷ್ಣುವಿನ ಭಕ್ತರು. ರುದ್ರಭಟ್ಟನು ಕೃಷ್ಣನ ಲೀಲೆಗಳನ್ನು 'ಜಗನ್ನಾಥ ವಿಜಯ'ದಲ್ಲಿ ವರ್ಣಿಸಿದ್ದಾನೆ. ಕುಮಾರವ್ಯಾಸನ ಭಾರತವನ್ನೂ ಲಕ್ಷ್ಮೀಶನ 'ಜೈಮಿನಿ ಭಾರತ' ವನ್ನೂ ನೀವೆಲ್ಲಾ ಬಲ್ಲಿರಿ. ಇವುಗಳಲ್ಲಿ ಕೃಷ್ಣನ ಮಹಿಮೆಗೆ ಹಿರಿಯ ಸ್ಥಾನ. ವಿಷ್ಣುಭಕ್ತರಲ್ಲಿ ಹರಿದಾಸರದ್ದೇ ಒಂದು ಪಂಗಡ. ಇವರಲ್ಲಿ ಪುರಂದರದಾಸರು, ಕನಕದಾಸರು ತುಂಬ ಹೆಸರಾದವರು. ರೇಡಿಯೋದಲ್ಲಿ ಇವರ ಹಾಡುಗಳನ್ನು ನೀವು ಕೇಳುತ್ತಲೇ ಇರುವಿರಿ. ಇವರು ಹರಿಭಕ್ತಿಯನ್ನು ಸಾರಿದರು. ಶಿವಶರಣರಂತೆ ಜನರ ನಡತೆಯನ್ನು ತಿದ್ದಿದರು.

ವಾಣಿ : ಹಿಂದಿನ ಕಾಲದಲ್ಲಿ ಹೆಂಗಸರು ಏನೂ ಬರೆದಿಲ್ಲವೆ ಗುರುಗಳೆ ?

ಶಿವರಾಮಯ್ಯ : ಬರೆದಿದ್ದಾರೆ. ಅವರ ಸಂಖ್ಯೆ ಬಲು ಕಡಿಮೆ. ವಚನಕಾರ್ತಿ ಮಹಾದೇವಿಯಕ್ಕ, 'ಚಂದ್ರಹಾಸನ

ಕಥೆ' ಬರೆದ ಗಿರಿಯಮ್ಮ, 'ಹದಿಬದೆಯ ಧರ್ಮ' ಬರೆದ ಹೊನ್ನಮ್ಮ–ಇಷ್ಟು ಜನ ಜ್ಞಾಪಕಕ್ಕೆ ಬರುತ್ತಾರೆ, ಈಗ ಹೆಂಗಸರೂ ಹೆಚ್ಚಾಗಿ ಬರೆಯುತ್ತಿದ್ದಾರೆ.

ಒಟ್ಟಿನಲ್ಲಿ ಜಾತಿ ಮತ ಭೇದ ಇಲ್ಲದೆ ಎಲ್ಲ ಪಂಗಡದವರೂ ಕನ್ನಡ ಶಾರದೆಯ ಸೇವೆ ಮಾಡಿದ್ದಾರೆ. ಕನ್ನಡ ಜನವನ್ನು ಉದ್ಧಾರ ಮಾಡಿದ್ದಾರೆ. ಈ ಕವಿಗಳೆಲ್ಲ ಪೂಜ್ಯರು ಎಂದು ಹೇಳಿ ಕನ್ನಡದ ಕತೆಯನ್ನು ಮುಗಿಸೋಣ.

ಗತಸಿರಿಯ ಸವಿನೆನೆಸು

—'ಸಿಸು'

ಗತವೈಭವ ನೆನೆನೆನೆದು
ಮತಿಗೆಟ್ಟ ಕನ್ನಡಿಗ
ಮನದೊಳಗೆ ಮರುಗದಿರು
"ಅಂದಿನಂದವದಾಯ್ತು
ಇನ್ನೇನು ಕಾಂಬೆನಾ ?"
ಎಂದೆಂದು ಕೊರಗದಿರು
ಗತವೀರ ಪುರುಷರಂದೆಸಗಿದಾ ಕೃತ್ಯಗಳು
ನಿನಗಿಂದು ದಾರಿಯಲಿ ನಿಂದ ಕೈಗಂಬಗಳು
ನೀರವದ ನಿರ್ಜನದ ಮಳಲುಗಾಡಿನೊಳಲ್ಲಿ
ಅಲೆಯುತಿಹ ಅರಬನವ
ಒಂಟೆ ಹೆಜ್ಜೆಯ ಕಂಡು
ಹಿಗ್ಗಿ ಹಿಗ್ಗುವ ತೆರದಿ
ಮಾಡಿ ಮಡಿದವರನ್ನು
ಮನದೆದುರು ಹಿಡಿ ಹಿಡಿದು
ಅವರ ಮಾರ್ಗವ ಪಿಡಿದು
ಸ್ವಂತ ರಾಜ್ಯವ ಕಟ್ಟು
ಮೆಟ್ಟುವರ ತಲೆಮೆಟ್ಟು
ಸ್ವಾತಂತ್ರ್ಯದಾಗುಟ್ಟು
ಹಿರಿಯ ಸಂಸ್ಕೃತಿ ಮೆರೆಸು
ಸಾಹಿತ್ಯಸಿರಿ ಬೆಳೆಸು
ಗತಸಿರಿಯ ಸವಿನೆನೆಸು

ವಿಚಿತ್ರ ಶಿಕ್ಷೆ

ದೇವುಡು

ಪ್ರವೇಶ

ಸೂತ್ರಧಾರ : (ಪ್ರವೇಶಿಸಿ) ಹಾಸ್ಯಕ್ಕೊಡೆಯನಾದ ವಿನಾಯಕನು ನಮ್ಮ ನಾಯಕನಿಗೆ ಮಂಗಳವನ್ನು ಉಂಟುಮಾಡಲಿ. ಈ ರೂಪಕವನ್ನು ನೋಡಿ ನಲಿಯುವ ರಸಿಕರ ಸಂತೋಷವು ಆನಂದವಾಗಿ ಪರಿಣಮಿಸಲಿ. ಹಿರಿಯರೇ 'ವಿಚಿತ್ರ ಶಿಕ್ಷೆ' ಯನ್ನು ಪ್ರಯೋಗಿಸಿ, ತಮ್ಮಿಂದ ಅಭಿನಯಕುಶಲ ರೆಂದೆನಿಸಿಕೊಳ್ಳಲು ನಾವು ಉತ್ಸಾಹಿಗಳಿರುವೆವು. ನಮಗಿನ್ನು ಅಪ್ಪಣೆಯಾಗಲಿ.

[ಸೂತ್ರಧಾರನು ಕೈಮುಗಿದು ಪುಷ್ಪಾಂಜಲಿಯನ್ನು ಒಪ್ಪಿಸಿ ಹೋಗುವನು. ಕೃಷ್ಣದೇವರಾಯನ ಅರಮನೆಯ ಚಂದ್ರ ಶಾಲೆಯಲ್ಲಿ ಸಂಗೀತ ಸಭೆಯು ನೆರೆದಿರುವುದು. ದೇವರಾಯ, ತಿಮ್ಮರಾಯ, ಶಿವರಾಯರು ಕುಳಿತಿರುವರು. ಪ್ರಹರಿಯು ಬಂದು ಮುಜುರೆ ಮಾಡಿ ನಿಲ್ಲುವನು. ಚಕ್ರವರ್ತಿ ಸನ್ನೆ ಯಿಂದಲೇ ಏನೆಂದು ಕೇಳುವನು.]

ದೃಶ್ಯ ೨
(ಅರಮನೆಯ ಚಂದ್ರಶಾಲೆ)

ಪ್ರಹರಿ : ನಮ್ಮ ಸಚಿವರು ದಯಮಾಡಿಸುತ್ತಿರುವರು ಪ್ರಭು.

ಕೃಷ್ಣ : ವಿಜಯನಗರದಲ್ಲೇ ಇದ್ದನೋ ?

ಪ್ರಹರಿ : ಮನೆಯಲ್ಲಿಯೇ ಇದ್ದರು ಮಹಾಪ್ರಭು.

ದೇವ : ಮನೆಯಲ್ಲಿದ್ದೂ ಬರುವುದಕ್ಕೆ ಇಷ್ಟು ತಡ ! ಆಳ ಮೇಲೆ ಆಳು ನಡೆಯದಿದ್ದರೆ ಬರುವುದಕ್ಕಾಗುವುದಿಲ್ಲ ವೇನೋ ಸವಾರಿ.

ಪ್ರಹರಿ : ಇಗೋ ಅವರೇ ಬಂದರು.

[ರಾಮಕೃಷ್ಣನು ಬಂದು ದೊರೆಗಳಿಗೆ ಮುಜುರೆ ಮಾಡುವನು, ದೊರೆಯು ಅತ್ತ ತಿರುಗಿಕೊಳ್ಳುವನು].

ರಾಮಕೃಷ್ಣ : (ಬಹುಸಂಕಟಪಡುತ್ತ) ಅಯ್ಯೋ ! ವಿರೂಪಾಕ್ಷ ! ಆ ಹಾಳು ಜೋಯಿಸನ ಮಾತು ನಿಜವಾಯಿತೇ ಅಪ್ಪ ? ಹೋ ! ಹೋಗು ! ನಿನ್ನ ಚಿತ್ತ ! ಹಣೆಯಲ್ಲಿ ಬರೆದ ಹಾಗೆ ಆಗಿಹೋಗಲಿ.

[ದೊರೆಗೆ ಅದೇನೋ ಕೇಳಬೇಕು ಎಂಬ ಕುತೂಹಲವು ಬರುವುದು. ಆದರೂ ಅದನ್ನು ತಡೆದುಕೊಂಡು, ರಾಮಕೃಷ್ಣನ ಕಡೆ ತಿರುಗಿದ್ದ ಮುಖವನ್ನು ಅತ್ತಕಡೆ ತಿರುಗಿಸಿಕೊಳ್ಳುವನು. ಮಿಕ್ಕವರೂ ಕುತೂಹಲವನ್ನು ಪ್ರದರ್ಶಿಸುವರು. ಆದರೂ ದೊರೆಯಿರುವನೆಂದು ಯಾರೂ ಮಾತನಾಡರು. ದೊರೆ ಸನ್ನೆ ಮಾಡಲು ಸಂಗೀತವು ಪ್ರಾರಂಭವಾಗುವುದು.]

ರಾಮಕೃಷ್ಣ : (ಗಟ್ಟಿಯಾಗಿ ದೊರೆಗೆ ಕೇಳಿಸುವಂತೆ) ರಾಮಕೃಷ್ಣ ! ಇಷ್ಟು ದಿನವೂ ಕರ್ಣಾಟಕಾಧಿಪತಿ ಕೃಷ್ಣದೇವರಾಯರ ಆಸ್ಥಾನದ ವಿದೂಷಕನೆಂದು ಪಟ್ಟದಾನೆಗಿಂತ ಹೆಚ್ಚಾಗಿ ಮೆರೆಯುತ್ತಿದ್ದೆ ! ನಡೆ ಈಗ ! ನೋಡು ನಿನಗೇನಾಗುತ್ತದೆಯೋ ?

ಕೃಷ್ಣರಾಯ : [ತಿರುಗಿ, ಮೇಲಿಂದ ಕೆಳಗಿನವರೆಗೂ ರಾಮಕೃಷ್ಣನನ್ನು ಅದೇನದು ಎಂದು ಕೇಳುವವನಂತೆ ನೋಡಿ ಮತ್ತೆ ತಿರುಗಿ ಕೊಳ್ಳುವನು.]

ರಾಮಕೃಷ್ಣ: (ನಿರಾಶೆಗೊಂಡವನಂತೆ) ಮಹಾಪ್ರಭು (ದೊರೆಯು ತಿರುಗುವನು, ಕಪಟ ಕೋಪ) ದೇವರಾಯಪ್ರಭು ! ನಮ್ಮೊಡೆಯನಿಗೆ ತಾವು ಬಿನ್ನವಿಸೋಣಾಗಲಿ. “ರಾಮಕೃಷ್ಣನಿಗೆ ಇನ್ನೊಂದು ಲೋಕದಿಂದ ಅಪ್ಪಣೆ ಚೀಟಿ ಬಂದಿದೆಯತೆ. ಅವನು ಅವಸರವಾಗಿ ಹೊರಟು ಬಿಟ್ಟ. ಕೊನೆಯ ಸಲ ತಮ್ಮ ದರ್ಶನ ಮಾಡಿ ಬೀಳ್ಕೊಂಡು ಹೋಗಬೇಕು ಅಂತ ಬಂದ. ಮಹಾಸ್ವಾಮಿಯವರು ಸಂಗೀತ ಗೋಷ್ಠಿಯಲ್ಲಿದ್ದರು. ಅವರನ್ನು ನಾನೇಕೆ ತೊಂದರೆಗೊಳಿಸಲಿ ಎಂದು ಹಾಗೇ ಹೊರಟು ಹೋದ” ಎಂದು ತಾವೇ ಅರಿಕೆ ಮಾಡಿ. “ನಾನು ಕೈಮುಗಿದೆ. ಮಾರ್ಕಂಡೇಯನ ಹಾಗೆ, ಸಾವಿರ ವರ್ಷಕಾಲ, ದೇವೇಂದ್ರನ ವೈಭವದಲ್ಲಿ ಇರಬೇಕು ಎನ್ನುವುದೇ ನನ್ನ ಹರಕೆ ! ನನಗೆ ಅಪ್ಪಣೆಯಾಗಬೇಕು” ಎಂದು ಸನ್ನಿಧಾನದಲ್ಲಿ ಅರಿಕೆ ಮಾಡಿ. ನಾನು ಹೊರಟುಹೋದೆ ಅಂತ ನನ್ನ ಪರವಾಗಿ ಅರಿಕೆಮಾಡಿ. [ಹೊರಡುವನು]

[ಎಲ್ಲರೂ ಕಕ್ಕಾಬಿಕ್ಕಾಗುವರು. ದೊರೆ 'ಹೊರಕ್ಕೆ ಬಿಡಬೇಡ' ಎಂದು ಸನ್ನೆಮಾಡಲು ಪ್ರಹರಿಯು ಮರ್ಯಾದೆಯಿಂದ ತಡೆಯುವನು.]

ರಾಮಕೃಷ್ಣ : ಅಯ್ಯೋ ! ಸಂಗೀತ, ಈ ಚಂದ್ರಿಕೆ, ಈ ಸುಗಂಧ ಇದೆಲ್ಲಾ ನೋಡಿ ನಿನಗೂ ಬುದ್ಧಿ ಕೆಟ್ಟಿತೇ ಅಪ್ಪ! ಅಯ್ಯೋ ಪಾಪ ! ತಡೆಯುವುದು ಅರಮನೆಯೊಳಕ್ಕೆ ಬರುವವರನ್ನ. ಹೋಗುವವರನ್ನಲ್ಲ ! ದಾರಿ ಬಿಡು.

[ಮುಂದಕ್ಕೆ ಹೊರಡುವನು. ಪ್ರಹರಿಯು ದೊರೆಗಳ ಕಡೆ ನೋಡುವನು. ದೊರೆಗಳು ದೇವರಾಯನ ಕಡೆ ನೋಡುವರು]

ದೇವರಾಯ : ಮಹಾಸ್ವಾಮಿಯವರ ಅಪ್ಪಣೆಯಾಗುತ್ತದೆ ಸಚಿವಶಿಖಾಮಣಿಗಳೇ !

ರಾಮಕೃಷ್ಣ : ಇನ್ನೆಲ್ಲಿ ಮಹಾಸ್ವಾಮಿಯವರು ನನಗೆ! ಆ ನಾಟಕವೆಲ್ಲ ಮುಗಿದುಹೋಯಿತು ಆಗಲೇ !

ಕೃಷ್ಣರಾಯ : ಅದೇನು ರಾಮಕೃಷ್ಣ ? ಹೊತ್ತಾಗಿ ಬಂದೆ ಯೆಂದು ಈ ಆಟವನ್ನು ಹೂಡಿದೆಯಾ ?

ರಾಮಕೃಷ್ಣ : [ತಟ್ಟನೆ ಹಿಂದಿರುಗಿ ಮತ್ತೆ ಭಕ್ತಿಭರದಿಂದ ಕೈಮುಗಿದು] ಸಮಸ್ತ ಸನ್ಮಂಗಳಾನಿ ಭವಂತು ! ಮಹಾ ಸ್ವಾಮಿಯವರ ಅಪ್ಪಣೆಯಾಗಬೇಕು. ರಾಮಕೃಷ್ಣನು ಮಹಾಪ್ರಭುಗಳವರ ಸಮ್ಮುಖದಲ್ಲಿ ನಿಂತು, ಸಮಸ್ತ ಸನ್ಮಂಗಳಾನಿ ಭವಂತು ಹೇಳುವುದು ಇದೇ ಕೊನೆಯ ಸಾರಿ !

ಕೃಷ್ಣ : ಸಾಕು ! ಸಾಕು ! ಈ ವಿನೋದ. ಬಾ ಸಂಗೀತ ಕೇಳೋಣ.

ರಾಮು : ಪ್ರಭು ! ವಿನೋದವಲ್ಲ. ಇದು ನಿಜ ! ನನಗಿನ್ನು ಈ ಸಂಗೀತವೇಕೆ ? ಅದೃಷ್ಟವೂ ತಮ್ಮ ಕೃಪೆಯೂ ಇದ್ದರೆ ಸ್ವರ್ಗದ ಅಪ್ಸರೆಯರ ಸಂಗೀತ. ಇಲ್ಲದಿದ್ದರೆ, ಕಣ್ಣೀರು ಕರೆಯುವ ನರಕದ ಪಾಪಿಗಳ ಗೋಳಿನ ಅಪಗೀತೆ.

ಕೃಷ್ಣ : ಹಾಗೆಂದರೇನಯ್ಯಾ ಅದು ?

ರಾಮು : ಪ್ರಭು ! ಕೊನೆಯ ಸಲ ! ಸಾವಧಾನವಾಗಿ ಲಾಲಿಸ ಬೇಕು. ಈ ದಿನ ಕಾಶಿಯಿಂದ ಒಬ್ಬ ಜೋಯಿಸರು ಬಂದರು. ಗ್ರಹಚಾರ ಕಡಿಮೆಯಾಗಿ ಅವರಿಗೆ ನನ್ನ ಜಾತಕ ತೋರಿಸಿದೆ. ಅವರು ಛೀ ! ಈ ನತದೃಷ್ಟನ ಜಾತಕ ನಾನು ನೋಡೋಲ್ಲ ಎಂದು ಕೆಳಕ್ಕೆಸೆದರು.

[ಕೃಷ್ಣದೇವರಾಯ ಮುಖವನ್ನು ಸಿಂಡರಿಸುವನು. ದೇವ ರಾಯನು ಅದರ ಸುಳಿವರಿತು]

ದೇವ : ಚಕ್ರವರ್ತಿಗಳ ಆಪ್ತರೂ ಇಷ್ಟರೂ ಆದ ತಾವು ನತದೃಷ್ಟರೆ ?

ರಾಮು : ಮೊದಲೇ ಕೇಳಿಕೊಂಡೆನಲ್ಲ ಸಾವಧಾನವಾಗಿರಿ ಅಂತ. ನನಗೂ ಆಶ್ಚರ್ಯವೇ ಆಯಿತು. 'ಕರ್ಣಾಟಕ ಸಿಂಹಾ ಸನಾಧೀಶ್ವರರ ಕೃಪಾಛತ್ರದ ನೆರಳೆಲ್ಲ ನನ್ನ ಮೇಲೇ ಬಿದ್ದಿದೆ. ನಾನು ನತದೃಷ್ಟನೆ ?' ಎಂದು ಗದರಿಸಿಯೂ

ಕೇಳಿದೆ. ಅದಕ್ಕಾತನು, "ಕರ್ನಾಟಕದ ಸಿಂಹಾಸನವೇ ನಿನಗಾದರೇನು ? ನಾಳಿನ ಸೂರ್ಯನು ಉದಯಿಸುವ ವೇಳೆಗೆ ರಾಮಕೃಷ್ಣನ ಹೆಸರು ಮಾತ್ರ ಇರುವುದು," ಎಂದನು ಪ್ರಭು !

ಎಲ್ಲರೂ : (ಗಾಬರಿಯಾಗುವರು. ಕೃಷ್ಣರಾಯನು ಇನ್ನೂ ವಿಹ್ವಲನಾಗುವನು.)

ಕೃಷ್ಣ : ಸರಿ.

ರಾಮ : ಅದಕ್ಕಾಗಿ ಪರಲೋಕಕ್ಕೆ ಬುತ್ತಿ ಕಟ್ಟುವ ಯೋಜನೆಯಲ್ಲಿದ್ದೆ ಮಹಾಪ್ರಭು !

ಕೃಷ್ಣ: (ತಟ್ಟನೆದ್ದು ಬಂದು) ರಾಮಕೃಷ್ಣ! ಇದೇನೀ ವಿನೋದ? ಸಾಕು.

ರಾಮ : ಮಹಾಪ್ರಭು ! ವಿನೋದಕ್ಕೂ ಕಾರಣವಿಲ್ಲವೆ? ಅಲ್ಲದೆ ಆ ಜೋಯಿಸ ಒಂದು ಮಾತು ಹೇಳಿದ. ಅದನ್ನು ಮಾತ್ರ ನಂಬಲೇಬೇಕು.

ಕೃಷ್ಣ : ಏನು ?

ರಾಮ : ಆ ಮಹಾಪ್ರಭುವಿನ ಕೃಪಾದೃಷ್ಟಿ ಇಂದಿಗೆ ಮುಗಿಯಿತು ನೋಡಿಕೊ ಎಂದ. ಅದು ನಿಜವಾಯಿತು. ಮಹಾಸ್ವಾಮಿಯವರು ನನ್ನ ಕಡೆ ತಿರುಗಿ ಮಾತನಾಡುವುದಕ್ಕೆ ಇಷ್ಟು ಹೊತ್ತಾಯಿತು.

ಕೃಷ್ಣ : ಹಾಗಾದರೆ ನೀನು ನಿಜವಾಗಿಯೂ...(ಸತ್ತು ಹೋಗುವೆಯಾ ಎಂಬ ಭಾವ) (ಬಾಯ ನೀರು ನುಂಗಿ, ದುಃಖ

ದಿಂದ, 'ಹೌದೇ ಹೌದು' ಎಂಬಂತೆ ತಲೆದೂಗುತ್ತ) ಮಹಾಸ್ವಾಮಿಯವರ ದರ್ಶನಕ್ಕೆ ಇದೇ ಕೊನೆ ! ಎಷ್ಟು ತಪ್ಪು ಮಾಡಿದ್ದರೂ ಮಹಾಪಾದದಲ್ಲಿ ಮನ್ನಣೆಯಾಗ ಬೇಕು. (ಅತಿವಿನಯದಿಂದ ಕೈಮುಗಿಯುವನು.) (ಕೃಷ್ಣ ರಾಯನು ಕಣ್ಣೀರನ್ನು ಒರೆಸಿಕೊಂಡು)

ಕೃಷ್ಣ : ಇಲ್ಲ ! ರಾಮಕೃಷ್ಣ ! ನಮ್ಮನ್ನು ಬಿಟ್ಟು ನೀನು ಹೋಗುವುದೆಂದರೇನು ? ಹೋಗಕೂಡದು.

ರಾಮ : (ಬಹು ಸಂಕಟಪಡುತ್ತ) ಉಪ್ಪಿಟ್ಟು ಕಾಪಾಡಿದ ನಮ್ಮಪ್ಪನ ಸೇವೆ ಬಿಟ್ಟು ಹೋಗಬೇಕೊಂತ ನನಗೆ ತಾನೇ ಆಶೆಯೇ ಪ್ರಭು ! ಆದರೆ ಮಹಾರಾಜರ ಮಿತ್ರನೆಂತ ಮೃತ್ಯು ಬಿಟ್ಟುಕೊಟ್ಟೀತೇ ? ಇಲ್ಲಿ ನೋಡಿ, ಕಣ್ಣೆಲ್ಲ ಬೆಳ್ಳಗಾಗಿದೆ. ಮೂಗು ಚಿಕ್ಕದಾಗಿ ಹೋಗಿದೆ. ಎಷ್ಟು ನೋಡಿದರೂ ಮೂಗಿನ ಕೊನೆಯೇ ಕಾಣಿಸುವುದಿಲ್ಲ. ಅದೇನು ಮುಗಿದ ಹಾಗೆಯೇ ! ಸಂದೇಹವಿಲ್ಲ. ಮಹಾ ಸ್ವಾಮಿಯವರು ಮಂಗಳಮೂರ್ತಿಗಳು ; ಕಣ್ಣೀರು ಹಾಕ ಬಾರದು. ನಚಿಕೇತ ಹೇಳಿದಹಾಗೆ 'ಬಹೂನಾ ಮೇಮಿ ಮಧ್ಯಮಃ' ನನ್ನಂತಹವರು ಎಷ್ಟೋ ಜನರು ಹೋಗು ವರು. ಅದರಲ್ಲಿ ನಾನೂ ಒಬ್ಬ. ಅದಕ್ಕೆ ಮಹಾಸ್ವಾಮಿ ಯವರು ಚಿಂತಿಸಬಾರದು. ಹೋದವರನ್ನು ಮರೆಯ ಬೇಕು. ಇದ್ದವರನ್ನು ನೋಡಬೇಕು. ಬರುವವರನ್ನು ನಿರೀಕ್ಷಿಸಬೇಕು. ಇದು ರಾಜಧರ್ಮ ಪ್ರಭು ! ನಾನು ಹೋದರೆ ಏನು ನಷ್ಟ ? ಮಹಾಪಾದದಲ್ಲಿ ಚಿಂತಿಸ ಕೂಡದು.

ಕೃಷ್ಣ : ಉಂಟೇ ? ರಾಮಕೃಷ್ಣ, ನೀನು ನಮ್ಮ ಪ್ರಾಣಪದಕ (ತಬ್ಬಿಕೊಂಡು ಭುಜದ ಮೇಲೆ ತಲೆಯಿಟ್ಟುಕೊಂಡು ದುಃಖಿಸುವನು)

ರಾಮ : (ಸಣ್ಣನಗೆ ನಕ್ಕು ಮೊದಲಿನಂತೆಯೇ) ಮಹಾಪ್ರಭು! ಇನ್ನು ಅಪ್ಪಣೆಯಾಗಲಿ. ಈ ಕಣ್ಣೀರಿನ ಕೃಷ್ಣಾನದಿ ಯನ್ನು ಈ ಸಂಗೀತ ಸಾಗರದಲ್ಲಿ ಅಡಗಿಸಿ, ತಾವು ಮೊದ ಲಿನಂತೆ ಸಂತೋಷನಿಧಿಗಳಾಗಿರಿ. ನನಗೆ ಕಾಲವು ಬಂತು. ನಾನೂ ಹೋಗುತ್ತೇನೆ...

ಕೃಷ್ಣ : (ದುಃಖವನ್ನು ತಡೆದುಕೊಂಡು) ನಿನ್ನನ್ನು ಹೇಗೆ ಬಿಟ್ಟುಕೊಡುವುದು ರಾಮಕೃಷ್ಣ ?

ರಾಮ : ಹೇಗೇನು ಮಹಾಸ್ವಾಮಿ ? ಯುದ್ಧಕ್ಕೆ ಹೊರಟಿರುವ ದಳವಾಯಿಗಳಿಗೆ ವಿಜಯ ತಾಂಬೂಲ ಕೊಡುವುದಿಲ್ಲವೆ ಹಾಗೆ! ನಾನೇನು ಸಾಮಾನ್ಯನೇ! ಆ ಮೃತ್ಯುವಿನ ಸಂಗಡವೂ ಕೊಂಚ ಚೌಕಾಶಿ ಮಾಡಿ, ಸಾಧ್ಯವಾದರೆ, ಇನ್ನೆರಡು ದಿನ ಬಿಟ್ಟುಕೊಂಡು ಬಾ ಅಂತ ಹೇಳಿಕಳುಹಿ ಸಿದರೂ ಕಳುಹಿಸಿಯೇ ಬಿಡುತ್ತೇನೆ. ಆದರೂ ಜಯಾಪ ಜಯ ಹೇಗೆ ಈಗಲೇ ಹೇಳೋದು ? ಅಲ್ಲದೆ ಜೋಯಿಸ ಬೇರೆ ಹೇಳಿಬಿಟ್ಟಿದ್ದಾನೆ. ಅದೂ ಹೋಗಲಿ ಎಂದರೆ ರಾಜದೃಷ್ಟಿ ಬೇರೆ ಸಂಪೂರ್ಣವಾಗಿ ಬಿದ್ದಿದೆ. ಏನೋ ಇರಲಿ. ನೋಡೋಣ ಪ್ರಭು! ಸದ್ಯಕ್ಕೆ ಅಪ್ಪಣೆ ಯಾಗಲಿ.

ಕೃಷ್ಣ : ಏನು ಹೇಳುವೆ ರಾಮಕೃಷ್ಣ ?

ರಾಮ : ಹೋಗಿಬಾ ಎನ್ನುವುದು, ಚರಮ ತಾಂಬೂಲದ ಜೊತೆಯಲ್ಲಿ– (ಏನನ್ನಾದರೂ ಕೊಟ್ಟು ಎಂದು ಸೂಚಿಸುವನು.)

ಕೃಷ್ಣ : ದೇವರಾಯ ! ರಾಮಕೃಷ್ಣನಿಗೆ ಒಂದು ಸಾವಿರ ಹೊನ್ನು ಕೊಡಿಸು.

ರಾಮ : ಪ್ರಭು ! ದೇವರಾಯರೆ ? ರಾಮಕೃಷ್ಣನ ಪರಲೋಕ ಯಾತ್ರೆಗೆ ಸಂಚಕಾರ ಎಂತ ಬರೆಸಬೇಕು, ಮರೆತೀರಿ,

ಕೃಷ್ಣ : ಸಾಕು. ಬಿಡು. ಈ ಕಾಲದಲ್ಲೂ ವಿನೋದವೇ ರಾಮಕೃಷ್ಣ?

ರಾಮ : ಪ್ರಭು ! ಬದುಕಿದ ಕಾಲದಲ್ಲಿ ನಗುವುದು ಎಲ್ಲರಿಗೂ ಬರುತ್ತದೆ. ಇಂಥ ಕಾಲದಲ್ಲಿ ನಗುವುದಕ್ಕೆ ಎಲ್ಲರಿಗೂ ಸಾಧ್ಯವೆ? (ನಗುವನು)

ಕೃಷ್ಣ : (ನಗುವನು.)

ರಾಮ : ಆಹಾ ! ಈಗ ಗ್ರಹಣ ಬಿಟ್ಟಹಾಗೆ ಆಯಿತು. ಇನ್ನು ನನಗೂ ನಿರಾಳ. ನಮ್ಮಪ್ಪನ ನಗುಮುಖ ಕಂಡೆ, ಸಾಕು. ಇನ್ನು ನಾನು ಹೋಗುತ್ತೇನೆ, ಪ್ರಭು ! ಎಲ್ಲವೂ ಆಯಿತು. ಒಂದು ಕಾಲೂ ಮುಂದೆಯಿಟ್ಟೇ ಬಿಟ್ಟಿದ್ದೇನೆ. ಆದರೂ ಒಂದು ಸಂಕಟ ಮಾತ್ರ ಬಹಳ ಬಾಧಿಸುತ್ತಾ ಇನ್ನೊಂದು ಕಾಲು ಹಿಡಿದು ಎಳೆಯುತ್ತಿದೆ ಪ್ರಭು ! ಮಹಾಸ್ವಾಮಿ ದಯಮಾಡಿ...

ಕೃಷ್ಣ : ಅದೇನು ಹೇಳು ನಡೆಸಿಕೊಡುತ್ತೇನೆ.

ರಾಮು : ಅಷ್ಟೇ ! ಪ್ರಭು ! ನಿಮ್ಮವರು ಮಾಡುವುದೂ ಒಂದೆ! ದೊರೆ ಮಾಡುತ್ತೇನೆ ಎನ್ನುವುದೂ ಒಂದೆ !

ಕೃಷ್ಣ : ಅದೇನು ಹೇಳು ?

ರಾಮು : ಪ್ರಭುವಿನ ಪರಮಾನುಗ್ರಹವು ಈ ಪಾಪಿಯ ಮೇಲೆ ಎಷ್ಟೋ ಸಲ ಸುವರ್ಣವೃಷ್ಟಿಯನ್ನೇ ಕರೆಯಿತು. ನಾನೂ, ಕಾಮಧೇನುವೇ ಕೈಗೆ ಸಿಕ್ಕಿರುವಾಗ, ಹುಳಿ ಮಜ್ಜಿಗೆಗೆ ಅಳುವುದೇಕೆಂದು ಅರಮನೆಯಲ್ಲಿ ಬಂದು ದನ್ನೆಲ್ಲ ದಾರಿಯಲ್ಲಿ ಕೊಟ್ಟುಕೊಂಡು ಮನೆಗೆ ಹೋಗುತ್ತಿದ್ದೆ. ಈ ಹೊತ್ತು ಹೊರಟುಹೋಗಬೇಕಲ್ಲ, ಕೈಹಿಡಿದವಳ ಗತಿಯೇನು ? ಹುಟ್ಟಿದವರ ಹೊಟ್ಟೆಗೆ ಹೇಗೆ ? ಎಂದು ಎಲ್ಲ ಲೆಕ್ಕಾಚಾರ ಮಾಡಿ ನೋಡಿದೆ.

ಕೃಷ್ಣ : ಸರಿ.

ರಾಮು : ಮನೆಯೆಲ್ಲೆಲ್ಲೂ ತುಂಬಿದೆ ಮಹಾಸ್ವಾಮಿ. ಅಂಕಿಗಳೆಲ್ಲ ತಮ್ಮ ಭಂಡಾರಕ್ಕೆ ಬಂದಿವೆ. ಸೊನ್ನೆಗಳೆಲ್ಲ ನಮ್ಮ ಮನೆಯಲ್ಲಿಯೇ ನಿಂತಿವೆ.

ಕೃಷ್ಣ : (ನಗುತ್ತ) ನಿಜವಾಗಿಯೂ ?

ರಾಮು ; ಮಹಾಸ್ವಾಮಿ ಪಾದದಾಣೆ ಸಟೆಯಲ್ಲ ! ನಮ್ಮ ನಗರದ ಶೆಟ್ಟರು ದಾಸರಾಗಿದ್ದಾರಲ್ಲ—ಅವರೊಂದು ಮಾತು ಹೇಳಿದರು. "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ ! ಹರಿಯ ಕರುಣದೊಳಾದ ಭಾಗ್ಯವ ಹರಿ ಸಮರ್ಪಣೆ ಮಾಡಿ ಬದುಕಿರೋ" ಎಂದು.

ನಾನೂ ಹಾಗೆಯೇ ಮಾಡಿದೆ. ರಾಜರು ಕೊಟ್ಟದ್ದನ್ನು ಪ್ರಜೆಗಳಿಗೆ ಕೊಟ್ಟುಬಿಟ್ಟೆ. ಕೆರೆಯ ನೀರು ಕೆರೆಗೇನೋ ಚೆಲ್ಲಿದ್ದೇನೆ ಪ್ರಭು ! ಆದರೆ ವರ ಸಿಕ್ಕಿದೆಯೋ ಇಲ್ಲವೋ ಮುಂದೆ ಹೋಗಿ ನೋಡಿಕೊಳ್ಳಬೇಕು. ಈಗ ಸದ್ಯದಲ್ಲಿ ಮಾತ್ರ ಕಾಳು ತುಂಬಿ ಸುರಿದ ಮೊರವಾಗಿದೆ ಮನೆ. ಅದೊಂದು...

ಕೃಷ್ಣ : (ಒಪ್ಪಿ ತಲೆಯಾಡಿಸುತ್ತಾ) ಅಹುದು. ನೀನು ಅಂತಹ ದಾನಶೂರನೆ ! ಇರಲಿ, ರಾಮಕೃಷ್ಣ ! ಯೋಚಿಸಬೇಡ. ಆ ಭಾರ ನಮಗಿರಲಿ, ನಿನ್ನ ಸಂಸಾರವನ್ನು ನಿರ್ವಹಿಸುವ ಭಾರ ನಮಗಿರಲಿ.

ರಾಮ : ಕೃತಾರ್ಥನಾದೆ. ಏನು ಮಾಡಲಿ ಪ್ರಭು ! ಇಷ್ಟು ಕೋಟಿ ಜನರನ್ನು ರಕ್ಷಿಸುವ ಭಾರ ವಹಿಸಿರುವ ಪ್ರಭು ನನ್ನ ಸಂಸಾರದ ಭಾರ ವಹಿಸಲಾರರೇ ಎಂಬ ಯೋಚನೆ ಈ ಹಾಳು ಮನಸ್ಸಿಗೆ ಬರಲಿಲ್ಲ. ಇಷ್ಟು ಒದ್ದಾಡಿ, ಈ ಸಂಗೀತಗಾರರು ಶ್ರುತಿಯಿಳಿದ ಮದ್ದಳೆಯನ್ನು ಹೊಡೆದೂ ಬಡಿದೂ ನುಡಿಸುವ ಹಾಗೆ, ತಮ್ಮಿಂದ ಈ ಮಾತು ಆಡಿಸಿದ ಮೇಲೆ ಧೈರ್ಯವಾಯಿತು ಮಹಾಪ್ರಭು! ಇನ್ನು ಧೈರ್ಯವಾಗಿ ಮೃತ್ಯುಮುಖ ಸಂಗ್ರಾಮಕ್ಕೆ ಹೊರಡುತ್ತೇನೆ. ವಿಜಯ ವೀಳೆಯ ಅಪ್ಪಣೆಯಾಗಬೇಕು.

ಕೃಷ್ಣ : (ವ್ಯಸನದಿಂದ) ಹೋಗಿಬರುವೆಯಾ ರಾಮಕೃಷ್ಣ ?
[ಪ್ರಹರಿಯು ತಂದುಕೊಟ್ಟ ವೀಳ್ಯವನ್ನು ತೆಗೆದುಕೊಂಡು]

ರಾಮು : ಮಹಾಪ್ರಭು ! ಮರೆತೆಲ್ಲಾದರೂ ತಮ್ಮ ಕಣ್ಣು ನನಗಾಗಿ ನೀರು ಬಿಟ್ಟೀತು ! ಆಮೇಲೆ ನನ್ನ ಮನಸ್ಸು ಇತ್ತ ಕಡೆ ತಿರುಗಿ ಬಿಟ್ಟೀತು ! ಇದ್ದವರನ್ನು ನೋಡಿಕೊಂಡು ಹೋದವರನ್ನು ಮರೆತಿರಬೇಕು ಮಹಾಸ್ವಾಮಿ ! ಮಹಾ ಪಾದದ ಅನ್ನಪ್ರಭಾವ ಹೇಗಿದೆಯೋ ಯಾರು ಬಲ್ಲರು? ಮೃತ್ಯುವಿಗೆ ಎಷ್ಟೋ ಜನರು ಸೋತಿದ್ದಾರೆ ನಿಜ. ಆದರೂ ನಾನೇಕೆ ಗೆಲ್ಲಬಾರದು ? ಭೂಮಿಯಲ್ಲಿ ಎಷ್ಟು ಸನ್ಮಂಗಳಗಳು ಇವೆಯೋ ಆ ಸಮಸ್ತ ಸನ್ಮಂಗಳಾನಿ ಭವಂತು (ಕೈಮುಗಿದು ಹೋಗುವನು.)

ಕೃಷ್ಣ : (ವ್ಯಸನಾಕ್ರಾಂತನಾಗಿ ಹೊರಡುವನು.)

ತಿಮ್ಮ : ಇದೂ ಒಂದು ನಕಲಿಯೇ ಇರಬಹುದು ಮಹಾ ಸ್ವಾಮಿ ! ಸಾಯುವವನು ಹೀಗೆ ಸಂತೋಷವಾಗಿರು ತ್ತಾನೆಯೇ ?

ರಾಮರಾಯ : ರಾಮಕೃಷ್ಣನ ವಿಷಯದಲ್ಲಿ ಹಾಗೆನ್ನಬೇಡ. ಅವನು ತಿಳಿದವನು. ಅವನಿಗೆ ಬಾಳೂ ಸಾವೂ ಎರಡೂ ಒಂದೇ.

ತಿಮ್ಮ : ತಾವು ಸಾವಿರ ಹೇಳಿ. ನಾನು ನಂಬುವುದಿಲ್ಲ. ಇದೊಂದು ನಕಲಿ. ಮಹಾಪಾದದಲ್ಲಿ ಠಕ್ಕುಮಾಡಿ ಹಣ ಹೊಡೆದುಕೊಂಡು ಹೋಗುವುದಕ್ಕೆ ಇದೊಂದು ಆಟ.

ಕೃಷ್ಣ : ಇದು ಆಟವೇ ಆದರೆ ನನಗೂ ಸಂತೋಷ ! ಆದರೆ

(ಉಹು ಆಗಲಾರದು ಎಂದು ನಿರಾಶೆಯನ್ನು ಸೂಚಿಸಿ) ಸಂಗೀತಕ್ಕೆಂದು ಕುಳಿತೆವು ಅಲ್ಲವೆ ?

(ಎಲ್ಲರೂ ಹೋಗುವರು.)

ದೃಶ್ಯ ೨

(ವಿಜಯನಗರದ ಬೀದಿ. ಒಬ್ಬ ಮಹಮ್ಮದೀಯನು ಪ್ರವೇಶಿಸುವನು.)

ಮಹ : ಇದೇನು ಇದು ? ಷಹರೆಲ್ಲ ಗೋಳ್‌ಕರೆ ಆಗೋಗದೆ? ಆ ನಕಲಿ ಮನುಸಾನ ಕಂಡರೆ ಈ ಜನಕ್ಕೆಲ್ಲ ಆಷಾ!. ಅದೂ ಏನ್‌ಹೋಯ್ತೋ? ಹೋಯ್ತೀನಂತ ನಕಲಿ ಕಟ್ಟೈತೋ? ಅರೆ ಇಸ್ಕಿ, ಆ ನಕಲೀ ಹೋಯ್ತು ಅಂದರೆ ನನಗೂ ಬಾಯ್ಗೆ ಮಣ್ಣು ! ಇರಲಿ ! ಇದು ಯಾವುದೋ ಆರುವಯ್ಯ ಬರತಾ ಅದಾದೆ. ಕೇಳ್ತಾದೆ.

ರಾಮಕೃಷ್ಣ : (ಮಾರುವೇಷಗೊಂಡ ಮಗನೊಡನೆ ಮಾರು ವೇಷದಲ್ಲಿ ಪ್ರವೇಶಿಸುವನು)

ಮಹ : ಸೋಮಿ ! ಹಾರುವಯ್ಯ ! ಅ ನಕಲೀ ಅಯ್ಯ ನವರು ಏನಾದರೂ ಸೋಮಿ !

ರಾಮ : ಯಾರಯ್ಯ ?

ಮಹ : ಆ ನಕಲಿ ಅಯ್ಯನವರು ಸೋಮಿ! ಪಾಚ್ಛಾವ್ರು ಪಲ್ಲಕ್ಕಿ ಕೊಟ್ಟಿದ್ರೆ ಬೇಡ ಅಂತ ಬಿಟ್ಟು ಬಿಟ್ರು ಪೈದಲ್ ಆಗಿ ಬರುತ್ತಿತ್ತು. ನೋಡಿ ಆ ದಿವಾನ್ ನಕಲಿ ಅಯ್ಯ! ಅವರದೂ ಏನಾಯಿತು ?

ರಾಮ : ಆ ನಕಲಿ ರಾಮಕೃಷ್ಣನೇನಯ್ಯ ?

ಮಹ : ಹೋ ಹೋ ! ಅದೇ ಅದೇ !

ರಾಮು : ಆತ ಹೋಗಿಬಿಟ್ಟ ಕಣಯ್ಯ !

(ದೇವರಾಯ–ತಿಮ್ಮರಾಯ ಇಬ್ಬರೂ ಮಾರುವೇಷದಲ್ಲಿ ಬರುವರು. ರಾಮಕೃಷ್ಣನು ಅವರನ್ನು ಗುರ್ತಿಸುವನು. ಅವರಿಗೆ ಇವನ ಗುರ್ತು ಸಿಕ್ಕುವುದಿಲ್ಲ.)

ಮಹ : ಹೋಗೇ ಬಿಡ್ತು ಸೋಮಿ.

ರಾಮು : ಹೌದು. ಹೋಗಿಯೇ ಬಿಟ್ಟ,

ಮಹ : ಅದರದೂ ಗೋರಿಯೆಲ್ಲೈತೆ ಸೋಮಿ ? ಜರ್‍ರಾ ಹೇಳಿ, ಹೋಗಿ ಅಲ್ಲಿ ನಮಾಜ್ ಮಾಡಿ ಬರತಾನೆ ನಾನು.

ರಾಮು : ಅದೇನಯ್ಯಾ ! ನಿನಗೆ ಅವನಲ್ಲಿ ಅಷ್ಟು ಸ್ನೇಹ.

ಮಹ : ಅಯ್ಯೋ ! ಸಾಮಿ ! ಅದು ಬಹಳ ಅಕಬರೀ ಜಾತಿ ಸಾಮಿ ! ನಾನು ದಿನಾದಿನಾ ನೋಡುತ್ತಿದ್ದಾದೆ. ದಿನಾ ದಿನಾ ಪಾಂಕಾ ವಖತ್, ಆ ಬಡೇ ದೇವಲ್‌ಗೆ ಹೋಗ್ತಾ ಬರತಾ, ಚಾಂದೀನಾಣ್ಯ ನನ್ನಂತಾ ಫಿದವಿಗಳಿಗೆ ಕೊಡೋದು ಸೋಮಿ. ಪಾಚ್ಛಾ ಹತ್ರ ತರೋದು ನಮ್ಮಂಥಾ ಫಿದವಿ ಜನಕ್ಕೆ ಕೊಡೋದು ಸೋಮಿ. ಅಂಥಾ ಅಕಬರೀ ಜಾತಿ ಇನ್ನು ಹುಟ್ಟೋಕಿಲ್ಲ ಸೋಮಿ !

ರಾಮು : ಅದಕ್ಕೋಸ್ಕರ ನೀನು ಏನು ಮಾಡಬೇಕೆಂದಿರುವೆ ?

ಮಹ : ನಾವು ಗರೀಬಲೋಕ್. ನಮ್ಮದೂ ಏನು ಮಾಡೋಕೆ ಬರ್ತಾದೆ ! ಗಯಾ ಅಂತ ಅಳೋದು, ಅದರದು ಗೋರಿ ಹತ್ತಿರ ಅಲ್ಲಾನ ನಮಾಜ್ ಮಾಡೋದು.

ರಾಮು : ಆತನಿಗೆ ಗೋರಿಯಾಗಲಿಲ್ಲ. ಆತನನ್ನು ಸುಟ್ಟು ಬಿಟ್ಟರಯ್ಯಾ !

ಮಹ : ಅರೇ ಸಚ್‌ಬಾತ್ ! ಆ ನಕಲೀದು ಸಾಮಿ ದಫನ್ ಹೋಗೆಯಾ ! ಅರರೇ ಎಂತ ಕಾಂ ಹೋಗಯಾ ? ಕ್ಯಾ ಸಾಮಿ ! ಲೋಕ್ ! ಜೀವದಸಾ ತಿನ್ನ ಬಾದೂ ಅಂತೀರಿ. ವೈಸಾ ಹದವಿಾಕು ದಫನ್ ಮಾಡ್ತೀರಿ ! ಅರೇ ಅಲ್ಲ ! ಅಲ್ಲಾ ! (ಅತ್ತುಕೊಂಡು ಹೋಗುವನು.)

ದೇವ : ತಿಮ್ಮರಾಯ ! ನೋಡಿದಿರಾ ? ರಾಮಕೃಷ್ಣನು ಸತ್ತಿಲ್ಲ. ಸಾಯಲಿಲ್ಲ.

ರಾಮು : (ಸ್ವಗತ) ನನ್ನ ಗುರುತು ಇವರಿಗೆ ಸಿಕ್ಕಿರಲಾರದಲ್ಲವೆ?

ಶಿವ : ನಿಜ ! ದೇವರಾಯ ! ಬಡವರೂ ಹೀಗೆ ಯಾವನಲ್ಲಿ ಅಭಿಮಾನವಿಟ್ಟುಕೊಂಡು ಅಳುವರೋ, ಆವನು ಸತ್ತಿದ್ದರೂ ಬದುಕಿದ್ದಂತೆಯೇ ಸರಿ. ಆಯಿತು ! ರಾಮ ಕೃಷ್ಣಯ್ಯನ ಮನೆಗೆ ಸವಾರಿ ಹೋಗುವುದು ನಿಜವೇನು ?

ದೇವ : ಆ ತಿಮ್ಮರಾಯನು ಪೆಟ್ಟಿಪೆಟ್ಟಿಗಳಲ್ಲಿ ರತ್ನರಾಶಿಗಳಿವೆ ಯೆಂದು ದುರಾಶೆಯನ್ನು ತೋರಿಸಲು ಸವಾರಿ ಹೋಗದಿರುವುದೆಂತು ?

ಶಿವ : ತಾವು ಹೇಗೆ ಒಪ್ಪಿದಿರಿ?

ದೇವ : ಅರಸರು ಹೇಳಿದುದನ್ನು ಕೇಳಬೇಕು ಅಥವಾ ಅರಮನೆಯ ಹೊರಗಿರಬೇಕು, ಎರಡೂ ಆಗದ

ನಮ್ಮಂತಹವರ ಬಾಳು ಬಲುಗೋಳು, ಹುಂ! ಬಿಡಿ! ಆ ಸುದ್ದಿಯೇಕೆ? ಇನ್ನು ಸವಾರಿ ಹೊರಡುವ ಹೊತ್ತಾಯಿತು ಬನ್ನಿ.

ಶಿವ : ನಾನು ಬರುವುದಿಲ್ಲ. ತಾವೇ ಹೋಗಿ ಬನ್ನಿ. ಆ ದಿಗ್ವಿಜಯದ ಕೀರ್ತಿ ತಮಗೇ ಇರಲೀ (ಎಂದು ಹೋಗುವನು.)

[ರಾಮಕೃಷ್ಣನೂ ಅವನ ಮಗನೂ ಒಬ್ಬರಮುಖಒಬ್ಬರು ನೋಡುತ್ತಾ ಸಾಭಿಪ್ರಿಯವಾಗಿ ನಗುತ್ತ ಹೋಗುವರು.]

ದೃಶ್ಯ ೩

[ತೆನ್ನಾಲಿ ರಾಮಕೃಷ್ಣನ ಮನೆ. ರಾಮಕೃಷ್ಣನ ಮಗ ಗೋಪಾಲಕೃಷ್ಣನು ಕುಳಿತಿರುವನು,]

ಕಟ್ಟಿಗೆಯವನು : ಬುದ್ದೀ! ಬುದ್ಧೀ! ಹುಜೂರು ಸವಾರಿ ದಯಮಾಡಿಸುತ್ತಿದೆ.

ಗೋಪಾಲ : ಸವಾರಿಯೇ?

ಕಟ್ಟಿಗೆ : ಹೌದು ಬುದ್ಧಿ!

ಗೋಪಾಲ : ದುಃಖದುಡುಗೊರೆ ಬಂದಾಯಿತು! ದುಃಖವನ್ನು ವಿಚಾರಿಸಿಯಾಯಿತು. ಇನ್ನೇನಿರಬಹುದು ಕಾರಣ ಈ ಅವಸರದ ಆಗಮನಕ್ಕೆ?

ಕಟ್ಟಿಗೆ : ದೊರೆಚಿತ್ತ ನಮಗೆ ತಿಳೀತದೆಯೋ ಬುದ್ಧಿ ! ದೊಡ್ಡ ಬುದ್ಧಿಯವರು ಇದ್ದಿದ್ದರೆ ಅವರಿಗೆ ಗೊತ್ತಾಗುತ್ತಿತ್ತು. ಇವತ್ತಿಗೆ ಎಷ್ಟು ದಿನವೋ ಬುದ್ಧಿ —

ಗೋಪಾಲ : ೧೫ ದಿನವಾಯಿತು ಗೊಲ್ಲಯ್ಯ? (ಬೀದಿಯಲ್ಲಿ ಪರಾಕಿನ ಸದ್ದಾಗುವುದು.)

ಕಟ್ಟಿಗೆ : ಅಗೋ ಸವಾರಿ ದಯಮಾಡಿಸೇ ಬಿಟ್ಟಿತು.

ಗೋಪಾಲ : ಗೊಲ್ಲಯ್ಯ! ಇಲ್ಲಿಗೆ ಒಬ್ಬನನ್ನು ಕಳುಹಿಸುತ್ತೇನೆ. ದಿಂಬುಗಿಂಬೂ ಸರಿಯಾಗಿ ನೋಡಿಕೋ. (ಜಾಗ್ರತೆಯಾಗಿ ಹೋಗುವನು.)

(ಇನ್ನೊಬ್ಬನು ಬರುವನು. ಇಬ್ಬರೂ ಎಲ್ಲವನ್ನೂ ಸಿದ್ಧ ಪಡಿಸುವರು. ಪರಾಕು ಹೇಳಿಸಿಕೊಳ್ಳುತ್ತ ಕೃಷ್ಣರಾಯನು ದೇವರಾಯ, ತಿಮ್ಮರಾಯನೊಡನೆ ಪ್ರವೇಶಿಸುವನು.)

ದೇವ : ಮಹಾಸ್ವಾಮಿ! ಈ ಕಾರ್ಯವು ಎಲ್ಲಿ ವಿಫಲವಾದೀತೋ ಎಂದು ಶಂಕೆ ?

ತಿಮ್ಮ : ಮಹಾಪಾದದಲ್ಲಿ ಅರಿಕೆಯಿರಬೇಕು. ಬಿಜಾಪುರ, ಬಿದರೆ, ಗೋಲ್ಕಂಡದವರೂ ಕೂಡ ಈ ರಾಮಕೃಷ್ಣನಿಗೆ ಬೇಕಾದ ಹಾಗೆ ಖಿಲ್ಲತ್ತುಗಳನ್ನು ಕೊಟ್ಟಿದ್ದಾರೆ. ಮಹಾ ಪ್ರಭುಗಳಂತೂ ಕರ್ಣನೂ ತೋರದ ಔದಾರ್ಯವನ್ನು ಈ ನಕಲಿಯವನಲ್ಲಿ ತೋರಿಸಿರುವಿರಿ. ಹೀಗಿರುವಾಗ ಅದೆಲ್ಲ ಎಲ್ಲಿ ಹೋಗಿರಬೇಕು ? ಇದ್ದೇ ಇದೆ. ತಮ್ಮ ಸಂಕಲ್ಪ ದಂತೆ ಅವೆಲ್ಲವೂ ಅರಮನೆಗೆ ಸೇರಿದರೆ ತಾನೇ ಯಾರಿಗೇನು

ನಷ್ಟ? ಹೊಳೆಯ ನೀರು ಹೊಳೆಗೇ ಹೋದ ಹಾಗಾಯಿತು. ಅಷ್ಟೇ ತಾನೆ ಪ್ರಭು!

ದೇವ : ಮಹಾಪ್ರಭು! ಅವನಿದ್ದಾಗ ಕೊಟ್ಟುದನ್ನು ಅವನು ಹೋದ ಮೇಲೆ ಕಿತ್ತುಕೊಳ್ಳುವುದು ಚೆಂದವಲ್ಲ.

ತಿಮ್ಮ : ಪ್ರಭುದೇವ! ಸ್ವಾಮಿ ಚಿತ್ತಕ್ಕೆ ವೇದ್ಯವೇ ಉಂಟು. ಚೆಂದ ಚಾರು ನೋಡುತ್ತ ಕುಳಿತರೆ ರಾಜಭಂಡಾರದ ಗತಿಯೇನು?

ದೇವ : ಬುದ್ಧೀ! ತಿಮ್ಮರಾಯರು ಹೇಳುವುದನ್ನೆಲ್ಲ ಒಪ್ಪಿದರೂ ಇವರೇ ಒಂದುವೇಳೆ ಸಂದೇಹಪಟ್ಟಂತೆ, ರಾಮಕೃಷ್ಣನು ಬದುಕಿಯೇ ಇದ್ದು ಮರಳಿಬಂದರೆ ಆಗ —

ತಿಮ್ಮ : ಈ ಬಂದರೆ, ಹೋದರೆ, ಮಾಡಿದರೆ, ಬಿಟ್ಟರೆ! ಈ 'ರೇ ರೇ' ರಾಜ್ಯದಲ್ಲಿ ತಿರುಗುವುದಕ್ಕೆ ಆರಂಭಿಸಿದರೆ ಮೊದಲೂ ಇಲ್ಲ ಕೊನೆಯೂ ಇಲ್ಲ. ಹಾಗೆಒಂದು ವೇಳೆ ಬಂದರೆ, ನಾವು ತೆಗೆದುಕೊಂಡಿರುವ ಎರಡರಷ್ಟು ಕೊಡೋಣ.

ದೇವ : ಹಾಗಾದರೆ ನನ್ನ ಅಭ್ಯಂತರವೇನೂ ಇಲ್ಲ.

ಕೃಷ್ಣ : ಅಲ್ಲದೆ, ಇಟ್ಟ ಹೆಜ್ಜೆ ತೆಗೆಯಬಾರದು ದೇವಣ್ಣ!

ದೇವ : ಚಿತ್ತ!

ಕೃಷ್ಣ : (ಬಂದು ಕುಳಿತುಕೊಳ್ಳುವನು.)

(ಗೋಪಾಲಕೃಷ್ಣನು ಒಳಗಿನಿಂದಲೇ "ಸಮಸ್ತ ಸನ್ಮಂಗಳಾನಿ ಭವಂತು" ಎಂದು ಹರಸುವನು.)

ತಿಮ್ಮ : ಸವಾರಿ ದಯಮಾಡಿಸಿದೆ. ಗೋಪಾಲಕೃಷ್ಣಯ್ಯನವರೇ!

ಗೋಪಾಲ : ಮಹಾಪಾದ ದಯಮಾಡಿಸಲಾಗಿ ಮನೆಯೆಲ್ಲ ಪವಿತ್ರವಾಯಿತು.

ತಿಮ್ಮ : ತಮ್ಮ ತೀರ್ಥರೂಪುಗಳವರ ಮೇಲೆ ಮಹಾಸ್ವಾಮಿಯವರಿಗೆ ಹಿರಿದಾದ ಅಭಿಮಾನ!

ಗೋಪಾಲ : ಅದಕ್ಕಾಗಿ ಅವರು ಮಾತ್ರವೇ ಅಲ್ಲ. ನಮ್ಮ ಕುಲಕೋಟಿಯೇ ಕೃತಜ್ಞರಾಗಿದ್ದೇವೆ.

ತಿಮ್ಮ : ತಮ್ಮ ಹಿರಿಯರು ಚೆನ್ನಾಗಿ ಬಾಳಿದವರು!

ಗೋಪಾಲ : ಎಲ್ಲ ಇಲ್ಲಿಯ ಕೃಪೆ.

ತಿಮ್ಮ : ರಾಜಾಧಿರಾಜರಿಂದ ಖಿಲ್ಲತ್ತುಗಳನ್ನು ಪಡೆದವರು.

ಗೋಪಾಲ : ಕರ್ಣಾಟಕ ಸಿಂಹಾಸನಾಧೀಶ್ವರರ ಆಶ್ರಯದ ಪ್ರಭಾವ !

ತಿಮ್ಮ : ಅರಮನೆಗೊಂದು ಸುದ್ದಿ ಬಂದಿದೆ.

ಗೋಪಾಲ : ಸರಿ.

ತಿಮ್ಮ : ತಮ್ಮ ಮನೆಯಲ್ಲಿ ರತ್ನಗಳು ಪೆಟ್ಟಿಪೆಟ್ಟಿಯಲ್ಲಿ ತುಂಬಿವೆಯಂತೆ !

ಗೋಪಾಲ : ಆ ವಿಚಾರ ನನಗಿಂತಲೂ ಸುದ್ದಿಗಾರನಿಗೆ ಚೆನ್ನಾಗಿ ಗೊತ್ತು ಮಹಾಪ್ರಭು !

ತಿಮ್ಮ : ಅದು ನಿಜವೆನ್ನುವುದಕ್ಕೆ ಹೆಚ್ಚು ಆಧಾರಗಳಿದ್ದರೆ ?

ಗೋಪಾಲ : ಪರೀಕ್ಷಿಸಿಯೇ ಗೊತ್ತುಮಾಡಬೇಕು.

ತಿಮ್ಮ : ಅದಕ್ಕಾಗಿಯೇ ಮಹಾಸ್ವಾಮಿಯವರ ಸವಾರಿ ಇಲ್ಲಿಗೆ ಬಿಜಯಮಾಡಿಸಿದುದು.

ಗೋಪಾಲ : ನಾನೂ ಸಿದ್ಧನಾಗಿಯೇ ಇದ್ದೇನೆ. ಇಗೋ ಬಂದೆ. (ಹೋಗಿ ಬಂದು) ಇದೋ. ನಮ್ಮ ತಂದೆ ಬಿಟ್ಟು ಹೋಗಿರುವ ಪೆಟ್ಟಿಗಳ ಬೀಗದ ಕೈಗಳು. (ಗೊಂಚಲನ್ನು ಒಪ್ಪಿಸಿ) ಆದರೆ ಮಹಾಪಾದದಲ್ಲಿ ಒಂದು ಅರಿಕೆ. ಇವರು ಬೀಗವನ್ನು ತೆರೆಯಲಿ, ಪೆಟ್ಟಿಯ ಬಾಗಿಲನ್ನು ಮಾತ್ರ ಸವಾರಿಯ ಶುಭಹಸ್ತದಿಂದ ತೆಗೆಯೋಣವಾಗಬೇಕು.

ಕೃಷ್ಣ : (ಕಟ್ಟಿಗೆಯವನಿಗೆ ಹೇಳಿ ಪೆಟ್ಟಿಗಳನ್ನು ತರಿಸುವನು.)

ತಿಮ್ಮ : (ಬೀಗದ ಕೈಗಳ ಗೊಂಚಲನ್ನು ಕಂಡು ರತ್ನರಾಶಿಯನ್ನೇ ಕಂಡಂತೆ ಹಿಗ್ಗುತ್ತಿರುವನು. ಕೆಲವು ಪೆಟ್ಟಿಗಳನ್ನು ತಂದು ಇಡುವರು. ಮತ್ತೊಂದು ಪೆಟ್ಟಿಯನ್ನು ತಂದಿಡುವಾಗ ಬಹಳ ಭಾರವೆಂದು ಕಾಣುವುದು.)

ಗೋಪಾಲ : ಪರೀಕ್ಷಿಸಬಹುದು ಪ್ರಭು !

ತಿಮ್ಮ : (ಬೀಗದ ಕೈಯ್ಯ ಗೊಂಚಲನ್ನು ಕೊಟ್ಟು) ತೆಗೆದುಕೊಳ್ಳಿ ಗೋಪಾಲಕೃಷ್ಣಯ್ಯನವರೇ !

ಗೋಪಾಲ : ಪ್ರಭು! ಚೆನ್ನಾಗಿ ಅಪ್ಪಣೆಯಾಯಿತು. ಬ್ರಾಹ್ಮಣರಿಗೆ ದಗ್ಧಹಸ್ತವಂತೆ! ನಮ್ಮ ಕೈಸೋಂಕಿ ಅಲ್ಲಿರುವುದೆಲ್ಲ ಇನ್ನೇನಾದರೂ ಆಗಿಹೋದೀತು ! ನನ್ನ ಅರಿಕೆಯಂತೆ ಪ್ರಭುಗಳವರು ಬೀಗವನ್ನು ತೆಗೆದು ಮಹಾಪಾದದ ಶುಭ ಹಸ್ತದಿಂದಲೇ ಪೆಟ್ಟಿಗೆ ಬಾಗಿಲನ್ನು ತೆಗೆಸೋಣವಾಗಬೇಕು.

ತಿಮ್ಮ : ಆಗಲಿ.

ಗೋಪಾಲ : ಈ ಪೆಟ್ಟಿಯನ್ನು ಕೊನೆಯಲ್ಲಿ ತೆಗೆಸೋಣವಾಗಬೇಕು.

ಕೃಷ್ಣ : (ಸಂಶಯುವನ್ನು ಸೂಚಿಸುವನು.)

ತಿಮ್ಮ : (ಅವನರ್ಥವನ್ನು ಗ್ರಹಿಸಿ, ಅದನ್ನೇ ಮೊದಲು ತೆಗೆಯುವನು. ಕೃಷ್ಣರಾಯನು ಠೀವಿಯಿಂದ ಹೋಗಿ ಬಾಗಿಲನ್ನು ಎತ್ತುವನು. ಒಳಗಿನಿಂದ ರಾಮಕೃಷ್ಣನು ಪುಟನೆಗೆದೇಳುವನು. ಎಲ್ಲರೂ ಭ್ರಾಂತರಾಗುವರು.)

ರಾಮ : (ಗೆದ್ದುಬಂದವನಂತೆ ಹಾರಾಡುತ್ತಾ) ಯಾರೋ ಅದು ? ಹೊಡೆಯಿರೋ ಜಯಭೇರಿಗಳನ್ನು ! ಹೋ ! ಮೊಳಗಲಿ ವಾದ್ಯಗಳು ! ರಾಮಕೃಷ್ಣನು ಮೃತ್ಯುವನ್ನೂ ಗೆದ್ದುಬಂದನೆಂದು ಮಹಾಸ್ವಾಮಿಯುವರಿಗ ವಿಜ್ಞಾಪಿಸಿರೋ !

ಕೃಷ್ಣ : (ಒಂದು ಗಳಿಗೆಯಾದ ಮೇಲೆ) ರಾಮಕೃಷ್ಣ ಇದೇನಿದು ?

ರಾಮು : ಓಹೋ ! ನಾನು ಬಂದ ಸಮಾಚಾರ ಮಹಾಸ್ವಾಮಿ ಯವರಿಗೆ ಆಗಲೇ ತಿಳಿದು ಬಿಟ್ಟಿದೆ ! ಮಹಾಸ್ವಾಮಿಗೆ ಜಯವಾಗಲಿ ? ಸನ್ನಿಧಾನದ ಅನ್ನಪ್ರಭಾವ, ಮೃತ್ಯು ವನ್ನೂ ಗೆದ್ದಿತು ಮಹಾಪ್ರಭು !

ಕೃಷ್ಣ : (ತಿಮ್ಮರಾಯನ ಮುಖವನ್ನು ನೋಡುವನು. ಅವನು ಮುಖವನ್ನು ಮುಚ್ಚಿಕೊಳ್ಳುವನು. ದೇವರಾಯನು ಮುಂದೆ ಬಂದು)

ದೇವ : ಮಹಾಸ್ವಾಮಿ! ಈತನು ವಿದೂಷಕನು ನಿಜ. ಆದರೂ ಈ ಸಲದ ವಿನೋದವು ಎಲ್ಲ ಮರ್ಯಾದೆಗಳ ಮೇರೆ ಯನ್ನೂ ಮೀರಿಹೋಯಿತು. ಇದು ಹಾಸ್ಯವಲ್ಲ, ಅಪ ಹಾಸ್ಯ ! ಈ ಧೂರ್ತತನಕ್ಕೆ ತಕ್ಕ ಶಿಕ್ಷೆಯಾಗಬೇಕು.

ರಾಮು : ಹೌದೇ ಮಹಾಸ್ವಾಮಿ ! ಮಹಾಪಾದದಿಂದ ಅನು ಗ್ರಹೀತನಾದ ಸಚಿವ ಸ್ಥಾನದಲ್ಲಿ ನಿಂತು ಅರಿಕೆಮಾಡು ತ್ತೇನೆ. ಅಪರಾಧಿಗೆ ಅಪಾರವಾದ ಶಿಕ್ಷಯಾಗಬೇಕು.

ಕೃಷ್ಣ : ಇನ್ನು ಆ ಪೆಟ್ಟಿಗೆಗಳಲ್ಲಿ ಏನು ತುಂಬಿದ್ದೀಯೆ ?

ರಾಮು : ಅವುಗಳಲ್ಲೆಲ್ಲಾ ರತ್ನಗಳು ತುಂಬಿವೆ. (ಮಗನನ್ನು ಕರೆದು) ತೆಗೆದು ತೋರಿಸು.

ಗೋಪಾಲ : (ತೆಗೆಯುವನು. ಓಲೆಗರಿಯ ಪುಸ್ತಕಗಳು ತುಂಬಿ ರುವುವು.)

ಕೃಷ್ಣ : ತಿಮ್ಮಣ್ಣ! ನೀನು ಹೇಳಿದುದು ನಿಜ. ರಾಮಕೃಷ್ಣನ

ಮನೆಯಲ್ಲಿರುವ ಪೆಟ್ಟಿಗೆಗಳಲ್ಲೆಲ್ಲ ಜೀವರತ್ನಗಳೇ ತುಂಬಿವೆ. ಈ ಪೆಟ್ಟಿಗೆಗಳಲ್ಲಿ ತುಂಬಿರುವುವು ಗ್ರಂಥರತ್ನಗಳು! ಈ ಪೆಟ್ಟಿಗೆಯಲ್ಲಿದ್ದುದು ನಮ್ಮ ಮಿತ್ರರತ್ನ! ಕಳೆದುಹೋಗಿದ್ದ ಮಿತ್ರರತ್ನವನ್ನು ಸಂಪಾದಿಸಿಕೊಟ್ಟುದಕ್ಕಾಗಿ ನಿನಗೆ ನಾವು ಕೃತಜ್ಞರಾಗಿದ್ದೇವೆ. ರಾಮಕೃಷ್ಣ! ದೇವಣ್ಣನು ಹೇಳಿದಂತೆ ನಿನ್ನ ಧೂರ್ತತನವು ಮಿತಿಮೀರಿತು. ನಿನಗೆ ಶಿಕ್ಷೆಯನ್ನು ವಿಧಿಸುವೆನು. ಇತ್ತ ಬಾ!

ರಾಮ : ಅಪ್ಪಣೆ (ಬರುವನು.)

ಕೃಷ್ಣ : (ಕಂಠಹಾರವನ್ನು ತೆಗೆದು ಕುತ್ತಿಗೆಗೆ ಹಾಕಿ) ನಮ್ಮ ದುರಾಶೆಯ ಸ್ವರೂಪವನ್ನು ನಮಗೆ ತೋರಿಸಿಕೊಟ್ಟ ಮಹಾಪರಾಧಕ್ಕೆ ಈ ಸರಪಳಿಯನ್ನು ಹೊತ್ತಿರು. ಇನ್ನು ಮುಂದೆ, ನಮ್ಮ ಬಳಿಗೆ ಬಂದಾಗಲೆಲ್ಲ ಈ ಸರಪಳಿ ನಿನ್ನ ಕತ್ತಿನಲ್ಲಿ ಇರಲೇಬೇಕು.

ರಾಮ : ಪ್ರಭು! ಇದು ನಿಜವಾಗಿಯೂ ಶಿಕ್ಷೆಯೇ ಆಯಿತು. ನಾನು ಒಂದು ಗಳಿಗೆಯಾದರೂ ತಮ್ಮನ್ನು ಮರೆತು, ತಮಗಿಂತ ದೊಡ್ಡವನೊಬ್ಬನಿರುವನು ಎಂಬುದನ್ನು ನೆನೆದುಕೊಳ್ಳುತ್ತಿದ್ದೆ. ಈ ಸರವನ್ನು ಕತ್ತಿಗೆ ಹಾಕಿ ಮೂರು ಹೊತ್ತೂ ತಮ್ಮ ನೆನಪೇ ಉಳಿಯುವಂತೆ ಮಾಡಿದಿರಿ: ಇನ್ನಿದಕ್ಕಿಂತಲೂ ಶಿಕ್ಷೆ ಬೇಕೆ ? (ಕಣ್ಣೀರು ಸುರಿಸುವನು.)

ಕೃಷ್ಣ : ರಾಮಕೃಷ್ಣ! ನಿನಗೆ ನಾನು ಹೇಳಬೇಕೆ? ವಿರೂಪಾಕ್ಷನು

ನನಗೆ ವಿಧಿಸಿರುವ ಈ ನರಪತಿತ್ವದ ಶಿಕ್ಷೆಗಿಂತಲೂ ನಿನ್ನ ಶಿಕ್ಷೆಯೇ ? ಬಾ ! ಕೆಟ್ಟುದರಲ್ಲಿ ಮಧ್ಯಸ್ಥ ಮಾಡೋಣ. ತಿಮ್ಮಣ್ಣ ! ನೀನು ಈ ಜೀವರತ್ನಗಳಲ್ಲಿ ನೂರು ತೆಗೆದುಕೋ. ಅದರ ತೂಕ ಜಡರತ್ನಗಳನ್ನು ಗೋಪಾಲ ಕೃಷ್ಣಯ್ಯಸಿಗೆ ಕೊಡು. ರತ್ನದ ಪೆಟ್ಟಿಬಾಗಿಲು ತೆಗೆದವನಲ್ಲವೆ ನೀಸು ?

(ಎಲ್ಲರೂ ಹೋಗುವರು.)

॥ ಮಂಗಳಂ ॥

ಮುಖಪುಟ ಚಿತ್ರ: ಕೃಷ್ಣ ಪೋತದಾರ್

ಮುದ್ರಣ: ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಶರ್ಸ್ (ಪ್ರೈ.) ಲಿ. ಬೆಂಗಳೂರು – 560 004